
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 26, 2010 ರೂ. 12/-


ಶೃಂಗೇರಿ ಮಠದ ಗೂಳಿ ಪ್ರಕರಣ



ಾಸಕ
ತಗಡು
ಿವಣ್ಣನ
ಗೂಂಡಾಗಿರಿ!




ಶ್ರೀರಾಂಪುರ ಪಳನಿ ಹತ್ಯೆಯ ಹಿಂದೆ ಕೌನ್ಸಿಲರ್?




ರೆಡ್ಡಿ ಹೇಳಿದ ಐದು ಸುಳ್ಳುಗಳು

ಯುಂ'ವರ'ನನ್ನು ಂಚಿಸಿದ 'ವಧು'!





'ಸೂಪರ್' ಹುಚ್ಚಾಟ



ದೇಶಪಾಂಡೆಗೆ ಗೇಟ್‌ಪಾಸ್ ಎಂದು?

ಲೋಹಿಯಾವಾದಿಗಳಿಗೊಂದು ಪತ್ರ

ಶವಪರೀಕ್ಷೆ ಬೇಡ- ಆತ್ಮವಿಮರ್ಶೆಯೂ ಬೇಡವೇ?


2009ರ ಮಾರ್ಚ್ 23ರಿಂದ ರಾಜ್ಯದೆಲ್ಲೆಡೆ ಈ ದೇಶದ ಅತ್ಯಂತ ಪ್ರಮುಖ ಸಾಮಾಜಿಕ ಚಿಂತಕ, ರಾಜಕೀಯ ಮುತ್ಸದ್ದಿ ರಾಮಮನೋಹರ ಲೋಹಿಯಾರವರ ಜನ್ಮ ಶತಾಬ್ಧಿ ಆಚರಣೆಯು ನಡೆಯುತ್ತಿದೆ. ಲೋಹಿಯಾರ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಚಿಂತನೆಗಳನ್ನು ಯುವಜನಾಂಗಕ್ಕೆ ಪರಿಚಯಿಸುವ ಲೇಖನ, ಕಿರುಪುಸ್ತಿಕೆಗಳ ಪ್ರಕಟಣೆಯಿಂದ ಹಿಡಿದು ಮೊನ್ನೆ ಮೇ-2ರ ಭಾನುವಾರ ನಡೆದ ಬೃಹತ್ ಸಮಾರಂಭದತನಕ ಹಲವು ಕಾರ್ಯಕ್ರಮಗಳು ನಡೆಯುತ್ತಿವೆ. ಹಿಂದೂತ್ವದ ದಾಳಿ, ಕಾರ್ಪೊರೇಟ್ ಜಾಗತೀಕರಣದ ಆಕ್ರಮಣದಿಂದಾಗಿ ಸಮಾಜವಾದವೆಂಬ ಪರಿಕಲ್ಪನೆಯೇ ಅಪಹಾಸ್ಯಕ್ಕೀಡಾಗುತ್ತಿರುವ ಸಂದರ್ಭದಲ್ಲಿ ಯಾವುದೇ ಬಗೆಯ ಸಮಾಜವಾದೀ ಚಿಂತನೆಯ ಕಾರ್ಯಕ್ರಮಗಳು ನಡೆಯುವುದೂ, ಹಿಂದೂತ್ವದ ಬ್ರಾಹ್ಮಣ್ಯವನ್ನೂ ಮತ್ತು ಜಾಗತೀಕರಣದ ಮಾರುಕಟ್ಟೆ ಮೂಲಭೂತವಾದವನ್ನು ವಿರೋಧಿಸುವುದು ಸ್ವಾಗತಾರ್ಹ ಸಂಗತಿಯೇ!

ಆದರೆ ಸಮಾಜವಾದ, ಮಾರ್ಕ್ಸ್‌ವಾದ, ಸಮತಾವಾದದಂಥ ಚಿಂತನೆಗಳು ಕೇವಲ ಒಬ್ಬ ಚಿಂತಕನ ಪ್ರತಿಕ್ರಿಯೆಗಳಲ್ಲ. ನಿರಂತರ ಸಾಮಾಜಿಕ ಪ್ರಯೋಗಕ್ಕೆ ಒಳಪಟ್ಟು ವರ್ತಮಾನಕ್ಕೂ ಮತ್ತು ಭವಿಷ್ಯಕ್ಕೂ ಮಾರ್ಗದರ್ಶನ ಮಾಡಬಲ್ಲ ಸಾಮಾಜಿಕ ಮತ್ತು ರಾಜಕೀಯ ಸಿದ್ಧಾಂತಗಳು. ಸೋಲು ಮತ್ತು ಗೆಲವುಗಳು ತಂದುಕೊಟ್ಟ ವಿವೇಕದ ಸಹಾಯದಿಂದ ಸದಾ ಪರಿಷ್ಕರಣೆಯಾಗುತ್ತಾ ಬಂದ ಜೀವಂತ ತತ್ವ ಪ್ರಣಾಳಿಗಳು, ಪರ್ಯಾಯ ನಾಗರಿಕತೆಯ ದರ್ಶನಗಳು. ಒಂದುಕಡೆ ಪ್ರಯೋಗಗಳಿಂದ ಸಿದ್ಧವಾದ ಶಾಶ್ವತ ಸತ್ವಗಳನ್ನು ಕ್ರೂಢೀಕರಣ ಮಾಡಿಕೊಳ್ಳುತ್ತಲೇ ಮತ್ತೊಂದೆಡೆ ವರ್ತಮಾನಕ್ಕೆ ಮುಖಾಮುಖಿಯಾಗುತ್ತಾ ನಿರಂತರ ಚಲನಶೀಲತೆಯನ್ನು ಹೊಂದಿರುವುದೇ ಈ ಸಿದ್ಧಾಂತಗಳ ಕ್ರಾಂತಿಕಾರಿ ಸತ್ವ ಅಥವಾ ಒಂದು ಸಿದ್ಧಾಂತ ಈ ಕಾಲಕ್ಕೂ- ಸದಾ ಕಾಲಕ್ಕೂ ಕ್ರಾಂತಿಕಾರಿಯಾಗಿಯೇ ಉಳಿಯಬೇಕೆಂದರೆ ಅದು ಈ ನಿರಂತರತೆ (ಕಂಟಿನ್ಯುಟಿ)ಯನ್ನೂ ಮತ್ತು ಬದಲಾವಣೆ (ಚೇಂಜ್)ಅನ್ನು ಏಕಕಾಲದಲ್ಲಿ ಹೊಂದಿರಬೇಕಾಗುತ್ತದೆ. ಹಳೆಯದರ ನಿರಂತರತೆಯನ್ನು ಮಾತ್ರ ಹೊಂದಿದ್ದು ವರ್ತಮಾನ ಕೋರುವ ಬದಲಾವಣೆ ಇಲ್ಲವಾದರೆ ಸೈದ್ಧಾಂತಿಕ ಮೂಲಭೂತವಾದಕ್ಕೆ ಕಾರಣವಾಗುತ್ತದೆ. ಹಳೆಯ ಅನುಭವ ಮತ್ತು ಸಿದ್ಧ ಸತ್ಯಗಳನ್ನು ತಿರಸ್ಕರಿಸಿ ಕೇವಲ ಬದಲಾವಣೆಯನ್ನು ಮಾತ್ರ ಅಪ್ಪಿಕೊಂಡರೆ ಅದು ವರ್ತಮಾನದೊಂದಿಗೆ ರಾಜಿಗೆ ಕಾರಣವಾಗುತ್ತದೆ.



ಇಂದು ಸಮಾಜವಾದಿ ರಾಜಕಾರಣದಲ್ಲೂ ಸೈದ್ಧಾಂತಿಕ ಮೂಲಭೂತವಾದೀತನ ಮತ್ತು 'ರಾಜಿ'ಕಾರಣ ಎರಡೂ ಸಂಭವಿಸುತ್ತಿದೆ. ಮಾರ್ಕ್ಸ್‌ವಾದಿ ಸಮಾಜವಾದಿಗಳ ಬಗ್ಗೆ ಈ ದೇಶದ ಸಮಾಜವಾದಿಗಳು ಅದರಲ್ಲೂ ಲೋಹಿಯಾವಾದಿಗಳು ಸಕಾರಣವಾಗಿ ಮಾಡುವ ವಿಮರ್ಶೆ ಮೊದಲನೇ ವರ್ಗಕ್ಕೆ ಸೇರಿದ್ದು. ಅಂದರೆ ಈ ದೇಶದ ಕಮ್ಯುನಿಸ್ಟರು ವರ್ತಮಾನದ ಸವಾಲುಗಳಿಗೂ ತೆರೆದುಕೊಂಡಿಲ್ಲ ಮತ್ತು ಈ ದೇಶದ ಸ್ಥಳೀಯ ಸವಾಲುಗಳನ್ನೂ ಅರ್ಥಮಾಡಿಕೊಂಡಿಲ್ಲ ಎಂಬುದು. ಭಾರತದಲ್ಲಿ ನಿಜಕ್ಕೂ ಕ್ರಾಂತಿ ಮಾಡಬೇಕು ಎಂಬ ನಿಶ್ಚಲ ನಿಷ್ಠೆಯುಳ್ಳ ಯಾವ ನೈಜ ಕಮ್ಯುನಿಸ್ಟನಿಗೂ ಈ ವಿಮರ್ಶೆಯ ಬಗ್ಗೆ ತಕಾರಾರಿರಬೇಕಿಲ್ಲ. 80 ವರ್ಷಗಳ ವಿವಿಧ ಬಗೆಯ ಕಮ್ಯುನಿಸ್ಟ್ ಚರಿತ್ರೆ ಅದರ ಪ್ರಶ್ನೆಯನ್ನು ಮುಖಕ್ಕೆ ರಾಚುವಂತೆ ಒಗೆಯುತ್ತಿದೆ. ಒಂದು ಕ್ರಾಂತಿಕಾರಿ ರಾಜಕೀಯ ಸಂಸ್ಕೃತಿ ಯೆಂದರೆ ನಿರ್ಭಿಡ ಆತ್ಮವಿಮರ್ಶೆ. ಕ್ರಾಂತಿಯೇ ಪರಮ ಗುರಿಯಾದ ಯಾರಿಗೂ ತಮ್ಮ ತಪ್ಪುಗಳನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲಾಗಲೀ, ಬದಲಾಯಿಸಿಕೊಳ್ಳಲಾಗಲೀ ಅಡ್ಡಿಯಿರಬೇಕಿಲ್ಲ.

ಆದರೆ ಅದು ಹೇಳಿದಷ್ಟು ಸುಲಭವಲ್ಲ. ಹಾಗೆಯೇ



ಡಾ॥ ಲೋಹಿಯಾರೊಂದಿಗೆ ಗೌಡರು ಮತ್ತು ಜೆ.ಹೆಚ್. ಪಟೇಲ್

ಮಾರ್ಕ್ಸ್‌ವಾದ ಬೆಳೆದೇ ಇಲ್ಲವೆನ್ನುವ ಲೋಹಿಯಾವಾದಿಗಳ ವಿಮರ್ಶೆಯೂ ಸಂಪೂರ್ಣ ಸರಿಯಲ್ಲ. ಮೊದಲನೆಯದಾಗಿ ಹೊರಗಿನ ಶತ್ರುಗಳನ್ನು ಎದುರಿಸಿದಷ್ಟು ಸುಲಭವಾಗಿ ತಮ್ಮೊಳಗಿನ, ಅದಕ್ಕಿಂತಲೂ ಹೆಚ್ಚಾಗಿ ತನ್ನೊಳಗಿನ ಶತ್ರುಗಳ ವಿರುದ್ಧ ಯುದ್ಧ ನಡೆಸುವುದು ಅಷ್ಟು ಸುಲಭವಲ್ಲ. ಇಲ್ಲದಿದ್ದರೆ ಹೊರಗಿನ ಬಂಡವಾಳಶಾಹಿಯನ್ನು ಸೋಲಿಸಿ ಕ್ರಾಂತಿ ಮಾಡಿದ ರಷ್ಯಾ, ಚೀನಗಳು ನಂತರ ತಮ್ಮ ಪಕ್ಷದಲ್ಲಿ ಮತ್ತು ಸಮಾಜದಲ್ಲಿ ಹುಟ್ಟಿಕೊಂಡ ಬಂಡವಾಳಶಾಹಿಗಳನ್ನು ಗುರುತಿಸಲು ಮತ್ತು ಸೋಲಿಸಲು ವಿಫಲವಾಗುತ್ತಿರಲಿಲ್ಲ.

ಸಮಾಜವಾದಿ ಕ್ರಾಂತಿಯ ನಂತರವೂ ಬಂಡವಾಳಶಾಹಿ ಜನಿಸಲು ಚೀನಾದಲ್ಲಿ ಇರಬಹುದಾದ ಹತ್ತು ವ್ಯವಸ್ಥಾತ್ಮಕ ಕಾರಣಗಳನ್ನು ಮಾವೋ ಪಟ್ಟಿ ಮಾಡುತ್ತಾರೆ. ಹಾಗೆಯೇ ಹೊಸ ಮನುಷ್ಯನನ್ನು ಸೃಷ್ಟಿ ಮಾಡಲು ಕ್ರಾಂತಿಯ ನಂತರವೂ ನಿರಂತರ ಕ್ರಾಂತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿ ಮಾರ್ಕ್ಸ್‌ವಾದವನ್ನು ಮತ್ತಷ್ಟು ಬೆಳೆಸುತ್ತಾರೆ. ಇದು ಸಾಧ್ಯವಾದದ್ದು ಜಂಗಮತನವನ್ನು ಕಳೆದುಕೊಂಡು



ಸ್ಥಾವರವಾಗಿಬಿಟ್ಟಿದ್ದ ಸ್ಥಾಪಿತ ಮಾರ್ಕ್ಸ್‌ವಾದವನ್ನು ಮಾವೋ ಚೀನಾದಲ್ಲಿನ ತಮ್ಮ ಆಚರಣೆಯ ಮೂಲಕ ನಿರ್ದಾಕ್ಷಿಣ್ಯವಾಗಿ ಪೋಸ್ಟ್ ಮಾರ್ಟೆಮ್-ಶವ ಪರೀಕ್ಷೆ ಮಾಡಿದ್ದರಿಂದ. ಇದರ ರಾಜಕೀಯ ಮತ್ತು ಸಾಮಾಜಿಕ ಬೇರುಗಳನ್ನು ಹೊಡೆದುಹಾಕಲೆಂದು ಮಾವೋ 1967ರಲ್ಲಿ "ಸಾಂಸ್ಕೃತಿಕ ಕ್ರಾಂತಿ"ಯನ್ನು ಪ್ರಾರಂಭಿಸಿದ್ದು. "Bombard The Head Quarters"- "ಪಕ್ಷದಲ್ಲಿ ಮತ್ತು ಸರ್ಕಾರದಲ್ಲಿ ಇಂಥಾ ನವಬಂಡವಾಳವಾದದ ಹುಟ್ಟಿಗೆ ಕಾರಣರಾದ ನೇತಾರರ ಕಚೇರಿಯ ಮೇಲೇ ಯುದ್ಧ ಹೂಡಿ"- ಎಂದು ಘೋಷಿಸಿದ್ದು. ತಮ್ಮ "ತಲೆ"ಗಳ ವಿರುದ್ಧ ತಾವೇ ಯುದ್ಧ ಸಾರಬೇಕೆಂದು ಕರೆಕೊಟ್ಟಿದ್ದು. ಆದರೆ ಅದೂ ಅತಿರೇಕಕ್ಕೆ ಹೋದದ್ದೂ ಮತ್ತು ಅಂತಿಮವಾಗಿ ವಿಫಲವಾದದ್ದೂ ಈಗ ಇತಿಹಾಸ.

ನೈಜ ಸಮಾಜವಾದವು ಕೇವಲ ಉತ್ಪಾದನಾ ಶಕ್ತಿಗಳ ಅಂದರೆ ಯಂತ್ರ ಮತ್ತು ತಂತ್ರಜ್ಞಾನಕ್ಕೆ ಒತ್ತುಕೊಟ್ಟು ಕೇವಲ ಉತ್ಪಾದನೆ ಜಾಸ್ತಿ ಮಾಡುವುದರಿಂದ ಸಾಕಾರಗೊಳ್ಳುವುದಿಲ್ಲ. ಬದಲಿಗೆ ಅದು ಮತ್ತೆ ಬಂಡವಾಳಶಾಹಿಯ ಹುಟ್ಟಿಗೇ ಕಾರಣವಾಗುತ್ತದೆ. ಆದರೆ ಉತ್ಪಾದನಾ ಸಂಬಂಧಗಳ ಸತತ ಪ್ರಜಾತಾಂತ್ರೀಕರಣದಿಂದ ಮಾತ್ರ ನೈಜ ಸಮಾಜವಾದ ಸೃಷ್ಟಿಯಾಗುತ್ತದೆ ಎಂಬ ಚೀನಾ ಕ್ರಾಂತಿಯ ಅದರಲ್ಲೂ ಮಾವೋನ ರಾಜಕೀಯ ಮತ್ತು ಆರ್ಥಿಕ ದರ್ಶನ ಕನ್ನಡದಲ್ಲಿ ಸಾಕಷ್ಟು ಚರ್ಚೆಗೊಳಗಾಗಿಲ್ಲ. ಆದ್ದರಿಂದಲೇ ಈಗಲೂ ಮಾರ್ಕ್ಸ್‌ವಾದವನ್ನು ಏಕ ಧಾರೆಯಾಗಿ ಗ್ರಹಿಸುವ ಮತ್ತು "ಕಮುನಿಸಮ್ ಕೇವಲ ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಮಾತ್ರ ಒತ್ತು ಕೊಡುತ್ತದೆ, ಹೊಸ ಮನುಷ್ಯನ ಸೃಷ್ಟಿಗಲ್ಲ, ಅದನ್ನು ಪ್ರತಿಪಾದಿಸಿದವರು ಲೋಹಿಯಾ ಮಾತ್ರ" ಎಂಬಂಥ ಸತ್ಯಕ್ಕೆ ದೂರವಾದ ಸಂಗತಿಗಳನ್ನೇ ಹಲವು ಲೋಹಿಯಾವಾದಿಗಳು ಮತ್ತು ಗಾಂಧೀವಾದಿಗಳು ಬಿತ್ತರಿಸುತ್ತಿದ್ದಾರೆ. ಮಿಕ್ಕಂತೆ ಪ್ರಬುದ್ಧವಾದ ಚಿಂತನೆ ವ್ಯಕ್ತಪಡಿಸುವ ಅನಂತಮೂರ್ತಿಯಂತ ಅನಂತಮೂರ್ತಿಗಳೂ ಸಹ ಸಾಂಸ್ಕೃತಿಕ ಕ್ರಾಂತಿಯೆಂದರೆ ಕೇವಲ ಅರ್ಥರಹಿತ ಕೊಲೆ ಮಾತ್ರ ಎಂದು ಭಾಷ್ಯ ನೀಡುತ್ತಾರೆ ಅಥವಾ ಮಾವೋನ ಲಾಂಗ್‌ಮಾರ್ಚ್ ಅಂತಿಮವಾಗಿ ಹೋಗಿ ಸೇರಿದ್ದು ಕೋಕೋಕೋಲಾಗಲ್ಲವೇ ಎಂದು ಚಮತ್ಕಾರವಾಗಿ ಹೇಳಿಕೆ ನೀಡುತ್ತಾರೆ. (ಅದನ್ನೇ ಲೋಹಿಯಾವಾದಿಗಳ ಆಚರಣೆಗೂ ಅನ್ವಯಿಸುವುದಾದರೆ ಲೋಹಿಯಾರವರ ಸಪ್ತಕ್ರಾಂತಿ ಅಂತಿಮವಾಗಿ ಹಿಂದೂತ್ವ ಪುನರುತ್ಥಾನಕ್ಕೆ ಕಾರಣವಾಯಿತಲ್ಲವೇ ಎಂದು ಕೇಳಿಬಿಡಬಹುದು. ಆದರೆ ಎರಡೂ ನಿಜವಲ್ಲ, ಉದ್ದೇಶಿತವಾದದ್ದಲ್ಲ) ಅದೇನೇ ಇರಲಿ, ಕ್ರಾಂತಿಯೆಂಬುದು ಸಾವಿರ ಮೈಲು ದೂರವಿರುವ ಸಮಾಜವಾದದೆಡೆಗೆ ಹಾಕಿರುವ ಪ್ರಥಮ ಹೆಜ್ಜೆ. ಅಲ್ಲಿಗೆ ತಲುಪಲು ನಿರಂತರ ಕ್ರಾಂತಿಯ ಅಗತ್ಯವಿದೆ ಎಂದು ಹೇಳಿದ ಮಾವೋನಿಂದ ಮತ್ತು ಅವನ ಪ್ರಯೋಗಗಳಿಂದ ಕಲಿಯಲು ಭಾರತದ ಎಲ್ಲಾ ಬಗೆಯ ಸಮಾಜವಾದಿಗಳಿಗೂ ಸಾಕಷ್ಟಿದೆ. ಸಿದ್ಧ ಮಾದರಿಗಳನ್ನು ವಿಮರ್ಶಿಸಿ, ಅನಗತ್ಯವಾದದ್ದನ್ನು ತಿರಸ್ಕರಿಸಿ-ವೈಫಲ್ಯಗಳ ಪೋಸ್ಟ್ ಮಾರ್ಟೆಮ್ ಮಾಡಿ, ಯಾರನ್ನೂ ದೇವರನ್ನಾಗಿ ಮಾಡದೆ ಮಾರ್ಕ್ಸ್, ಲೆನಿನ್, ಸ್ಟಾಲಿನ್‌ರನ್ನೂ ತೀವ್ರ ವಿಮರ್ಶೆ ಮಾಡುತ್ತಾ, ತಮ್ಮನ್ನು ತಾವು ನಿರ್ದಾಕ್ಷಿಣ್ಯವಾಗಿ ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ ಮಾರ್ಕ್ಸ್‌ವಾದಿ ಸಮಾಜವಾದಿಗಳು ಸಂದರ್ಭಕ್ಕೆ ಸೂಕ್ತವಾದ ಸಮಾಜವಾದಿ ಮಾದರಿಯನ್ನೂ, ಸಮಾಜವಾದಿ ಅಭಿವೃದ್ಧಿ ಕ್ರಮಗಳನ್ನೂ ಹುಡುಕಿಕೊಂಡಿದ್ದು. ಇದು ಮಾರ್ಕ್ಸ್‌ವಾದ ಸ್ಥಾವರವಾಗದೆ ಬೆಳೆದ ರೀತಿ. ಆದರೆ ಇವರ ಸಂಖ್ಯೆ ತೀರಾ ಕಡಿಮೆ ಎನ್ನುವುದೂ ಅಷ್ಟೇ ಸತ್ಯ. ಅದೇರೀತಿ ಕಮ್ಯುನಿಸಂ ಹೆಸರು ಹೇಳಿಕೊಳ್ಳುವ ಮೂಲಭೂತವಾದಿಗಳೂ, ಬಂಡವಾಳವಾದಿಗಳು ಇಲ್ಲವೆಂದಲ್ಲ. ಅಂತವರ ಬಗ್ಗೆ ಲೋಹಿಯಾವಾದಿಗಳು ಸಾಕಷ್ಟು ಉದಾಹರಣೆ ನೀಡುತ್ತಾರೆ. ಅವರು ಹೇಳದೇ ಹೋಗುವುದು ಬೆಳೆಯುತ್ತಲೇ ಇರುವ ಮಾರ್ಕ್ಸ್‌ವಾದದ ಬಗ್ಗೆ. ಮಾವೋ ಮಾಡಿದ ರೀತಿಯಲ್ಲೇ ಭಾರತದ ಮಾರ್ಕ್ಸ್‌ವಾದಿಗಳೂ ಮಾರ್ಕ್ಸ್‌ವಾದವನ್ನು ಭಾರತದ ಸಂದರ್ಭಕ್ಕೆ ಸರಿಯಾಗಿ ಅನ್ವಯಿಸಿದ್ದರೆ ಭಾರತಕ್ಕೆ ಇಷ್ಟು ಹೊರಗಿನವರಾಗುತ್ತಿರಲಿಲ್ಲ. ಈಗ ಚೀನಾ ಕಮ್ಯೂನಿಸ್ಟ್ ಪಕ್ಷ 'ಬಂಡವಾಳಶಾಹಿ' ದೇಶವಾಗಿಯೂ ಬದಲಾಗಿದೆ. ಕೆಲ ಸ್ಥಾನದ ಕಮ್ಯೂನಿಸ್ಟರು ಈ ಸತ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ.

ಆದರೂ ಸ್ಥಾವರವಾಗಿದ್ದ ಭಾರತೀಯ ಮಾರ್ಕ್ಸ್‌ವಾದಕ್ಕೆ ಚಾಲನೆ ತಂದಿದ್ದು ನಕ್ಸಲ್ ಚಳವಳಿ. ಇಂದೂ ಲೋಹಿಯಾವಾದಿ ಸಮಾಜವಾದಿಗಳು ತಮ್ಮ ಸಾಧನೆಯೆಂದು ಹೇಳಿಕೊಳ್ಳುತ್ತಿರುವ ಹಲವಾರು ಸಾಧನೆಗಳ (ಭೂಸುಧಾರಣೆ, ಉಳುವವನಿಗೆ ಭೂಮಿ, ಪಂಚಾಯತ್ ರಾಜ್) ಹಿಂದೆ ನಕ್ಸಲ್ ಚಳವಳಿಯ ಹಿನ್ನೆಲೆಯಿದೆ. ಇಂದಿಗೂ ಆದಿವಾಸಿಗಳ ಎತ್ತಂಗಡಿ ಎಲ್ಲಿಯಾದರೂ ಯಶಸ್ವಿಯಾಗಿ ತಡೆಗಟ್ಟಲಾಗಿದ್ದರೆ ಅದು ನಕ್ಸಲ್ ಚಳವಳಿ ಇರುವ ಕಡೆ ಮಾತ್ರ. ಭಾರತದ ಅಭಿವೃದ್ಧಿ ಮಾದರಿಯನ್ನು ವಿಮರ್ಶಿಸಿ ಅದಕ್ಕೆ ಪರ್ಯಾಯವಾದ ಮಾದರಿಯನ್ನು ಪ್ರಾಯೋಗಿಕವಾಗಿ ಮುಂದಿಟ್ಟದ್ದೂ ಸಹ ಮಾವೋವಾದಿ ನಕ್ಸಲರೇ! ಇದನ್ನು ಹಲವು ಲೋಹಿಯಾವಾದಿಗಳೂ ಈಗ ಒಪ್ಪಿಕೊಳ್ಳುತ್ತಾರೆ. ಆದರೆ ಈ ಕಾಲಘಟ್ಟದಲ್ಲಿ ಅದೂ ಸಹ ಹೊಸ ರಾಜಕೀಯ ಮತ್ತು ಸೈದ್ಧಾಂತಿಕ ಸವಾಲುಗಳಿಗೆ ತೆರೆದುಕೊಳ್ಳದೆ ಜಡಗಟ್ಟುತ್ತಿದೆ. ಆತ್ಮ ಬಲಿದಾನದ ಹೆಗ್ಗಳಿಕೆ ಮತ್ತು ಕೆಲವು ದುರ್ಗಮ ಪ್ರದೇಶಗಳಲ್ಲಿ ದೊರಕುತ್ತಿರುವ ಬೃಹತ್ ಜನಬೆಂಬಲಗಳು ಅವರನ್ನೂ ಕುರುಡು ಮತ್ತು ಕಿವುಡರನ್ನಾಗಿಸಿದೆ.

▶▶ 14

ನೋ ಕಾಮೆಂಟ್ಸ್

"ಹೊಸ ಜನಾಂಗವನ್ನು ಓದಿಗೆ ಹಚ್ಚುವ ಬರಹಗಳನ್ನು ಸಾಹಿತಿಗಳು ಬರೆಯಬೇಕಿದೆ. ಮುಂದಿನ ಓದುಗರನ್ನು ಈಗಲೇ ಸಿದ್ಧಪಡಿಸಿಕೊಳ್ಳದಿದ್ದರೆ ಹೊಸ ಲೇಖಕರ ಬರಹ ಹಾಗೂ ಮರುಮುದ್ರಣಗೊಳ್ಳುವ ಹಳೆ ಬರಹಗಾರರ ಕೃತಿಗಳಿಗೆ ಓದುಗರೇ ಸಿಕ್ಕುವುದಿಲ್ಲ"

- ಬೊಳುವಾರು ಮಹಮ್ಮದ್ ಕುಂಞ

"ಮುಂದಿನ ಹತ್ತು ವರ್ಷಗಳಲ್ಲಿ 2000 ವರ್ಷಗಳ ಮನುಷ್ಯ ನಾಗರಿಕತೆ ಸಂಪೂರ್ಣ ಬದಲಾಗುತ್ತದೆ. ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಇಂತಹ ಸಂದರ್ಭದಲ್ಲಿ ಕಲೆ, ಸಾಹಿತ್ಯ ಮತ್ತು ರಾಜಕೀಯದಲ್ಲೂ ಬದಲಾವಣೆಗಳಾಗುತ್ತವೆ. ಸಂಘರ್ಷದ ಹಾದಿಯಲ್ಲಿ ಸಾಹಿತ್ಯದ ಮೂಲಕ ಬದಲಾವಣೆ ತರಬೇಕು."

- ನ್ಯಾ. ಎಂ.ಎನ್. ವೆಂಕಟಾಚಲಯ್ಯ

"ಪ್ರತಿಯೊಬ್ಬರೂ ತಾವು ಸಂಪಾದಿಸುವ ಹಣದಲ್ಲಿ ಸ್ವಲ್ಪವನ್ನಾದರೂ ಮಾನವ ಸೇವೆಗೆ ಎತ್ತಿಡಬೇಕು. ಕೇವಲ ಧಾರ್ಮಿಕ ಆಚರಣೆಗಳಿಗೆ ಮಾತ್ರ ಒತ್ತು ನೀಡುತ್ತಾ ಬಂದರೆ ನಕಲಿ ಸಾಧು-ಸ್ವಾಮಿಗಳು ಬೆಳೆಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮುಂದೆ ಆ ನಕಲಿ ಸ್ವಾಮಿಗಳು ಜೈಲು ಪಾಲಾಗುತ್ತಾರೆ."

- ಭಾರಧ್ವಾಜ್, ರಾಜ್ಯಪಾಲರು

"ಐ.ಎ.ಎಸ್. ಪರೀಕ್ಷೆಯನ್ನು ಎದುರಿಸಲು ಕೇವಲ ಪುಸ್ತಕ ಜ್ಞಾನ ಸಾಕಾಗುವುದಿಲ್ಲ, ಅದಕ್ಕೆ ನಮ್ಮಲ್ಲಿರುವ ಕ್ರಿಯಾಶೀಲತೆಯ ಅವಶ್ಯಕತೆಯಿದೆ. ಅಸಾಮಾನ್ಯ ಶ್ರಮದ ಅಗತ್ಯವಿದೆ."

- ಶಾ ಫೈಸಲ್, ಐಎಎಸ್ ಪರೀಕ್ಷೆಯಲ್ಲಿ ದೇಶಕ್ಕೆ ಮೊದಲಿಗನಾದ ಪ್ರಥಮ ಕಾಶ್ಮೀರಿ

"ಭಾರತವು ಸತ್ಯದ ಮೇಲಿನ ತುರ್ತು ಪರಿಸ್ಥಿತಿಯನ್ನು ಎದುರಿಸುತ್ತಿದೆ. ಮಾಧ್ಯಮಗಳು ಸಮಾಜದ ಕಾವಲುನಾಯಿಗಳಾಗಿ ಕೆಲಸ ಮಾಡಬೇಕಿತ್ತು, ಆದರೆ ಅವು ಕಾರ್ಪೋರೇಟ್ ಉದ್ಯಮಿಗಳ ಮುದ್ದಿನ ನಾಯಿಗಳಾಗಿಬಿಟ್ಟಿವೆ"

- ಮಹೇಶ್ ಭಟ್

ಪತ್ರಿಕಾ ಸ್ವಾತಂತ್ರ್ಯ ಹರಣದ ಪರ್ವ ಕರ್ನಾಟಕದಲ್ಲೂ ಪ್ರಾರಂಭವಾಗಿರುವ ಸನ್ನಿವೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನ್ಯಾಯಾಂಗದ ಕೆಲವು ಅಭಿಪ್ರಾಯಗಳು

"ಅಭಿವ್ಯಕ್ತಿ ಸ್ವಾತಂತ್ರ್ಯವು ಪತ್ರಿಕಾ ಸ್ವಾತಂತ್ರ್ಯವನ್ನೂ ಒಳಗೊಳ್ಳುತ್ತದೆ. ಮಾಧ್ಯಮವು ವ್ಯಕ್ತಿಯ ಅಥವಾ ನಾಗರಿಕನ ಹಕ್ಕನ್ನೇ ಮತ್ತೊಂದು ರೀತಿಯಲ್ಲಿ ಪ್ರತಿಪಾದಿಸುತ್ತದೆ."

- ಡಾ.ಬಿ.ಆರ್.ಅಂಬೇಡ್ಕರ್, ಸಂವಿಧಾನ ಸಭೆಯ ಚರ್ಚೆಯಲ್ಲಿ *(2-12-1948)*

"ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನೊಳಗೇ ಪತ್ರಿಕಾ ಸ್ವಾತಂತ್ರ್ಯದ ಹಕ್ಕನ್ನೂ ಖಾತರಿಗೊಳಿಸಲಾಗಿದೆ."

- ಸುಪ್ರೀಮ್ ಕೋರ್ಟಿನ, ೧೯೫೧ರ ನ್ಯಾಯಾದೇಶವೊಂದರಲ್ಲಿ

"ಒಂದು ಪ್ರಜಾತಾಂತ್ರಿಕ ದೇಶದಲ್ಲಿ ಪತ್ರಿಕೆಗಳಿಗೆ ವಿಶೇಷ ಸ್ಥಾನವೇ ಇರುತ್ತದೆ."

-ನ್ಯಾ. ಪತಂಜಲಿ ಶಾಸ್ತ್ರಿ, ರೋಮೇಶ್ ಥಾಪರ್ v/s ಮದ್ರಾಸ್ ಸರ್ಕಾರದ ಪ್ರಕರಣದಲ್ಲಿ, *1950*

ಎಕ್ಸ್‌ಪ್ರೆಸ್ ಪತ್ರಿಕಾ ಬಳಗದ ಪ್ರಕರಣವೊಂದರಲ್ಲಿ ನ್ಯಾ. ಭಗವತಿಯವರು ಸಂವಿಧಾನದ 19 (1) (ಎ) ಪ್ರಕರಣವನ್ನು ಅಮೆರಿಕದ ಸಂವಿಧಾನಕ್ಕೆ ಮಾಡಲಾಗಿರುವ ಮೊದಲನೇ ತಿದ್ದುಪಡಿಯಿಂದ ತೆಗೆದುಕೊಂಡಿರುವುದರಿಂದ ಅದರಡಿಯಲ್ಲಿ ಬರುವ ಪ್ರಕರಣವನ್ನು ಅದೇ ತಾತ್ವಿಕ ಹಿನ್ನೆಲೆಯಲ್ಲೇ ಇತ್ಯರ್ಥಗೊಳಿಸಬೇಕೆಂದು ಅಭಿಪ್ರಾಯಪಟ್ಟಿದ್ದರು. ಆ ತತ್ವವೆಂದರೆ ಅನಿರ್ಬಂಧಿತ ಪತ್ರಿಕಾ ಸ್ವಾತಂತ್ರ್ಯ.

- *1958ರ ಲಾ ಜರ್ನಲ್*

"ಪತ್ರಿಕಾ ಸ್ವಾತಂತ್ರ್ಯವನ್ನು ಭಾರತ ಸಂವಿಧಾನದ ಮೂಲ ರಚನಾ ತತ್ವಗಳೆಂದೇ (basic structure) ಪರಿಗಣಿಸಬೇಕು."

- ನ್ಯಾ. ಎ.ಎಸ್. ವೆಂಕಟರಾಮಯ್ಯ, ಇಂಡಿಯನ್ ಎಕ್ಸ್‌ಪ್ರೆಸ್ ನ್ಯೂಸ್‌ಪೇಪರ್ಸ್ ಮತ್ತು ಭಾರತ ಸರ್ಕಾರ ಪ್ರಕರಣ, ೧೯೮೫

"ಒಂದು ದೇಶ ಎಷ್ಟರಮಟ್ಟಿಗೆ ಪ್ರಜಾತಾಂತ್ರಿಕವಾಗಿದೆ ಎಂದು ಅರ್ಥಮಾಡಿಕೊಳ್ಳಬೇಕೆಂದರೆ ಆ ದೇಶ ಎಷ್ಟು ಪತ್ರಿಕಾ ಸ್ವಾತಂತ್ರ್ಯ ನೀಡಿದೆ ಎಂಬುದೇ ಪ್ರಮುಖ ಮಾನದಂಡ."

-ನ್ಯಾ. ಜೀವನ್ ರೆಡ್ಡಿ, ೧೯೯೪ರ ಪ್ರಿಂಟರ್ಸ್ ಮೈಸೂರು ಪ್ರಕರಣದಲ್ಲಿ

"ಇದೇ ಸಂದರ್ಭದಲ್ಲಿ ಸಂವಿಧಾನದ 19 (1) (ಎ) ಕಲಮಿನಲ್ಲಿ ಪತ್ರಿಕಾ ಸ್ವಾತಂತ್ರ್ಯದ ಅಂಶವನ್ನು ಸ್ಪಷ್ಟವಾಗಿ ಸೇರಿಸುವ ಮತ್ತು ಸಾರ್ವಜನಿಕ ಹಿತಾಸಕ್ತಿಯ ಸಂದರ್ಭವೊಂದನ್ನು ಹೊರತುಪಡಿಸಿ ಬೇರೆ ಇನ್ನಾವ ಸಂದರ್ಭದಲ್ಲೂ ವರದಿಗಾರರ ಸುದ್ದಿಮೂಲವನ್ನು ಬಹಿರಂಗಪಡಿಸದಂತೆ ಸರ್ಕಾರವು ಒತ್ತಾಯಪಡಿಸದಂತಹ ಕಾನೂನನ್ನು ತರುವ ಅಗತ್ಯವಿದೆ."

-ಸಂವಿಧಾನ ಪರಾಮರ್ಶೆ ಸಮಿತಿಯ ಶಿಫಾರಸ್ಸು, *200*

ಪ್ರಜಾವಾಣಿ ಬಳಗಕ್ಕೆ ಅಭಿನಂದನೆಗಳು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ರಾಜ್ಯ ಪೊಲೀಸರ ...ಷ್ಟ ಪ್ರಯತ್ನವೊಂದು ವಿಫಲವಾಗಿದೆ. ಪ್ರಜಾವಾಣಿ ...ಟ್ಟಿಕೊಡವಿಕೊಂಡು ನಿಂತಿದೆ. ಯಡಿಯೂರಪ್ಪನ ಚೆಡ್ಡಿ ...ರ್ಕಾರದ ಕುತಂತ್ರಗಳಿಗಾಗಲಿ, ಗೃಹ ಸಚಿವ ವಿ.ಎಸ್. ...ಚಾರ್ಯರ ಪೊಲೀಸರ ಬೆದರಿಕೆಗಳಿಗಾಗಲಿ ತಾನು ಕೇರ್ ...ಮಾಡುವುದಿಲ್ಲವೆಂದು ಪ್ರಜಾವಾಣಿ ಗಟ್ಟಿಯಾಗಿ ಸಾರಿದೆ. ...ದು ನಿಜವಾಗಲೂ ಪ್ರಶಂಸನೀಯ.

ಈ ಪ್ರಕರಣದ ಹಿಂದೆ ಸಣ್ಣದೊಂದು ಕತೆಯೇ ಇದೆ. ...ದು ಶಿವಮೊಗ್ಗೆಯ ಡಿವೈಎಸ್‌ಪಿ ಶೇಖರಪ್ಪ ಎಂಬ ...ದ್ಧಿ ಇಲ್ಲದ ಪೊಲೀಸ್ ಅಧಿಕಾರಿ ಪ್ರಜಾವಾಣಿಯ ...ಯುವ ವರದಿಗಾರ ರಾಹುಲ್ ಬೆಳಗಲಿಗೆ ಬೆದರಿಕೆಯ ...ನೋಟಿಸ್ ಅನ್ನು ಜಾರಿ ಮಾಡಿದ್ದಕ್ಕೆ ಸಂಬಂಧಿಸಿದ್ದು. (ಈ ...ರಿತು 'ಲಂಕೇಶ್' ವಾರ ಪತ್ರಿಕೆಯ ಏಪ್ರಿಲ್ 28, ...010 ರ ಸಂಚಿಕೆಯಲ್ಲಿ ಸುದೀರ್ಘ ವರದಿಯನ್ನು ಪ್ರಕಟ ...ಮಾಡಿದ್ದೆವು).

ಆ ನೋಟಿಸಿನಲ್ಲಿ ರಾಹುಲ್ ಬೆಳಗಲಿಗೆ ಸಂದರ್ಶನ ...ಡಿದ್ದ ಮಾವೋವಾದಿಗಳ ನಾಯಕನ ಬಗ್ಗೆ ಮಾಹಿತಿಯನ್ನು ...ಪೊಲೀಸರಿಗೆ ನೀಡಬೇಕೆಂದು, ಇಲ್ಲದಿದ್ದರೆ ರಾಹುಲ್ ...ರುದ್ಧವೇ ಭಯಂಕರ **Unlawful Activities (Pre-...ention) Act 1967** ರ ಅಡಿ ಕಾನೂನುಕ್ರಮ ...ಗೆದುಕೊಳ್ಳುವುದಾಗಿಯೂ ಶೇಖರಪ್ಪ ಬೆದರಿಸಿದ್ದ.

ಇಂತಹ ಒಂದು ನೋಟಿಸ್ ಜಾರಿ ಆಗಿದ್ದರ ಬಗ್ಗೆ ...ಮ್ಮ ತಂಡಕ್ಕೆ ಗೊತ್ತಾಯಿತು ಮತ್ತು ಆ ನೋಟಿಸ್‌ನ ...ಂದೆ ಪತ್ರಿಕಾ ಸ್ವಾತಂತ್ರ್ಯವನ್ನೇ ದಮನ ಮಾಡುವ ...ಡಿಯೂರಪ್ಪನ ಸರ್ಕಾರದ ...ಚಿನ ದುರ್ವಾಸನೆಯೂ ...ಮಗೆ ಬಡಿಯಿತು.

...ದಕ್ಕಿಂತಲೂ ಆಘಾತಕಾರಿ ...ಗತಿ ಯಾವುದಾಗಿತ್ತೆಂದರೆ ...ಹುಲ್‌ನ ಬೆಂಬಲಕ್ಕೆ ...ಲ್ಲಬೇಕಿದ್ದ ಆತನ ಹಿರಿಯ ...ಹೋದ್ಯೋಗಿ ಒಬ್ಬರು ...ಹುಲ್ ಶಿವಮೊಗ್ಗೆ ಪೊಲೀಸರ ...ಮುಂದೆ ಹಾಜರಾಗಿ ಅವರು ...ಳಿದ್ದ ಮಾಹಿತಿಯನ್ನು ...ಡಬೇಕೆಂದು ಆತನಿಗೆ ...ಸೂಚಿಸಿದ್ದು.


ಇದನ್ನೆಲ್ಲ ಕೇಳಿ ನನಗೆ ಆತಂಕ ...ಯಿತು. ಪತ್ರಿಕಾ ಸ್ವಾತಂತ್ರ್ಯದ ...ಮೇಲೆ ಯಡ್ಡಿ ಸರ್ಕಾರ ಮಾಡು...ರುವ ಮೊದಲ ದಾಳಿ ಇದು, ...ದನ್ನು ವಿರೋಧಿಸದಿದ್ದರೆ ನಾಳೆ ಈ ...ಜ್ಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಾಗಲಿ, ...ನ್ನಮತವಾಗಲಿ ಉಳಿಯುವುದು ಅಸಾಧ್ಯ ಎನ್ನಿಸಿತು. ...ನು ಕೂಡಲೇ ಪ್ರಜಾವಾಣಿ ಸಂಪಾದಕಾರದ ...ಂತಕುಮಾರ್ ಅವರಿಗೆ ಫೋನ್ ಮಾಡಿದೆ.

ಇಲ್ಲಿ ಶಾಂತಕುಮಾರ್ ಅವರ ಬಗ್ಗೆ ಒಂದಿಷ್ಟು ...ಳಬೇಕು. ಪ್ರಜಾವಾಣಿಯಲ್ಲಿ ಶಾಂತಕುಮಾರ್ ಅವರ ...ಟೋ ಆಗಲಿ, ಅವರ ಅಂಕಣವಾಗಲಿ ಪ್ರಕಟಗೊಳ್ಳದಿರು...ದರಿಂದ ಅವರ ವ್ಯಕ್ತಿತ್ವದ ಬಗ್ಗೆ ಈ ರಾಜ್ಯದ ಜನರಿಗೆ ...ಚ್ಚು ಗೊತ್ತಿಲ್ಲ. ಆದರೆ ಜನಪರ ಕಾಳಜಿಯನ್ನೂ, ಜಾತ್ಯತೀತ ...ಲುವನ್ನೂ ಹೊಂದಿರುವ ಶಾಂತಕುಮಾರ್ ಅವರು ಈ ...ಜ್ಯದಲ್ಲಿ ಏನಾಗುತ್ತಿದೆ, ಯಾವುದೇ ವಿಷಯದ ಬಗ್ಗೆ ...ಜಾವಾಣಿಯ ನಿಲುವು ಏನಾಗಿರಬೇಕೆಂದು ಅಪಾರ ...ಚ್ಚರ ವಹಿಸುವ ಸಂಪಾದಕರು ಅವರು.

...ಶಾಂತಕುಮಾರ್ ಎಂಥವರು ಎಂಬುದಕ್ಕೆ ಒಂದು ...ದಾಹರಣೆಯನ್ನು ಕೊಡಬಹುದು. ಇತ್ತೀಚೆಗೆ ಛತ್ತೀಸ್‌ಗಢದ ...ಮಾವೋವಾದಿಗಳೊಂದಿಗೆ ಖ್ಯಾತ ಲೇಖಕಿ ಅರುಂಧತಿ ...ಯ್ ಹಲವು ವಾರಗಳನ್ನೇ ಕಳೆದು ಒಂದು ...ದೀರ್ಘವಾದ ಲೇಖನವನ್ನು ಬರೆದರು. ಆ ಲೇಖನವನ್ನು ...ಹಳವಾಗಿ ಮೆಚ್ಚಿದ ಶಾಂತಕುಮಾರ್ ಅವರು ಅದರ ...ನುವಾದವನ್ನು ಧಾರವಾಹಿ ರೂಪದಲ್ಲಿ ಪ್ರಕಟಿಸಲು ...ರ್ಧರಿಸಿ ಅದನ್ನು ಪ್ರಜಾವಾಣಿಯಲ್ಲಿ ಘೋಷಿಸಿದರು.

ಆದಾದ ಮಾರನೆ ದಿನ ಆ ಧಾರಾವಾಹಿ ಪ್ರಾರಂಭವಾಗ...ಕು-ಅದರ ಹಿಂದಿನ ದಿನವೇ ದಾಂತೇವಾಡದಲ್ಲಿ ...ಮಾವೋವಾದಿಗಳು ಸಿಆರ್‌ಪಿಎಫ್ ತಂಡದ ಮೇಲೆ ದಾಳಿ ...ಸಿ 79 ಜನರನ್ನು ಕೊಂದು ಹಾಕಿದರು. ಶಾಂತಕುಮಾರ್ ...ವರ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಕೂಡಲೇ ...ಯ್ ಅವರ ಲೇಖನವನ್ನು ಪ್ರಕಟಿಸುವ ನಿರ್ಧಾರದಿಂದ ...ಂದೆ ಸರಿಯುತ್ತಿದ್ದರು. ಆದರೆ ಶಾಂತಕುಮಾರ್ ತಮ್ಮ ...ರ್ಧಾರವನ್ನು ಬದಲಾಯಿಸಲಿಲ್ಲ, ರಾಯ್ ಅವರ ...ಲೇಖನವನ್ನು ಸಂಪೂರ್ಣವಾಗಿ ಪ್ರಕಟಿಸಿದರು.

ಅವರಿಗೆ ಫೋನ್ ಮಾಡಿ "ದಯವಿಟ್ಟು ಯಾವುದೇ ಕಾರಣಕ್ಕೂ ಪೊಲೀಸರು ಕಳುಹಿಸಿರುವ ಈ ನೋಟಿಸ್‌ಗೆ ರಾಹುಲ್ ಬೆಳಗಲಿ ಪ್ರತಿಕ್ರಿಯಿಸದಂತೆ ನೋಡಿಕೊಳ್ಳಿ. ಇದು ದುಷ್ಟತನದಿಂದ ಕೂಡಿರುವ ನೋಟಿಸ್. ಇವತ್ತು ಪ್ರಜಾವಾಣಿಗೇ ಇಂತಹ ನೋಟಿಸ್ ಅನ್ನು ಪೊಲೀಸರು ಕಳುಹಿಸುತ್ತಾರೆಂದರೆ ನಾಳೆ ಈ ರಾಜ್ಯದಲ್ಲಿ ಏನಾಗುತ್ತದೆ ಎಂಬುದು ನಿಮಗೆ ಗೊತ್ತು. ನಾವೆಲ್ಲ ಇದನ್ನು ಪ್ರತಿಭಟಿಸೋಣ, ಪತ್ರಿಕಾ ಸ್ವಾತಂತ್ರ್ಯ ವಿರುದ್ಧದ ಈ ಸರ್ಕಾರದ ಧೋರಣೆಯನ್ನು ವಿರೋಧಿಸೋಣ" ಎಂದೆ.



ಶಾಂತಕುಮಾರ್

ಹಾಗೆಯೇ "ಇದನ್ನು ಇಲ್ಲಿಯೇ ತಡೆಯಬೇಕು. ನಿಮ್ಮದು ದೊಡ್ಡ ಸಂಸ್ಥೆ, ಈ ವಿಚಾರವನ್ನು ಡಿಜಿಪಿ ಅಜಯ್‌ಕುಮಾರ್ ಸಿಂಗ್ ಅವರೊಂದಿಗೆ ಚರ್ಚಿಸಿ, ಮಾಧ್ಯಮಗಳೊಂದಿಗೆ ಪೊಲೀಸರು ಮುಖಾಮುಖಿ ಆಗಬಾರದೆಂದು ತಿಳಿಸಿ" ಎಂದೂ ಸೂಚಿಸಿದೆ.

ಶಾಂತಕುಮಾರ್ ಅವರಿಗೆ ನನ್ನ ಕಾಳಜಿ ಅರ್ಥವಾಯಿತು. ತಮ್ಮ ಸಂಸ್ಥೆಯ ಕಾನೂನು ಸಲಹೆಗಾರರು ಹಾಗು ಹಿರಿಯ ಪತ್ರಕರ್ತರೊಂದಿಗೆ ಚರ್ಚಿಸಿ "ಈ ನೋಟಿಸ್‌ಗೆ ರಾಹುಲ್ ಪ್ರತಿಕ್ರಿಯಿಸದಂತೆ ಹೇಳಿದ್ದೇನೆ. ನಾನು ಒಂದು ವಾರ ಊರಲ್ಲಿ ಇರುವುದಿಲ್ಲ, ಬಂದ ಮೇಲೆ ನೋಡೋಣ" ಎಂದು ನನಗೆ ಹೇಳಿದರು.

ಇದಾದನಂತರ ಅವರ ಸಂಸ್ಥೆಯ ಒಂದು ತಂಡ ಡಿಜಿಪಿ ಅಜಯ್‌ಕುಮಾರ್ ಸಿಂಗ್ ಅವರನ್ನು ಭೇಟಿ ಆಯಿತು.



ಪ್ರಜಾವಾಣಿ ಪತ್ರಕರ್ತರಿಗೆ ಪೊಲೀಸರು ನೀಡಿದ ನೋಟಿಸ್ ವಿರುದ್ಧ ಪ್ರತಿಭಟನೆ

ಸಿಂಗ್ ಕೂಡ ರಾಹುಲ್ ಬೆಳಗಲಿ ವಿರುದ್ಧ ಯುಎಪಿಎ ಆಕ್ಟ್ ಅಡಿ ಪೊಲೀಸರು ದೂರು ದಾಖಲಿಸುವುದು ಸರಿ ಅಲ್ಲ ಎಂದು ಹೇಳಿದರು. ಈ ಇಡೀ ಪ್ರಕರಣದ ಬಗ್ಗೆ ನಮ್ಮ ಪತ್ರಿಕೆಯೊಂದೇ ವರದಿ ಮಾಡಿದ್ದು. ಸ್ವತಃ ಪ್ರಜಾವಾಣಿ ಕೂಡ ಪೊಲೀಸರ ಈ ಕಿರುಕುಳದ ಬಗ್ಗೆ ಆ ಸಂದರ್ಭದಲ್ಲಿ ಸುದ್ದಿಯನ್ನು ಪ್ರಕಟಿಸಲಿಲ್ಲ. ಆಗ ಈ ಪ್ರಕರಣ ಅಲ್ಲಿಗೆ ಮುಕ್ತಾಯಗೊಂಡಿದೆ ಎಂದುಕೊಂಡು ನಾನು ಸುಮ್ಮನಾದೆ.

ಆದರೆ ತೆರೆಮರೆಯಲ್ಲಿ ಪ್ರಜಾವಾಣಿಯ ಹಿರಿಯ ಪತ್ರಕರ್ತರೊಬ್ಬರು ಬೇರೆ ಮಾರ್ಗ ಹಿಡಿದಿದ್ದರು. ಯಡಿಯೂರಪ್ಪನ ಹಾಲಿ ಪತ್ರಿಕಾ ಕಾರ್ಯದರ್ಶಿಯಾದ ಮತ್ತು ಮಾಜಿ ಪ್ರಜಾವಾಣಿಯ ಸಿಬ್ಬಂದಿಯಾದ ಆರ್.ಪಿ. ಜಗದೀಶ್ ಎಂಬ ಅವಕಾಶವಾದಿಯ ಮೂಲಕ ಚೆಡ್ಡಿ ಸರ್ಕಾರಕ್ಕೆ ಸಲಾಮು ಹೊಡೆದು ಈ ನೋಟಿಸಿನಿಂದ ಬಿಡುಗಡೆ ಪಡೆಯಲು ಆತ ಯತ್ನಿಸುತ್ತಿದ್ದರು. ಅವರ ಈ ಮುಖೇಡಿ ವರ್ತನೆಯನ್ನು ಕಂಡು ಶಿವಮೊಗ್ಗೆ ಪೊಲೀಸರಿಗೆ ಮತ್ತಷ್ಟು ಧೈರ್ಯ ಬಂತು. ಏಪ್ರಿಲ್ 26 ರಂದು ಮತ್ತೆ ರಾಹುಲ್ ಬೆಳಗಲಿ ಮತ್ತು ಪ್ರಜಾವಾಣಿಯ ಅಸೋಸಿಯೇಟ್ ಸಂಪಾದಕ ಪದ್ಮರಾಜ್ ದಂಡಾವತಿಗೆ-ಇಬ್ಬರಿಗೂ ಮತ್ತೊಂದು ನೋಟಿಸ್ ಜಾರಿ ಮಾಡಿದರು. ಆ ನೋಟಿಸ್‌ಗಳಲ್ಲಿ ಯುಎಪಿಎ ಕಾಯಿದೆ ಮಾತ್ರವಲ್ಲ, ಶಸ್ತ್ರಾಸ್ತ್ರ ಕಾಯಿದೆ, ಇತ್ಯಾದಿ ಕಾನೂನುಗಳಡಿಯೂ ಈ ಪತ್ರಕರ್ತರ ವಿರುದ್ಧ ದೂರುಗಳನ್ನು ದಾಖಲಿಸುವುದಾಗಿ ಬೆದರಿಸಿದರು.

ಆಗಲೂ ಪ್ರಜಾವಾಣಿಯ ಆ ಪತ್ರಕರ್ತ ಜಗದೀಶ್ ಮೂಲಕವೇ ಇದನ್ನು ಬಗೆಹರಿಸಲು ಯತ್ನಿಸುತ್ತಿದ್ದರಲ್ಲದೆ, ಗಟ್ಟಿದನಿಯಲ್ಲಿ ಪ್ರತಿಭಟಿಸಲಿಲ್ಲ, ಬೇರೆ ಮಾರ್ಗಗಳಿಗೆ ಹುಡುಕಾಡಲಿಲ್ಲ. ಬೇರೆ ಯಾರಾದರೂ ಅವರ ಜಾಗದಲ್ಲಿದ್ದಿದ್ದರೆ ಈ ನೋಟಿಸ್‌ಗಳನ್ನು ಒಂದು ದೊಡ್ಡ ಇಷ್ಯೂ ಮಾಡಿ, ಕಾನೂನುತಜ್ಞರ ಅಭಿಪ್ರಾಯ, ಚಿಂತಕರ ಅನಿಸಿಕೆ, ಹೋರಾಟಗಾರರ ವಿರೋಧಗಳನ್ನು ಪ್ರಕಟಿಸಿ, ಯಡ್ಡಿ ಸರ್ಕಾರದ ಮಾನವನ್ನೂ, ಪೊಲೀಸರ ದೌರ್ಜನ್ಯವನ್ನೂ ಬಯಲಿಗೆಳೆಯುತ್ತಿದ್ದರು. ಇದನ್ನು ಪತ್ರಿಕಾ ಸ್ವಾತಂತ್ರದ ಹೋರಾಟ ಮಾತ್ರವಲ್ಲ, ಪ್ರಜಾಪ್ರಭುತ್ವದ ಉಳಿವಿಗಾಗಿನ ಹೋರಾಟವಾಗಿ ರೂಪಿಸುತ್ತಿದ್ದರು. ಆದರೆ ಆ ಪತ್ರಕರ್ತರು ಇದ್ಯಾವುದನ್ನೂ ಮಾಡಲಿಲ್ಲ. ಇದನ್ನೆಲ್ಲ ಕಂಡು ಬಿಜೆಪಿ ಸರ್ಕಾರ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಮಾಡಲೆತ್ನಿಸಿದ ದಾಳಿ ಕುರಿತು ಇತರೆ ಪತ್ರಿಕೆಗಳೂ ಚಕಾರವೆತ್ತಲಿಲ್ಲ. "ಅವರಿಗೇ ಇಲ್ಲದ ಉಸಾಬರಿ ನಮಗೇಕೆ" ಎಂಬ ನಿಲುವು ಅವರೆಲ್ಲರದ್ದಾಗಿತ್ತು.

ಆಗ ಕಾರ್ಯಾಚರಣೆಗೆ ಇಳಿದಿದ್ದೇ ಭಾನುತೇಜ್ ಎಂಬ ಹಿರಿಯ ಪತ್ರಕರ್ತ. 'ದಿ ವೀಕ್' ಎಂಬ ರಾಷ್ಟ್ರೀಯ ಪತ್ರಿಕೆಯ ಬೆಂಗಳೂರಿನ ಬ್ಯುರೋದ ಮುಖ್ಯಸ್ಥರಾಗಿರುವ ಭಾನುತೇಜ್ ಜಾತ್ಯತೀತ ಮತ್ತು ಪ್ರಗತಿಪರ ಧೋರಣೆ ಹೊಂದಿರುವವರು. ಅವರು ದೆಹಲಿಯಲ್ಲಿರುವ ಭಾರತೀಯ ಪತ್ರಿಕಾ ಸಂಪಾದಕರ ಮಂಡಲಿಗೆ ಶಿವಮೊಗ್ಗೆ ಪೊಲೀಸರು ಜಾರಿ ಮಾಡಿದ್ದ ನೋಟಿಸ್‌ಗಳ ಪ್ರತಿಗಳನ್ನು ಕಳುಹಿಸಿ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ರಾಜ್ಯ ಬಿಜೆಪಿ ಸರ್ಕಾರ ಮಾಡುತ್ತಿರುವ ದಾಳಿಯನ್ನು ವಿರೋಧಿಸಿ ದೂರನ್ನು ದಾಖಲಿಸಿದರು.


ಭಾನುತೇಜ್ ಅವರ ದೂರಿಗೆ ಪ್ರತಿಕ್ರಿಯಿಸಿದ ಮಂಡಳಿಯ ಅಧ್ಯಕ್ಷ ರಾಜದೀಪ್ ಸರ್ದೇಸಾಯಿ ಮತ್ತು ಮಹಾ ಕಾರ್ಯದರ್ಶಿ ಕೂಮಿ ಕಪೂರ್ ಅವರುಗಳು ರಾಜ್ಯ ಪೊಲೀಸರ ಕ್ರಮವನ್ನು ಖಂಡಿಸಿದರಲ್ಲದೆ, "ಸುದ್ದಿ ಮೂಲದ ಗೋಪ್ಯತೆ ಕಾಪಾಡುವುದು ಪತ್ರಕರ್ತನ ವೃತ್ತಿ ತತ್ವವಾಗಿದೆ" ಎಂದೂ ಪೊಲೀಸರಿಗೆ ಎಚ್ಚರಿಕೆ ನೀಡಿದರು. ಇದಾದನಂತರ ಪ್ರಜಾವಾಣಿ ಈ ಪ್ರಕರಣ ಕುರಿತು ಸರಣಿ ವರದಿಗಳನ್ನು ಪ್ರಕಟಿಸಿತು. ಹಾಗೆಯೇ ಇದರ ಬಗ್ಗೆ ಕೆಲ ಪತ್ರಕರ್ತರ ಸಂಘಟನೆಗಳು ದನಿ ಎತ್ತಿದ್ದು.

ಇವತ್ತು ನಾವು ಆಘಾತ ಹುಟ್ಟಿಸುವಂತಹ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಒಂದೆಡೆ ಮಾವೋವಾದಿಗಳ ದಮನದ ನೆಪದಲ್ಲಿ ಮಾನವ ಹಕ್ಕು ಹೋರಾಟಗಾರರ ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲೆ ದಾಳಿಗಳು ನಡೆಯುತ್ತಿವೆ. ಇನ್ನೊಂದೆಡೆ ಹಿಂದೂತ್ವವಾದಿ ಫ್ಯಾಸಿಸಂ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದೆ. ಮಗದೊಂದೆಡೆ ನವ ಆರ್ಥಿಕ ನೀತಿಗಳು ಜನರನ್ನು ಕಂಗಾಲಾಗಿಸುತ್ತಿವೆ. ಇಂತಹ ಸಂದರ್ಭದಲ್ಲಿ ಪ್ರಜಾವಾಣಿ ತರಹದ ಉನ್ನತ ಜನಪರ ಪರಂಪರೆಯ ದೊಡ್ಡ ಪತ್ರಿಕೆಗಳ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ.

ಆ ನಿಟ್ಟಿನಲ್ಲಿ ಪ್ರಜಾವಾಣಿಯನ್ನು ಶಾಂತಕುಮಾರ್ ಅವರು ಮುನ್ನಡೆಸುತ್ತಿರುವುದು ಸ್ವಾಗತಾರ್ಹ. ಹಾಗೆಯೇ ರಾಜ್ಯ ಪೊಲೀಸ್ ಗೂಂಡಾಗಿರಿಯನ್ನು ಹಿಮ್ಮೆಟ್ಟಿಸಿದ ಪ್ರಜಾವಾಣಿ ತಂಡ ಹಾಗೂ ಅದರೊಂದಿಗೆ ದನಿಗೂಡಿಸಿದ ಪತ್ರಕರ್ತರೆಲ್ಲರೂ ಅಭಿನಂದನಾರ್ಹರು. ●

ಮುಖ್ಯಮಂತ್ರಿ ಯಡಿಯೂರಪ್ಪ ಕಳೆದ ವಾರ ಪಾಂಡಿಚೆರಿಗೆ ಹೋಗಿ ಒಂದು ರಹಸ್ಯ ಚಂಡಿಕಾ ಹೋಮ ಮಾಡಿಸಿಬಂದಿದ್ದಾರೆ. ಹಾಗೆಯೇ ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಮೇ 7ನೇ ತಾರೀಖು ಕೊಲ್ಲೂರಿನಲ್ಲಿ ತಾವೂ ಒಂದು ಚಂಡಿಕಾ ಹೋಮ ಮಾಡಿಸಿದ್ದಾರೆ. ಯಾವ ಉದ್ದೇಶಕ್ಕೆ ಈ ಹೋಮಗಳು ಎಂಬುದಕ್ಕೆ ಈ ವ್ಯಂಗ್ಯ ಚಿತ್ರ ನೋಡಿ.





ವೆಂಕಯ್ಯನಾಯ್ಡು

ಗುರು ವೆಂಕಯ್ಯನಿಗೇ ಕಟ್ಟಾ ಬತ್ತಿ

ಒಂದಲ್ಲ ಎರಡು ಬಾರಿ ಕರ್ನಾಟಕದಿಂದ ಆಯ್ಕೆ ಮಾಡಿ ರಾಜ್ಯಸಭೆಗೆ ಕಳಿಸಿದಾಗಲೂ ವೆಂಕಯ್ಯ ನಾಯ್ಡು ಈ ರಾಜ್ಯಕ್ಕೆ ಮಾಡಿದ್ದೇನು? ನಾವು ಕಾರ್ಯಕರ್ತರು ಬರೀ ಕಾರ್ಯಕರ್ತರಾಗೇ ಇರಬೇಕೆ? ರಾಜ್ಯಸಭೆಗೆ ಆಯ್ಕೆಯಾಗೋ ಯೋಗ್ಯತೆ ನಮಗ್ಯಾರಿಗೂ ಇಲ್ಲವೆ? ಎರಡು ಸಾರಿ ವೆಂಕಯ್ಯ ನಾಯ್ಡುಗೆ ಅವಕಾಶ ಕೊಟ್ಟಾಗಿದೆ. ಈ ಬಾರಿ ನಮ್ಮಲ್ಲೇ ಯಾರನ್ನಾದರೂ ಮಾಡಿ. ವೆಂಕಯ್ಯಗೆ ವಯಸ್ಸು ಬೇರೆ ಆಗಿದೆಯಲ್ಲಾ?

ಒಂದೆಡೆ ಈ ಥರದ ಕೊಂಕು, ಕ್ಯಾತೆ, ಅಪಸ್ವರವೊಂದು ಬಿಜೆಪಿ ರಾಷ್ಟ್ರನಾಯಕ ವೆಂಕಯ್ಯ ನಾಯ್ಡು ವಿರುದ್ಧ ದಿನೇದಿನೇ ಉಲ್ಬಣಿಸುವುದಕ್ಕೂ, ಇನ್ನೊಂದೆಡೆ ರಾಜ್ಯಸಭೆಗೆ ಆಯ್ಕೆಯ ದಿನ ಸಮೀಪಿಸುವುದಕ್ಕೂ, ನಿಗೂಢ ಸಂಬಂಧವೊಂದಿದೆ.

ಅದು ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಮತ್ತು ಗುರು ವೆಂಕಯ್ಯ ನಾಯ್ಡು ನಡುವೆ ಹಳಸಿದ ನೆಂಟಸ್ತಿಕೆ!

ನಿನ್ನೆ ಮೊನ್ನೆಯ ತನಕ ವೆಂಕಯ್ಯ ನಾಯ್ಡು ಬೆನ್ನಿಗೆ ಬಂಡೆಕಲ್ಲಿನಂತೆ ನಿಂತಿದ್ದ ಶಿಷ್ಯ ಕಟ್ಟಾ ನಾಯ್ಡು ಈಗ ರಾಜ್ಯಸಭೆಯ ಆಯ್ಕೆಯ ಹೊಸ್ತಿಲಲ್ಲೇ ಉಲ್ಟಾ ಹೊಡೆದದ್ದಕ್ಕೂ ಕಾರಣವಿದೆ. ಹಾಗೇ ಬಿಜೆಪಿಯ ಮತ್ತೊಬ್ಬ ರಾಷ್ಟ್ರನಾಯಕ ಅನಂತ್‌ಕುಮಾರ್ ಮತ್ತು ವೆಂಕಯ್ಯರ ದೋಸ್ತಿ ಹಳಸುವುದಕ್ಕೂ ಕಾರಣವಿದೆ. ಈ ಎಲ್ಲದರ ಅಡ್ಡ ಪರಿಣಾಮ ಈಗ ವೆಂಕಯ್ಯ ತಲೆಗೆ ಸುತ್ತಿಕೊಂಡಿದೆ. ರಾಜ್ಯ ಬಿಜೆಪಿಯ ಒಕ್ಕಲಿಗರ ಸೇನಾನಿ ಆರ್. ಅಶೋಕ್, ಮಹಿಳಾ ನಾಯಕಿ ವಿಮಲಾ ಗೌಡ, ಲಿಂಬಾವಳಿ, ಸಿ.ಟಿ. ರವಿ ಇತ್ಯಾದಿಗಳಲ್ಲದೇ ಅತ್ತ ಬಳ್ಳಾರಿಯ ರೆಡ್ಡಿಗಳೂ ಕೂಡ 'ಇನ್ನು ವೆಂಕಯ್ಯ ಸಹವಾಸ ಸಾಕು.....' ಎಂದು ಪಟ್ಟು ಹಿಡಿದಿರುವುದು ಕೇವಲ ಅನಂತ್‌ಕುಮಾರ್ ಕಾರಣಕ್ಕಷ್ಟೇ ಅಲ್ಲ.

ಒಳಗೊಳಗೇ ಕಟ್ಟಾ ವೆಂಕಯ್ಯನ ವಿರುದ್ಧ ಇವರೆಲ್ಲಾ ಕತ್ತಿ ಮಸೆಯುತ್ತಿರುವುದು ಕೂಡ ಆಂಧ್ರಾವಾಲನ ದುರ್ಗತಿಯ ಇನ್ನೊಂದು ಕಾರಣ.

ಆವತ್ತಿನಿಂದಲೂ ವೆಂಕಯ್ಯ ನಾಯ್ಡು ಮುಖ್ಯಮಂತ್ರಿ ಯಡ್ಡಿಯ ಪಕ್ಕಾ ಸಮರ್ಥಕ. ಆ ಕಾರಣಕ್ಕೇ ಅನಂತ್ ಕುಮಾರ್‌ಗೂ ವೆಂಕಯ್ಯನೂ ಅಷ್ಟಕಷ್ಟೆ. ಅತ್ತ ರಾಷ್ಟ್ರ ಬಿಜೆಪಿಯಲ್ಲಿ ಅನಂತ್‌ಗೆ ದಿನೇದಿನೇ ಡಿಮ್ಯಾಂಡ್ ಸೃಷ್ಟಿಯಾಗಿ, ಜಾರ್ಖಂಡ್ ಸರ್ಕಾರದ ಉಸ್ತುವಾರಿಕೆಯ ಮಹತ್ವದ ಹೊಣೆ ದೊರೆತ ಮೇಲಂತೂ ತನ್ನನ್ನು ಮೀರಿಸಿ ಬೆಳೆಯುತ್ತಿರುವ ಅನಂತ್ ಕಂಡರೇನೇ ವೆಂಕಯ್ಯ ಕರುಬ ತೊಡಗಿದ್ದ. ರಾಷ್ಟ್ರ ಬಿಜೆಪಿಗೇ ಅಧ್ಯಕ್ಷನಾಗಿದ್ದ ತನಗಿಂತಲೂ ಅನಂತ್‌ಗೆ ಹೆಚ್ಚು ಮನ್ನಣೆ ಕೊಡುತ್ತಿದ್ದಕ್ಕೆ ಕಲ್ಲು ಹಾಕುತ್ತಲೇ ಬಂದ ವೆಂಕಯ್ಯ ವಿರುದ್ಧ ಅನಂತ್‌ಗೆ ಒಳಗೊಳಗೆ ಕಿಚ್ಚಿತ್ತು.


'ವೆಂಕಯ್ಯನನ್ನು ಕರ್ನಾಟಕಕ್ಕೆ ಕರೆತಂದದ್ದು ನಾನು. ಪಕ್ಷದ ವಿರೋಧ ಕಟ್ಟಿಕೊಂಡು ರಾಜ್ಯಸಭೆಗೆ ಕಳಿಸಿದ್ದು ನಾನು. ನಾನು ಕರ್ನಾಟಕದಿಂದ ರಾಜ್ಯಸಭೆಗೆ ತರದೇ ಹೋಗಿದ್ದರೆ ವೆಂಕಯ್ಯ ಎಲ್ಲಿ ಬಿಜೆಪಿ ಅಧ್ಯಕ್ಷನಾಗುತ್ತಿದ್ದ? ಅದಕ್ಕೆ ಕೃತಜ್ಞತೆ ಹಾಳಾಗಲಿ ನಾನು ಬೆಳೆಯೋದಕ್ಕೇ ಕೊಕ್ಕೆ ಹಾಕೋದು; ನನ್ನ ವಿರುದ್ಧಾನೇ ಕತ್ತಿ ಮಸೆಯೋದು ಅಂದ್ರೆ ಏನು? ಯಡ್ಡಿಯ ಕುಮ್ಮಕ್ಕಿನಿಂದ ತಾನೇ ವೆಂಕಯ್ಯ ನನ್ನ ವಿರುದ್ಧ ಲಾಬಿ ಮಾಡ್ತಿರೋದು?'

ಹೀಗೆಂದು ವೆಂಕಯ್ಯ ವಿರುದ್ಧ ತನ್ನ ಆಪ್ತೇಷ್ಟರ ಬಳಿ ಗೊಣಗಾಡಿಕೊಂಡೇ ಬಂದ ಅನಂತ್‌ಕುಮಾರ್ ಅಸಹನೆ ಈ ಬಾರಿ ಉಲ್ಬಣಗೊಂಡಿದ್ದರಿಂದಲೇ ಆರ್. ಅಶೋಕ್, ಸಿ.ಟಿ. ರವಿ, ವಿಮಲಾ ಗೌಡ, ಲಿಂಬಾವಳಿ ಮುಂತಾದವರೆಲ್ಲ ವೆಂಕಯ್ಯ ವಿರುದ್ಧ ಲಾಬಿಗಿಳಿದರು. ಇವತ್ತು ಅಂದರೆ ಮೇ 13 ರಂದು ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಯಾರ್‍ಯಾರನ್ನು ಬಿಜೆಪಿಯಿಂದ ಕಣಕ್ಕಿಳಿಸಬೇಕೆಂದು ನಿರ್ಧರಿಸಲೆಂದೇ ಹುಬ್ಬಳ್ಳಿಯಲ್ಲಿ ಆರೆಸ್ಸೆಸ್ ವರಿಷ್ಠ ಮಂಗೇಶ್ ಬೆಂಡೆ ರಹಸ್ಯ ಬೈಠಕ್ ಶುರು ಹಚ್ಚಿಕೊಂಡರೆ ಅದರಲ್ಲಿ ಜಗದೀಶ್ ಶೆಟ್ಟರ್, ಅನಂತ್‌ಕುಮಾರ್ ಮತ್ತು ಈಶ್ವರಪ್ಪ ಮುತುವರ್ಜಿ ವಹಿಸಿ ಭಾಗವಹಿಸಿದ್ದು ಕೂಡ ವೆಂಕಯ್ಯನಿಗೆ ಕೊಕ್ ಕೊಡಲಿಕ್ಕೇನೇ.....!




ಕಟ್ಟಾ

ವಿಧಾನ ಪರಿಷತ್ತಿಗೆ ನಾಲ್ವರನ್ನು, ರಾಜ್ಯಸಭೆಗೆ ಇಬ್ಬರನ್ನು, ಹಾಗೇ ಮಹಿಳಾ ಮಂತ್ರಿಯನ್ನಾಗಿ ಯಾರನ್ನು ತರಬೇಕೆಂಬುದು ಕೂಡ ಆರೆಸ್ಸೆಸ್ ಧೂರ್ತ ಬೇಂಡೆಯ ಅಜೆಂಡಾ ಆಗಿತ್ತು, ಸದ್ಯ ವೆಂಕಯ್ಯ ನಾಯ್ಡು ಬದಲಿಗೆ ಬಿಜೆಪಿಯ ಹಿರಿತಲೆ ವಾಮನಾಚಾರ್ಯರನ್ನು ತರಬೇಕೆಂಬುದು ಅನಂತ್‌ಕುಮಾರ್ ವಾದವಾದರೆ ಎರಡನೇ ಸ್ಥಾನಕ್ಕೆ ವಿಜಯ್ ಮಲ್ಯರನ್ನೇ ತನ್ನಿ ಎಂದು ಯಲಹಂಕದ ವಿಶ್ವನಾಥ್ ಥರದವರು ಹಠಕ್ಕೆ ಬಿದ್ದಿದ್ದಾರೆ. ಹಾಗೊಮ್ಮೆ ಮತ್ತೆ ವೆಂಕಯ್ಯನೇ ನಿಲ್ಲುವುದಾದರೆ ಮಲ್ಯರನ್ನು ಮೂರನೇ ಅಭ್ಯರ್ಥಿಯಾಗಿ ಬಿಜೆಪಿ ಬೆಂಬಲಿಸಬೇಕೆಂಬ ವಾದವೂ ಚಾಲ್ತಿಯಲ್ಲಿದೆ.



ಅನಂತ್‌ಕುಮಾರ್

ಈ ಹಂತದಲ್ಲೇ ವೆಂಕಯ್ಯ ನಾಯ್ಡು ಪರವಾಗಿ ಶಿಷ್ಯ ಕಟ್ಟಾ ನಾಯ್ಡು ಲಾಬಿಗಿಳಿದು ಅನಂತ್, ಮನವೊಲಿಸುತ್ತಾರೆಂಬ ನಿರೀಕ್ಷೆ ಅನೇಕ ಬಿಜೆಪಿ ಶಾಸಕರಿಗಿತ್ತು, ವೆಂಕಯ್ಯ ವಿರುದ್ಧ ಕ್ರುದ್ಧ ಶಾಸಕರನ್ನು ಕಟ್ಟಾ ತಣಿಸಲಿದ್ದಾರೆ ಎಂಬುದೂ ಬಹುತೇಕರ ನಂಬಿಕೆಯಾಗಿತ್ತು, ಹೈದ್ರಾಬಾದಿಗೆ ಹೋಗಿ ಮುಖ್ಯಮಂತ್ರಿ ಯಡ್ಡಿಯ ಕೈಯಲ್ಲೇ ವೆಂಕಯ್ಯ ನಾಯ್ಡು ಜೀವನ ಚರಿತ್ರೆಯನ್ನು ಬಿಡುಗಡೆ ಮಾಡಿಸಿ ಬಂದ ಕಟ್ಟಾ ಬಿಜೆಪಿಯ ಯಾವೊಂದು ವೇದಿಕೆಯಲ್ಲೂ ವೆಂಕಯ್ಯ ಪರ ದನಿಯೆತ್ತಲಿಲ್ಲ,



ಆರ್.ಅಶೋಕ್

ಇತ್ತ ಬೆಂಗಳೂರಿನ ಬಹುತೇಕ ಶಾಸಕರೆಲ್ಲ ಯಲಹಂಕದ ವಿಶ್ವನಾಥ್, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ ನೇತೃತ್ವದಲ್ಲಿ ಪಕ್ಷಾಧ್ಯಕ್ಷ ಈಶ್ವರಪ್ಪನವರನ್ನು ಕಂಡು ವೆಂಕಯ್ಯ ವಿರುದ್ಧ ಮನವಿ ಕೊಟ್ಟರು. ಮತ್ತೊಂದೆಡೆ ಕರಾವಳಿ ಮತ್ತು ಉ.ಕ ಭಾಗದ ಕೆಲ ಶಾಸಕರು ಈ ಬಾರಿ ಕರ್ನಾಟಕದವರನ್ನೇ ರಾಜ್ಯಸಭೆಗೆ ಆಯ್ಕೆ ಮಾಡುವಂತೆ ಪ್ರತ್ಯೇಕವಾಗಿ ಮನವಿ ಸಲ್ಲಿಸತೊಡಗಿದ್ದರು. ಕಟ್ಟಾ ಮಾತ್ರ ವೆಂಕಯ್ಯ ಪರವಹಿಸಿ ನಯಾಪೈಸೆಯ ಆಸಕ್ತಿಯನ್ನೂ ತೋರಲೇ ಇಲ್ಲ,

ಇಷ್ಟಕ್ಕೂ ಕಟ್ಟಾ ಮತ್ತು ವೆಂಕಯ್ಯ ನಾಯ್ಡು ಸಂಬಂಧ ಹಳಸಿದ್ದೇ ಗೃಹ ಮಂಡಳಿಯ ಭೂಖರೀದಿ ಕರ್ಮಕಾಂಡದಿಂದ ಎಂದು ಕಟ್ಟಾ ಆಪ್ತರೇ ಗುಲ್ಲೆಬ್ಬಿಸುತ್ತಿದ್ದಾರೆ. ನೆಲಮಂಗಲ-ತುಮಕೂರು ರಸ್ತೆಯಲ್ಲಿ ಮುನ್ನೂರು ಎಕರೆ ಭೂಮಿ ಖರೀದಿಸಿ ಅಲ್ಲೊಂದು ಹೊಸ ಲೇಔಟ್ ನಿರ್ಮಿಸುವ ಯೋಜನೆಯನ್ನು ವಸತಿ ಮಂತ್ರಿಯಾಗಿ ಕಟ್ಟಾನೇ ರೂಪಿಸಿದ್ದನಂತೆ. ಗೃಹ ಮಂಡಳಿಗೆ ಬೇಕಾದ ಜಮೀನನ್ನು ರೈತರಿಂದ ಖರೀದಿಸಿ ಅದನ್ನು ಮತ್ತೆ ಗೃಹ ಮಂಡಳಿಗೆ ಹೆಚ್ಚಿಗೆ ರೇಟಿಗೆ ಮಾರುವುದು ವೆಂಕಯ್ಯ ನಾಯ್ಡು ಉದ್ದೇಶವಾಗಿತ್ತು, ತನ್ನ ಬೇನಾಮಿ ಸುಬ್ಬರಾಜು ಎಂಬಾತ ನನ್ನು ಬಿಟ್ಟು ನೆಲಮಂಗಲ- ತುಮಕೂರು ಮಧ್ಯೆ ನೂರೆಕರೆಯನ್ನು ಈ ಹೊತ್ತಿಗಾಗಲೇ ವೆಂಕಯ್ಯ ಖರೀದಿಸಿದ್ದ.

ಎಕರೆಗೆ ಕನಿಷ್ಠ ಇಪ್ಪತ್ತು ಲಕ್ಷದಂತೆ ಹೆಚ್ಚಿನ ರೇಟಿಗೆ ಕೆಎಚ್‌ಬಿ ವೆಂಕಯ್ಯನ ಬೇನಾಮಿಯಿಂದ ಜಮೀನು ಖರೀದಿಸಿದರೆ ಮುನ್ನೂರು ಎಕರೆಗದೇ ಅರವತ್ತು ಕೋಟಿ ದೀಲಾಗುತ್ತದೆ. ಇದರಲ್ಲಿ ಅರ್ಧಕ್ಕರ್ಧ ಪಾಲು ಹಂಚಿಕೊಳ್ಳುವ ಮಾತೂ ಆಗಿತ್ತಂತೆ. ಇಷ್ಟೆಲ್ಲಾ ಬಂಡವಾಳ ಹಾಕುವವನು ನಾನು, ನಿನಗೆ ಅರ್ಧಕ್ಕರ್ಧ ಕೊಟ್ಟರೆ ನನಗೇನು ಉಳಿಯುತ್ತೆ? ಅದಕ್ಕೆ ಎಕರೆಗೆ ಇನ್ನೂ ಹತ್ತು ಲಕ್ಷ ಹೆಚ್ಚು ಮಾಡಿ ಅದನ್ನು ಬೇಕಾದರೆ ನೀನೇ ಇಟ್ಟುಕೋ ಎಂದನಂತೆ ವೆಂಕಯ್ಯ. ಇದು ಕಟ್ಟಾಗೆ ಒಪ್ಪಿಗೆಯಾಗದೇ ಎಕರೆಗೆ ಇಪ್ಪತ್ತು ಲಕ್ಷವೇ ದೊಡ್ಡ ದುಡ್ಡು. ಇನ್ನೂ ಹತ್ತು ಲಕ್ಷ ಹೆಚ್ಚಿಗೆ ಕೊಟ್ಟರೆ ನಾನು ಜೈಲುಪಾಲಾಗುತ್ತೇನೆ ಎಂದು ಹಿಂದೇಟು ಹಾಕಿದ್ದ ಕಟ್ಟಾ ಯೋಜನೆಯನ್ನೇ ರದ್ದು ಗೊಳಿಸುತ್ತೇನೆಂದು ಮಾತು ಮುರಿದನಂತೆ.

ಅದಕ್ಕೆ ನಿನಗೇನು ಈ ಪಾಟಿ ಕಮಿಷನ್ ಕೊಡೋದು? ಮುಖ್ಯಮಂತ್ರಿ ಯಡ್ಡಿಗೆ ಎಕರೆಗೆ ಐದು ಲಕ್ಷ ಕೊಟ್ಟು ಕೆಲಸ ಮಾಡಿಸಿಕೊಳ್ತೀನಿ ಎಂದು ತಿರುಗೇಟು ಕೊಟ್ಟನಂತೆ ವೆಂಕಯ್ಯ. ಇಬ್ಬರಿಗೂ ಈ ಕಾರಣಕ್ಕೇ ಸಂಬಂಧ ಹಳಸಿತೆಂಬುದು ಕಟ್ಟಾ ಆಪ್ತರ ವಾದವಾದರೆ, ಯಾವುದೋ ಲ್ಯಾಂಡ್ ಡೀಲಿನಲ್ಲಿ ವೆಂಕಯ್ಯ ನಾಯ್ಡುಗೇ ಕಟ್ಟಾ ಟೋಪಿ ಇಟ್ಟನಂತೆ ಎಂಬ ಮಾತೂ ಕೇಳಿಬರುತ್ತಿದೆ.

ಸದ್ಯ ವೆಂಕಯ್ಯ ನಾಯ್ಡು ವಿರುದ್ಧದ ಲಾಬಿಯಲ್ಲಿ ಕಟ್ಟಾ ನಾಯ್ಡು ಹೆಸರೂ ಮುಂಚೂಣಿಯಲ್ಲಿದೆ. ಯಡ್ಡಿಯ ಹೊರತಾಗಿ ವೆಂಕಯ್ಯನ ಬೆಂಬಲಕ್ಕೆ ಮತ್ತೊಬ್ಬ ಬಿಜೆಪಿ ನಾಯಕನ ಹೆಸರೇ ಕೇಳಿಬರುತ್ತಿಲ್ಲ, ಬಿಜೆಪಿಯ ರಾಷ್ಟ್ರಾಧ್ಯಕ್ಷನಾಗಿದ್ದ ನಾಯ್ಡು ಗತಿ ಕೊನೆಕೊನೆಗೆ ಯಾವ ಮಟ್ಟಕ್ಕೆ ಬಂತು?

• ರಾ.ಸೋ.

ಹುಬ್ಬಳ್ಳಿ: ಪೋಲೀಸರನ್ನೇ ಹೊಡೆಯುವ ರೌಡಿಗಳು!


ಹುಬ್ಬಳ್ಳಿಯನ್ನು ಏರಿಯಾವೈಸ್ ಹಂಚಿಕೊಂಡಿರುವ ರೌಡಿ ಮಹಾಶಯರೀಗ ಪೊಲೀಸರಿಗೂ ಹೆದರುತ್ತಿಲ್ಲ, ಇಷ್ಟು ದಿನ ಈ ರೌಡಿಗಳನ್ನು ಬೆಳೆಯಲು ಬಿಟ್ಟ ಹಿರಿಯ ಅಧಿಕಾರಿಗಳೇ ಇದಕ್ಕೆಲ್ಲ ಕಾರಣ. ಪಾಪ, ಬಡಪಾಯಿ ಪೊಲೀಸರು ಏನೂ ಮಾಡುವಂತಿಲ್ಲ...

ಸೆಟ್ಲಮೆಂಟು, ಗಣೇಶಪೇಟೆ, ಹೊಸೂರು, ಹಳೇಹುಬ್ಬಳ್ಳಿ, ಉಣಕಲ್- ಈ ಎಲ್ಲ ಏರಿಯಾಗಳಿಗೂ ಒಬ್ಬೊಬ್ಬ ರೌಡಿದೊರೆಗಳು. ಇಲ್ಲಿ ದೀಲಿಂಗುಗಳು ಸುಲಭವಾಗಿ ನಡೆಯುತ್ತವೆ, ಸುಲಿಗೆಗಳು ಸಲೀಸಾಗಿ ಜರುಗುತ್ತವೆ. ಇದರಲ್ಲಿ ಪೊಲೀಸರಿಗೆ ಅಷ್ಟಿಷ್ಟು ಸಿಗುತ್ತೆ ನಿಜ. ಆದರೆ ರೌಡಿಗಳಿಗ್ಯಾರಿಗೂ ಪೊಲೀಸರ ಭಯವೇ ಇಲ್ಲ,

ಸೆಟ್ಲಮೆಂಟಿನಲ್ಲಿ ಜಾಧವ, ಬಿಜವಾರ್ಡ ಗ್ಯಾಂಗ್, ಯಲ್ಲಾಪೂರ ಓಣಿಯಲ್ಲಿ ಕೋಳೂರ್ ಟೀಮ್, ಗಣೇಶಪೇಟೆಯಲ್ಲಿ ಆರೀಫ್, ಮುಜಾವರ್, ಭದ್ರಾಪೂರ, ರಾಕೇಶ್, ಬಸವರಾಜ ಮುಂತಾದ ರೌಡಿಗುಂಪುಗಳು ಪ್ರಾಬಲ್ಯ ಹೊಂದಿದೆ. ಗೋಪನಕೊಪ್ಪದಲ್ಲಿ ರಾಮನಗೌಡ್ರ ಗ್ಯಾಂಗ್, ಹಳೇಹುಬ್ಬಳ್ಳಿಯಲ್ಲಿ ಕಿತ್ತೂರನ ಗೂಂಡಾಗುಂಪು, ಹೊಸೂರಿನಲ್ಲಿ ಹಿರೇಕರೂರನ ಶಿಷ್ಯರು ಠಳಾಯಿಸುತ್ತಿದ್ದಾರೆ.



ಅಂದಂತೆ ಇಲ್ಲಿ ಹಿಂದೂತ್ವದ ಅಮಲಿನ ಪಟ್ಟೇಗಾರರು ಈ ಲಿಸ್ಟಿನಲ್ಲಿ ಇರುವಂತೆ, ದಲಿತ ಮತ್ತು ಅಲ್ಪಸಂಖ್ಯಾತ ಗೂಂಡಾಗಳೂ 'ಪ್ರಗತಿಪರ'ವಾಗಿ ರೌಡಿಸಂ ನಡೆಸುತ್ತಿದ್ದಾರೆ.



ಸೆಟ್ಲ್‌ಮೆಂಟ್ ಸ್ಟೋರಿ

ಬ್ರಿಟಿಷರ ಕಾಲದಲ್ಲಿ ಈ 'ಸೆಟ್ಲಮೆಂಟು' ಎಂಬ ಪದ ಹುಟ್ಟಿಕೊಂಡಿತು. ಕೊರವರು, ಹರಣಶಿಕಾರಿ ಸಮುದಾಯದವರು, ಭೋವಿಗಳು ವಾಸಿಸುತ್ತಿದ್ದ ಜಾಗವನ್ನು ಆಗ ಸೆಟ್ಲಮೆಂಟು ಎನ್ನಲಾಗುತ್ತಿತ್ತು, ಸಣ್ಣಪುಟ್ಟ ಕಳ್ಳತನಗಳಲ್ಲಿ ಭಾಗಿಯಾಗುತ್ತಿದ್ದ ಈ ಸಮುದಾಯದವರು ಮುಂದೆ ವಿದ್ಯೆ ಪಡೆದು ನಾಗರಿಕ ಸಮಾಜದೊಂದಿಗೆ ಬೆರೆಯುತ್ತಾ ಬಂದಿದ್ದಾರೆ. ದಿ.ವಾಸು ಬಳ್ಳಾರಿಯಂತಹ ಹಾಕಿ ಪ್ರತಿಭೆಯನ್ನು ರಾಷ್ಟ್ರಕ್ಕೆ ನೀಡಿದ್ದಾರೆ. ಗದುಗಿನ ರಾಜು ಬಗಾಡೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದರೆ ಅದೇ ಗದುಗಿನ ಹನುಮಂತಪ್ಪನಂಥವರು ರಾಷ್ಟ್ರಮಟ್ಟದ ಹಾಕಿಯಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಹೀಗೆ ಸಾಕಷ್ಟು ಸಾಧನೆ ಮಾಡಿದ ಈ ಸಮುದಾಯದ ಒಂದಿಷ್ಟು ಯುವಕರು ರಾಜಕಾರಣಿಗಳ ಅಸ್ತ್ರಗಳಾಗಿ ಬಳಕೆಯಾಗುತ್ತಿರುವುದು ವಿಷಾದಕರ ವಿಷಯವೇ ಆಗಿದೆ.

ಆದರೆ ಈ ಕೆಲವರ ಹೊರತಾಗಿ ಸೆಟ್ಲಮೆಂಟಿನ ಬಹುತೇಕ ಜನ ಸಮಾಜಮುಖಿಯಾಗಿ ಬದುಕುತ್ತಿದ್ದಾರೆ. ಎಂ.ಎಂ.ಗೋಕಾಕರು ಇಂತಹ ಪರಿಸರದಲ್ಲೇ ಬೆಳೆದು ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ಗೋಕಾಕ್, ಚೇದಪ್ಪ ಕಟ್ಟಿಮನಿಯಂತವರು ಎಲ್ಲ ಸಮುದಾಯಗಳ ಬೆಂಬಲಪಡೆದು ಮಹಾನಗರ ಪಾಲಿಕೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಪ್ರಕಾಶ್ ಕ್ಯಾರಕಟ್ಟಿ ಮೇಯರ್ ಕೂಡಾ ಆಗಿದ್ದರು.

ಹೊಸೂರಿನ ಹಿರೇಕೆರೂರು ಕುಟುಂಬ ಮೊದಮೊದಲು ರೌಡಿಸಂಗೆ ಹೆಸರಾಗಿತ್ತು, ಲಕ್ಷ್ಮಣ ಹಿರೇಕೆರೂರು ಸತ್ತ ನಂತರ ಆತನ ಸಹೋದರ ಸಂತೋಷ ಹಿರೇಕೆರೂರ್ ಪಾಲಿಕೆ ಸದಸ್ಯನಾದ. ಆದರೆ ರೌಡಿಸಂನಿಂದ ಇನ್ನೂ ಪೂರ್ತಿ ಮುಕ್ತಗೊಂಡಿಲ್ಲ,

ಪ್ರಶ್ನೆ ಏನಪಾ ಅಂದರೆ ಇಲ್ಲಿ ದಲಿತರು, ಹಿಂದುಳಿದವರು, ರಾಜಕಾರಣಿಗಳ ಚದುರಂಗದಾಟದ ಪಗಡೆಗಳಾಗಿದ್ದಾರೆ. ಇದರ ಪರಿಣಾಮವಾಗಿ ಮೊನ್ನೆ ಸೆಟ್ಲಮೆಂಟಿನಲ್ಲೊಂದು ಘಟನೆ ನಡೆದಿದೆ. ರವಿ ಜಾಧವ ಮತ್ತು ಮೊಹ್ಮದ್ ಕೋಳೂರು ಎಂಬಿಬ್ಬರು ಪುಡಿರೌಡಿಗಳ ನಡುವೆ ಮಾರಾಮಾರಿ ನಡೆದಿದೆ.




ಗಲಾಟೆ ತಡೆಯಲು ಬಂದ ಪೊಲೀಸರಿಗೆ ಮಚ್ಚಿನೇಟು ಬಿದ್ದಿವೆ. ಡಿವೈಎಸ್ಪಿ ಚಾಂದಿರಾಮ್ ಸಿಂಗ್ ಮಾತ್ರ ಏನೂ ಆಗೇ ಇಲ್ಲ ಎಂಬಂತೆ ಆಕಳಿಸುತ್ತಾ ಮಲಗಿದ್ದಾನೆ.

ಪೊಲೀಸರೇ ಬೆಳೆಸಿದ ರೌಡಿಗಳೀಗ ಪೊಲೀಸರಿಗೆ ತಲವಾರ್‌ನ ರುಚಿ ತೋರಿಸುತ್ತಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳೀಯ ರಾಜಕಾರಣಿಗಳು ಜಾಗೃತಿ ವಹಿಸದಿದ್ದರೆ, ರೌಡಿಗುಂಪುಗಳು ಪೊಲೀಸ್ ಠಾಣೆಗಳನ್ನೇ ವಶಮಾಡಿಕೊಳ್ಳಬಹುದು.

• ಹುಬ್ಬಳ್ಳಿಯಾವ



ರೆಡ್ಡಿ ಹೇಳಿದ ಐದು ಸುಳ್ಳುಗಳು

ಈ ಗಾಲಿ ರೆಡ್ಡಿ ಬ್ರದರ್ಸ್ ಬಗ್ಗೆ ನಿಜಕ್ಕೂ ಆಶ್ಚರ್ಯ ಪಡಬೇಕು.

ಸತ್ತದ ತಲೆಯ ಮೇಲೆ ಹೊಡೆದಂತೆ ಸುಳ್ಳು ಹೇಳುವುದು, ಇಲಿ ಹೋದರೆ ಹುಲಿನೇ ಹೋಯ್ತು ಎನ್ನುವುದು ಅವರಿಗೆ ಸಲೀಸು.

ಮೊನ್ನಿನ ಸುಪ್ರೀಂಕೋರ್ಟಿನ ಒಂದು ಮಧ್ಯಂತರ ಆದೇಶ ಕುರಿತಂತೆ ಜನಾರ್ದನ ರೆಡ್ಡಿ ಗ್ಯಾಂಗ್ ಅತ್ಯುತ್ಸಾಹದ ಪ್ರತಿಕ್ರಿಯೆ ನೀಡಿದೆ. ತಾವೇನೊ ದೇಶವನ್ನೇ ಜಯಿಸಿದಂತೆ, ತಮ್ಮ ವಿರುದ್ಧದ ಎಲ್ಲಾ ಕಳಂಕಗಳೂ ಒಂದೇ ಬಾರಿಗೆ ಅಳಿಸಿಹೋದಂತೆ ಬಿಂಬಿಸುತ್ತಿದ್ದಾರೆ.

ಆದರೆ, ವಾಸ್ತವದಲ್ಲಿ ಸುಪ್ರೀಂಕೋರ್ಟಿನ ಮಾತುಗಳು ಈ ರೆಡ್ಡಿಗಳು ಹೇಳಿಕೊಳ್ಳುತ್ತಿರುವಷ್ಟೇನೂ ಅವರ ಪರ ಇಲ್ಲ. ಮೊನ್ನಿನ ತೀರ್ಪಿನ ಸಾರಾಂಶ ಇಷ್ಟೆ:

ಆಂಧ್ರ ಸರ್ಕಾರದ ಅರಣ್ಯ ಇಲಾಖೆಯ ಓಬಳಾಪುರಂ ಮೈನಿಂಗ್ ಕಂಪನಿಯ ವಿರುದ್ಧ ಅರಣ್ಯ ಪ್ರದೇಶ ಒತ್ತುವರಿ, ಅಕ್ರಮ ಅದಿರು ಕಳ್ಳತನ, ತೆರಿಗೆ ವಂಚನೆ, ಗಡಿ ಗುರುತು ನಾಶದ ಆರೋಪ ಹೊರಿಸಿ 6.11.2009, 20.11.2009 ಹಾಗೂ 23.11.2009 ರಲ್ಲಿ ಸರ್ಕಾರಕ್ಕೆ ವರದಿ ನೀಡಿತ್ತು, ಅದನ್ನಾಧರಿಸಿ ಆಂಧ್ರ ಸರ್ಕಾರ ರೆಡ್ಡಿಗಳಿಗೆ ನೀಡಿದ್ದ ಗಣಿಗಾರಿಕೆ ಪರವಾನಗಿಗೆ ಕೆಲ ನಿರ್ಬಂಧ ವಿಧಿಸಿ ಗಣಿಗಾರಿಕೆ ನಿಲ್ಲಿಸುವಂತೆ ಆದೇಶಿಸಿತ್ತು, ಇದನ್ನು ಪ್ರಶ್ನಿಸಿ ರೆಡ್ಡಿ ಆಂಧ್ರ ಹೈಕೋರ್ಟಿಗೆ ಅಪೀಲು ಹೋದ. ಅಲ್ಲಿನ ಕೋರ್ಟ್ ಗಣಿಗಾರಿಕೆ ಮುಂದುವರೆಸಲು ಅನುಮತಿ ನೀಡಿತ್ತು, ಇದನ್ನು ಪ್ರಶ್ನಿಸಿ ಆಂಧ್ರ ಸರ್ಕಾರ 2010 ರ ಜನವರಿ 14 ರಂದು ಸುಪ್ರೀಂಕೋರ್ಟಿನ ರಜಾಕಾಲದ ವಿಶೇಷ ಬೇಂಚ್‌ನಲ್ಲಿ ಇನ್ನೊಂದು ಅರ್ಜಿ ಸಲ್ಲಿಸಿತ್ತು. ಎಲ್ಲಾ ವಿವಾದಗಳು ಬಗೆಹರಿಯುವ ತನಕ ಓಬಳಾಪುರಂ ಕಂಪನಿ ಆಂಧ್ರದಲ್ಲಿ ಗಣಿಗಾರಿಕೆ ನಡೆಸದಂತೆ ತಡೆಯುವ ಪ್ರಯತ್ನ ಅದಾಗಿತ್ತು, ಪ್ರಧಾನವಾಗಿ ಆಂಧ್ರ ಹೈಕೋರ್ಟಿನ ಮಧ್ಯಂತರ ತೀರ್ಪಿಗೆ ತಡೆ ನೀಡುವಂತೆ ಆಂಧ್ರ ಸರ್ಕಾರ ಸುಪ್ರೀಂಕೋರ್ಟನ್ನು ಕೋರಿತ್ತು, ಈಗ ಸುಪ್ರೀಂಕೋರ್ಟ್ ಹೇಳಿರುವುದು ಇಷ್ಟೆ:

ವಿವಾದವಿರದ ಪ್ರದೇಶದಲ್ಲಿ ಮಾತ್ರ ಓಬಳಾಪುರಂ ಕಂಪನಿ ಗಣಿಗಾರಿಕೆ ಮುಂದುವರೆಸಬಹುದು ಎಂದು.

ಇದರರ್ಥ ರೆಡ್ಡಿಗಳು ಸಾಚಾ ಎಂದಲ್ಲ, ಇವರು ಕದ್ದು ಮಾರಿಕೊಂಡಿರುವ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆಯ ಕಬ್ಬಿಣದ ಅದಿರಿನ ವ್ಯವಹಾರ ಕಾನೂನುಬದ್ಧವಾಗಿದೆ ಎಂದೂ ಕೋರ್ಟ್ ಹೇಳಿಲ್ಲ, ಕರ್ನಾಟಕ-ಆಂಧ್ರ ನಡುವಿನ ಗಡಿಯನ್ನು ರೆಡ್ಡಿಗಳು ನಾಶ ಮಾಡಿಲ್ಲ ಎಂತಲೂ ಕೋರ್ಟ್ ಹೇಳಿಲ್ಲ, ಇದೆಲ್ಲಾ ಇನ್ನು ವಿಚಾರಣೆಗಾಗಿ ಬಾಕಿ ಉಳಿದಿದೆ. ಮಧ್ಯಂತರ ತೀರ್ಪು ನೀಡಿರುವ ನ್ಯಾಯಮೂರ್ತಿ ವರ್ಮಾ "ಸರ್ವೆ ತಂಡ ಸ್ಥಳಕ್ಕೆ ಬಂದಾಗ ಗಣಿಗಾರಿಕೆ ನಿಲ್ಲಿಸುವಂತೆಯೂ" ಆದೇಶಿಸಿದ್ದಾರೆ. ಕಿಲಾಡಿ ರೆಡ್ಡಿ ಇದರ ಬಗ್ಗೆ ಮೊನ್ನಿನ ಪತ್ರಿಕಾಗೋಷ್ಠಿಯಲ್ಲಿ ಮಾತೇ ಆಡಿಲ್ಲ.

ಸರ್ವೆ ಆಫ್ ಇಂಡಿಯಾ 2009 ರ ನವೆಂಬರ್‌ನಲ್ಲಿ ನೀಡಿರುವ ವರದಿಯು ಈ ರೆಡ್ಡಿಗಳು ಗಡಿ ಒತ್ತುವರಿ ಮಾಡಿರುವ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ರೆಡ್ಡಿಗಳ ಗಣಿ ದಂಧೆಗೆ ಸಂಬಂಧಿಸಿದಂತೆ ಕೆಲವು ವಿವಾದಿತ ಹಾಗೂ ಒಂದೆರಡು ವಿವಾದವಿರದ ಗಣಿಗಳಿವೆ.

ಸುಪ್ರೀಂ ಕೋರ್ಟ್ ಇದನ್ನು ಗಮನಿಸಿ ವಿವಾದವಿರದೆಡೆ ಮಾತ್ರ ಗಣಿಗಾರಿಕೆ ಮಾಡಿಕೊಳ್ಳಿ ಎಂದಿದೆ ಮಾತ್ರ. ಉಳಿದಂತೆ ಇನ್ನೆರಡು ತಿಂಗಳಲ್ಲಿ ಸೆಂಟ್ರಲ್ ಎಂಪವರ್ ಕಮಿಟಿಯ ವರದಿ ಕೋರ್ಟಿಗೆ ಸಲ್ಲಿಕೆಯಾಗಲಿದೆ. ಜೊತೆಗೆ ಕರ್ನಾಟಕ ಲೋಕಾಯುಕ್ತರ ತನಿಖಾ ವರದಿ ಸರ್ಕಾರದ ಕೈ ಸೇರಲಿದೆ.


ಈಗ ರೆಡ್ಡಿ

"ಸತ್ಯವೆ ನಮ ತಾಯಿ ತಂದೆ
ಸತ್ಯವೆ ನಮ ಬಂಧು-ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು"

ಎಂದು ಅಭಿನವ ಸತ್ಯ ಹರಿಶ್ಚಂದ್ರನಂತೆ ಗೀತ ಗಾಯನ ಮಾಡುತ್ತಿದ್ದಾನೆ.

ಕನ್ನಡ ದಿನಪತ್ರಿಕೆಗಳು ಸುಪ್ರೀಂ ಕೋರ್ಟಿನ ಅಭಿಪ್ರಾಯವನ್ನು ವಿವರವಾಗಿ ಓದದೆ, ರೆಡ್ಡಿ ತನಗೆ ತಾನೇ ಕೊಟ್ಟುಕೊಂಡಿರುವ 'ಕ್ಲೀನ್ ಚಿಟ್' ಅನ್ನು ನಿಜ ಎಂದು ಭಾವಿಸಿದ್ದು ಮಾತ್ರ ಆಶ್ಚರ್ಯಕರವಾಗಿದೆ.

'ಲಂಕೇಶ್' ವರದಿಗಾರನಿಗೆ ಕೊಲೆ ಬೆದರಿಕೆ



ತಹಸೀಲ್ದಾರ್ ಶಿವೇಗೌಡ

ಕಳೆದ ಸಂಚಿಕೆಯಲ್ಲಿ 'ಮೂಡಿಗೆರೆ: ನುಂಗುಬಾಕ ತಹಸೀಲ್ದಾರನಿಂದ ನಕಲಿ ಜಾತಿ ಪ್ರಮಾಣಪತ್ರಗಳು' ವರದಿಯನ್ನು ಲಂಕೇಶ್ ಪ್ರಕಟಿಸಿತ್ತು. ಪತ್ರಿಕೆ ಮಾರುಕಟ್ಟೆಗೆ ಬರುತ್ತಿದ್ದಂತೆ ಜನರು ಮುಗಿಬಿದ್ದು ಪತ್ರಿಕೆಯನ್ನು ಖರೀದಿ ಮಾಡಿದ್ದರು. ಖಾಲಿಯಾದ ಬಳಿಕ ಅನಾಮಿಕರ್‍ಯಾರೋ ಮೂಡಿಗೆರೆಯಾದ್ಯಂತ ವರದಿಯ ಜೆರಾಕ್ಸ್ ಪ್ರತಿ ಮಾಡಿ ಹಂಚಿದ್ದರು. ಆ ಮಟ್ಟಿಗೆ ಈ ವರದಿ ಪ್ರಭಾವ ಬೀರಿತ್ತು.

ಆ ವರದಿಯಲ್ಲಿ ಪ್ರಸ್ತಾಪಿಸಲಾಗಿದ್ದ ಕಾಂಗ್ರೆಸ್ಸಿಗ ಹೇಮಶೇಖರನ ಜನ್ಮ ಜಾತಕ ಬಿಡಿಸಲು ಹೊರಟರೆ ಅದೊಂದು ಥ್ರಿಲ್ಲಿಂಗ್ ಕಾದಂಬರಿಯಾಗಬಹುದು. ಮೂಡಿಗೆರೆಯ ಆಶ್ರಯ ಕಾಲೇಜಿನ ಮಹಾ ಪೋಷಕನ ಸ್ಥಾನವನ್ನು ಈತ ಆಕ್ರಮಿಸಿಕೊಂಡಿದ್ದಾನೆ. ಸದರಿ ಕಾಲೇಜಿನ ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿಯವರನ್ನು ಹೊರತುಪಡಿಸಿದರೆ ಬೇರೆ ಪ್ರಬಲ ಕೋಮಿನವರಿಗೆ ಅವಕಾಶ ನೀಡುವಂತಿಲ್ಲ. ಆದರೂ ಒಕ್ಕಲಿಗನಾದ ಹೇಮಶೇಖರ ಆ ಸ್ಥಾನವನ್ನು ಕಬಳಿಸಿಕೊಂಡಿದ್ದಾನೆ.

ಆತನ ಇಂತಹ ದುರಾಚಾರಗಳ ಬಗ್ಗೆ 'ಲಂಕೇಶ್' ವರದಿ ಮಾಡಿರುವುದು ತಿಳಿಯುತ್ತಿದ್ದಂತೆ ಹೇಮಶೇಖರ ಅಜೀಜ್ ಕಿರುಗುಂದ ಅವರನ್ನು ಕೊಲೆ ಮಾಡಿಸುವುದಾಗಿ ತನ್ನ ಆಪ್ತೇಷ್ಟರಲ್ಲಿ ಹೇಳಿಕೊಂಡು ತಿರುಗಾಡತೊಡಗಿದ್ದಾನೆ. ಆತನೊಂದಿಗೆ ತಹಸೀಲ್ದಾರ ಶಿವೇಗೌಡ ಕೂಡ ಕೈಜೋಡಿಸಿದ್ದಾನೆ.

ಗ್ರಾಪಂ ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಹೇಮಶೇಖರ ಮತ್ತು ರಾಜಶೇಖರ ಇವರಿಬ್ಬರ ಮೇಲಿದ್ದ ಹಳೆಯ ಕ್ರಿಮಿನಲ್ ಮೊಕದ್ದಮೆಗಳ ಕುರಿತಾಗಿ ಘೋಷಣಾ ಪತ್ರದಲ್ಲಿ ಉಲ್ಲೇಖಿಸದೇ ವಂಚಿಸಿದ್ದಾರೆ. ಘೋಷಣಾ ಪತ್ರವನ್ನು ಚುನಾವಣಾಧಿಕಾರಿಯು ಸೂಚನಾಫಲಕದಲ್ಲಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸದೇ ಕ್ರಿಮಿನಲ್‌ಗಳೊಂದಿಗೆ ಶಾಮೀಲಾಗಿದ್ದಾರೆ. ಈ ಕುರಿತಾಗಿ ಸಂಬಂಧಪಟ್ಟವರು ಸೂಕ್ತವಾದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕಾನೂನು ಕ್ರಮ ಕೈಗೊಳ್ಳಬೇಕಿದೆ.

ಎಸ್ಸೆಂ ಕೃಷ್ಣನಿಗೆ ಮಂಡ್ಯದ ಜನ ಇನ್ನೂ ಅಭಿನಂದಿಸಿಲ್ಲವಂತಲ್ಲಾ!

ಎಂಭತ್ತರ ಸಮೀಪಕ್ಕೆ ಬರುತ್ತಿರುವ ಎಸ್.ಎಂ. ಕೃಷ್ಣ ಹೊಸ ಉಪ್ಪು ಮೆಣಸಿನ ವಿಗ್‌ನೊಂದಿಗೆ ಬೆಂಗಳೂರಿಗೆ ಬಂದಿದ್ದಾರೆಂಬ ಸುದ್ದಿ ಬರಲಾಗಿ, ಇಂತಹ ಅಪರೂಪದ ಸುರಸುಂದರಾಂಗನನ್ನು ನೋಡಿ ಕುಶಲ ಕೇಳದಿದ್ದರೆ ಹೇಗೆ ಅನ್ನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ಫೋನ್ ರಿಂಗಾಯ್ತು,

ರಿಂಗ್ ಟೋನ್: ಕೃಷ್ಣಾ ನೀ ಬೇಗನೆ ಬಾರೊ, ಬೇಗಾನೆ ಬಂದೂ....."

"ಹಲೋ ಯಾರು?"

"ನಮಸ್ಕಾರ ಸಾರ್, ನಾನು ಯಾಹು ಅಂತ, ಪತ್ರಕರ್ತ."

"ಯಾವ ಪತ್ರಿಕೆ?"

"ಲಂಕೇಶ್ ವಾರ ಪತ್ರಿಕೆ ಸಾರ್. ಒಂದು ಸಾರಿ ನೀವು ಲಂಕೇಶ್‌ರನ್ನು ನೋಡಕ್ಕೆ ಬಂದಾಗ ನಿಮ್ಮೆದುರಿಗೆ ಕುಳತಿದ್ನಲ್ಲ ನಾನೆ ಸಾರ್."

"ಗೊತ್ತು, ನೋಡಿ, ಲಂಕೇಶರದ್ದು ಅದೇ ಕಡೆ ಭೇಟಿ ಆಯ್ತು."

"ಈಗ ನಿಮ್ಮನ್ನ ಭೇಟಿ ಆಗಬೇಕಲ್ಲ ಸಾರ್?"

"ನಾನಾಗ್ಲೆ ಹೊರಟಿದ್ದೀನಿ. ಎಡಿಯೂರಪ್ಪನವರು ಬೇರೆ ಬರ್ತಾಯಿದಾರೆ. ಇನ್ನೊಮ್ಮೆ ಭೇಟಿಯಾಗೋಣ."

"ತಾವು ವಿದೇಶಾಂಗ ಸಚಿವರಾಗಿದ್ದಕ್ಕೆ ಅಭಿನಂದನೆ ಸಾರ್."

"ಥ್ಯಾಂಕ್ಸ್. ನಮ್ಮ ಮಂಡ್ಯ ಜಿಲ್ಲೆಯವರು ನನ್ನನ್ನು ಇನ್ನೂ ಅಭಿನಂದಿಸಿಲ್ಲ."

"ನೀವು ಮದ್ದೂರು ಬಿಟ್ಟು ಚಾಮರಾಜಪೇಟೆಗೆ ಬಂದಾಗ್ಲೆ ಅವರು ನಿಮ್ಮನ್ನು ಮರೆತುಬಿಟ್ರು ಸಾರ್. ನೀವು ತುಂಬ ಎಚ್ಚರಿಕೆಯಿಂದ ಕ್ಷೇತ್ರ ಬದಲು ಮಾಡದೆಯಿದ್ರೆ ಮದ್ದೂರಲ್ಲಿ ಸೋಲುತಿದ್ರಿ."

"ಹಾಗೇನು ಇಲ್ಲ, ಚಾಮರಾಜಪೇಟೆ ಜನ ಒತ್ತಾಯಿಸಿದ್ರು ಅದಕ್ಕಾಗಿ ಮದ್ದೂರು ಬಿಡಬೇಕಾಯ್ತು."

"ಅದಕ್ಕೇ ಮಂಡ್ಯಾದ ಜನ ನಿಮ್ಮನ್ನ ದೂರ ಮಾಡಿರಬೇಕು ಸಾರ್. ಇಲ್ಲ ಅಂದ್ರೆ ವಿದೇಶಾಂಗ ಸಚಿವನಾದ ಮಂಡ್ಯದ ಮಗನ್ನ ಮರಿತಿದ್ರ ಸಾರ್?"

"ಜನಗಳು ಯಾವಾಗ ದೂರ ಮಾಡ್ತರೆ, ಯಾವಾಗ ಹತ್ತಿರವಾಗ್ತರೆ ಅಂತ ಹೇಳೋದೆ ಕಷ್ಟವಾಗಿದೆ. ನಾನು ಅರಸು ಕಾಲದಿಂದ್ಲೂ ಜನಗಳನ್ನ ನೋಡ್ತ ಬಂದಿದ್ದೀನಿ."

"ನೋಡ್ತ ಬಂದಿದ್ದೀರಿ ಅಷ್ಟೆ. ಅವರನ್ನ ಅರ್ಥ ಮಾಡಿಕೊಂಡಿಲ್ಲ."

ಥೂತ್ತೇರಿ

▶ ಯಾಹೂ

"ಅರ್ಥ ಮಾಡಿಕೊಂಡಿದ್ದೀನಿ."

"ಮಾಡಿಕೊಂಡಿದ್ರೆ ನಿಮ್ಮ ಸರ್ಕಾರ ಸೋಲ್ತಿರಲಿಲ್ಲ ಸಾರ್. ನಿಮ್ಮ ಸರಕಾರದಲ್ಲಿ ಡಿ.ಕೆ. ಶಿವಕುಮಾರ್ ಬಹಳ ಮುಖ್ಯ ವ್ಯಕ್ತಿಯಾಗಿದ್ದ. ಅವನ ಮುಖದಲ್ಲಿ ಭೂಗತಲೋಕದ ಲೀಡರ್ ಕಳೆ ಇದೆಯೇ ಹೊರತು ಜನಾಂಗದ ಲೀಡ್ರು ಕಳೆಯಿಲ್ಲ, ಅಂತವನೇ ನಿಮ್ಮ ಉತ್ತರಾಧಿಕಾರಿ ತರ ಆಡತಿದ್ದ, ಇನ್ನ ನಾಲ್ಕೂ ಕಾಲು ಡಜನ್ ಮಂತ್ರಿಗಳಿದ್ರು. ಅವ್ರುರು ನರಸತ್ತವರಂಗಿದ್ರು....."

"ನೋಡ್ರಿ ಯಾಹೂ, ಇವತ್ತಿನ ಸಚಿವ ಸಂಪುಟಕ್ಕೆ ಹೋಲಿಸಿದ್ರೆ ನನ್ನ ಸಂಪುಟದಲ್ಲಿ ತುಂಬಾ ಒಳ್ಳೆಯವರಿದ್ರು."

"ಅದೇನೋ ನಿಜ ಸಾರ್. ನಿಮ್ಮ ನಫೀಸಾ ಫಜಲ್ ತರ ಒಬ್ಬಳೇ ಒಬ್ಬಳು ಹೆಣ್ಣುಮಗಳು ಈ ಸರ್ಕಾರದಲ್ಲಿಲ್ಲ. ಫಜಲ್ ಬೀರು ಕುಡುದು ಡ್ಯಾನ್ಸು ಮಾಡ್ತಾಯಿದ್ರೇ ಘಜಲ್ ಹೇಳನಾ ಅನ್ನುಸ್ತಿತ್ತು, ಅದೇ ಈಗಿನ ಸರ್ಕಾರದಲ್ಲಿದ್ದ ಶೋಭಾ ಕರಂದ್ಲಾಜೆ ನೋಡಿದ್ರೆ ಒಂದು ನಿಮಿಷ ಸುಮ್ಮನಿರ್ತಿಯೇನವ್ವ ಅನ್ನಂಗಾಯ್ತದೆ. ಇನ್ನ ಮಿನಿಷ್ಟ್ರುಗಳ ಪೈಕಿ ಹರತಾಳು, ರೇಣುಕಾಚಾರಿ, ಬೇಳೂರ, ಅಶೋಕನಂಥೋರು ಯಾರೂ ಇರಲಿಲ್ಲ."

"ನಮ್ಮಲ್ಲೂ ವಿಶ್ವನಾಥ್ ಇದ್ರು. ಆದ್ರು ಆತ ಮರ್‍ಯಾದೆ ಮೀರಿ ನಡಕೊಳ್ಳಲಿಲ್ಲ, ಜನ ಅಧಿಕಾರದಲ್ಲಿ ಇದ್ದವರನ್ನು ಸೂಕ್ಷ್ಮವಾಗಿ ನೋಡ್ತರೆ ಅನ್ನೊ ಎಚ್ಚರಿಕೆ ಇರಬೇಕು."

"ನಿಮ್ಮ ಮಾತನ್ನ ನೀವೇ ಪಾಲಿಸಲಿಲ್ಲವಲ್ಲ ಸಾರ್?"

"ನಾನೇನು ಮಾಡಿದೆ ಹೇಳಿ?"


"ಆ ಪೇಜಾವರ ಶ್ರೀ ಅನ್ನೊ ಸ್ವಾಮಿ ಹಗಲುರಾತ್ರಿ ಬಿಜೆಪಿಗಾಗಿ ದುಡಿತನೆ. ಬಿಜೆಪಿ ಅಧಿಕಾರದಲ್ಲಿದ್ರೆ ಆತನಿಗೆ ಏನೊ ಸಮಾಧಾನ. ಆತ ತೊಗಾಡಿಯಾ ತರದ ರಾಜಕಾರಣಿನೇ ಹೊರತು ಸ್ವಾಮಿಯಾಗಿ ಎಂದೂ ಕಾಣಿಸಲಿಲ್ಲ, ಅಂಥವನ್ನ ನೀವು ಮನೆಗೆ ಕರೆದು, ಪೂಜೆ ಮಾಡಿ, ಇಡೀ ಕರ್ನಾಟಕದ ಪ್ರಜ್ಞಾವಂತರ ವಿಶ್ವಾಸ ಕಳಕೊಂಡ್ರಿ."

"ಸುಳ್ಳು. ನೀವು ಆತರ ತಿಳಕೊಂಡಿರೋದೆ ತಪ್ಪು, ನಾನು ಒಬ್ಬ ಆಧ್ಯಾತ್ಮ ಜೀವಿ. ದೇವರನ್ನ ನಂಬತಿನಿ. ಧಾರ್ಮಿಕ ಆಚರಣೆ ನನ್ನ ವೈಯಕ್ತಿಕ ವಿಷಯ. ಹಾಗೆ ಒಬ್ಬ ಸ್ವಾಮಿ ಕರದು ಪೂಜೆ ಮಾಡದು ನನ್ನ ಸ್ವಂತ ವಿಷಯ. ಅದಕ್ಕೂ ರಾಜಕಾರಣಕ್ಕೂ ಸಂಬಂಧ ಇಲ್ಲ."

"ನೀವು ಪೇಜಾವರನ ಪೂಜೆ ಮಾಡಿದಾಗ ಮುಖ್ಯಮಂತ್ರಿ ಆಗಿದ್ರಿ. ಈಗ್ಲೂ ನೋಡಿ; ನೀವು ಕೇಂದ್ರ ಸರ್ಕಾರದ ವಿದೇಶಾಂಗ ಮಂತ್ರಿ. ನಿಮ್ಮ ಜೊತೆ ಬರೋ ಪತ್ರಕರ್ತರೆಲ್ಲಾ ಚೆಡ್ಡಿಗಳು. ಅದರಲ್ಲೂ ಕೆಟ್ಟ ಚೆಡ್ಡಿಗಳೂ ಅಂತ್ಲೂ ಅವ್ರುರೆ ಸಾರ್. ಅವ್ರುರು ಸದಾ ಈ ದೇಶದ ಕ್ಲೋಭೆಲಿಟ್ಟು ತಮ್ಮ ಭೋಜನಕ್ಕೆ ದಾರಿ ಮಾಡಿಕಳೊ ಅಂತವ್ರುರು. ಅವರನ್ನ ನೀವು ಜೊತೆಲಿಟ್ಟುಕೊಂಡು ದೇಶ ಸುತ್ತುತ್ತೀರಂತೆ. ಇದು ಸರೀನಾ ಸಾರ್?"

"ನೋಡಿ ಯಾಹು ಅವ್ರುರೆ, ಪತ್ರಕರ್ತರಲ್ಲಿ ಚೆಡ್ಡಿ, ಪಂಚೆ, ದೋತರ ಅಂತ ನಾನು ಪರಿಶೀಲಿಸಲ್ಲ, ಪತ್ರಕರ್ತರು ಅಂದ್ರೆ ಪತ್ರಕರ್ತರು ಅಂತಲೆ ನಾನು ನೋಡದು. ನೀವೂ ಬೇಕಿದ್ರೆ ನಮ್ಮ ಜೊತೆ ಬರಬಹುದು. ಆ ದೃಷ್ಟಿ ನನ್ನಲ್ಲಿ ಇರೋದರಿಂದಲೇ, ನಿಮ್ಮ ಜೊತೆ ಮಾತನಾಡ್ತಯಿದ್ದಿನಿ."

"ನನ್ನ ಜೊತೆ ನೀವು ಮಾತಾಡೋದ್ರಿಂದ ನನಗೇನು ಪಾಯ್ದೆಯಿಲ್ಲ ಸಾರ್. ನಿಮ್ಮ ಸರ್ಕಾರ ಅಧಿಕಾರಕ್ಕೆ ಬರಬೇಕಾದ್ರೆ ಲಂಕೇಶ್ ನಿಮಗಿಂತ್ಲೂ ಹೆಚ್ಚು ನಿಮ್ಮ ಪಾರ್ಟಿಗೆ ಸಹಾಯ ಮಾಡಿದ್ರು. ಸೋನಿಯಾ ಗಾಂಧಿ ಫೋಟೋ ಕವರ್ ಪೇಜಿಗೆ ಮೂರು ವಾರ ಹಾಕಿ ಬರದ್ರು. ಅಲ್ಲದೆ ಸೋನಿಯಾ ಗಾಂಧಿಗೆ ಪತ್ರ ಬರೆದಿದ್ರು. ಅದನ್ನ ನೋಡಿ ನೀವೇ ಆಫೀಸಿಗೆ ಬಂದು ಲಂಕೇಶ್‌ರನ್ನ ಮಾತನಾಡಿಸಿ ಹೋದ್ರಿ. ಗೆದ್ದು ಮುಖ್ಯಮಂತ್ರಿಯಾದ ನಂತರ ಒಂದೇ ಒಂದು ಥ್ಯಾಂಕ್ಸ್ ಹೇಳಲಿಲ್ಲ, ಅದೂ ಹೋಗ್ಲಿ, ವಾಸ್ತು ಪ್ರಕಾರ ಮುಖ್ಯಮಂತ್ರಿ ಮನೇನ ಬದಲಾಯಿಸಿದ್ರಿ. ನೀವು ಹಾಕಿ ಕೊಟ್ಟ ಪರಂಪರೆನ ಈ ಬಿಜೆಪಿಗಳು ಧಾರಾಳವಾಗಿ ಉಪಯೋಗಿಸಿಕೊಂಡ್ರು."



"ಎಡಿಯೂರಪ್ಪನೋರು ಬಂದ್ರು ಅಂತ ಕಾಣಸತ್ತೆ."

"ಬರ್ಲಿ ಬಿಡಿ ಸಾರ್. ನಾನೇಳಕ್ಕೆ ಹೊರಟಿದ್ದೇನಂದ್ರೆ, ಮಂಡ್ಯದ ಜನ ನಿಮ್ಮನ್ನ ಕರದು ಈವರೆಗೂ ಸನ್ಮಾನ ಮಾಡಿಲ್ಲ, ನೋಡಿ; ಆ ಜನಕ್ಕೆ ನಿಜಕ್ಕೂ ಅಭಿನಂದನೆ ಹೇಳಬೇಕು ಸಾರ್!"

"ಹೇಳಿ."

"ಥೂತ್ತೇರಿ!!!"

ಶ್ರೀರಾಂಪುರದ ಪಾಲಿಕೆ ಕಾಮಗಾರಿ ಗೋಲ್‌ಮಾಲ್!

ಪಳನಿ ಹತ್ಯೆಯ ಹಿಂದೆ ಕೌನ್ಸಿಲರ್?

ಪಾಲಿಕೆ ಕಾಮಗಾರಿಗಳ ಕಳ್ಳಬಿಲ್ಲು ದಂಧೆಕೋರರ ಕಟ್ಟಾಟ ರೌಡಿಯೊಬ್ಬನ ಕೊಲೆಯ ಮೂಲಕ ಅಂತ್ಯ ಗೊಂಡಿತೇ?

ಸದ್ಯ ಶ್ರೀರಾಂಪುರ, ದಯಾನಂದನಗರ, ಬಂದಿರೆಡ್ಡಿ ಸರ್ಕಲ್, ರಾಮಚಂದ್ರಪುರ, ಲಕ್ಷ್ಮಿನಾರಾಯಣಪುರ ಇತ್ಯಾದಿ ಏರಿಯಾಗಳ ಸಂದಿಗೊಂದಿಯಲ್ಲಿ ಇಂಥದ್ದೇ ಪ್ರಶ್ನೆಯೊಂದು ಹೊಗೆಯಾಡುತ್ತಿದೆ!

ಕೊಲೆಯಾದವನು ಶ್ರೀರಾಂಪುರದ ಹಳೇ ರೌಡಿ ಮತ್ತು ಒಂದಾನೊಂದು ಕಾಲದ ಪ್ರಳಯಾಂತಕ ಮಜೂರ್ ಪಳನಿ. ಪಾತಕ ಪ್ರಪಂಚದ ಪರಿಭಾಷೆಯಲ್ಲಿ ಮಜೂರ್ ಎಂದರೆ ಕಿಸೆಗಳ್ಳ ಅರ್ಥಾತ್ ಪಿಕ್ ಪಾಕೆಟ್. ಇದೇ ಮೇ 7ರ ಶುಕ್ರವಾರದ ರಾತ್ರಿ ಒಂಬತ್ತೂಕಾಲರ ಹೊತ್ತಿಗೆ ದಯಾನಂದನಗರದ ಲಕ್ಷ್ಮಿ ವೆಂಕಟೇಶ್ವರ ಕಾಂಡಿಮೆಂಟ್ಸ್ ಮುಂದೆ ಜ್ಯೂಸ್ ಕುಡಿದು ಕುಳಿತಿದ್ದ ಪಳನಿಯ ಮೇಲೆ ಇದ್ದಕ್ಕಿದ್ದಂತೆ ಆರು ಮಂದಿ ಪಡ್ಡೆ ಹುಡುಗರು ದಾಳಿಯಿಟ್ಟರು. ಬಂದುಬಂದದ್ದೇ ಎದೆಯನ್ನೇ ಗುರಿಯಿಟ್ಟು ಡ್ರ್ಯಾಗರ್‌ನಿಂದ ಇರಿದಿದ್ದಾರೆ. ಮತ್ತೆ ಹೊಟ್ಟೆಗೆ ಎರಡು ಬಾರಿ ಚುಚ್ಚಿದ್ದಾರೆ.ಬೀಸಿದ ಲಾಂಗಿಗೆ ತಲೆಯೇ ಸೀಳು ಬಿಟ್ಟಿದೆ. ಮತ್ತೊಂದು ಲಾಂಗ ಏಟಿಗೆ ಎಡಗೈ ಇಡೀಯಾಗಿ ತುಂಡುಬಿದ್ದು ಚರ್ಮಕ್ಕೆ ನೇತಾಡುತ್ತಿತ್ತು, ಬಲಗೈ ಒಂದರಲ್ಲೇ ಮೂರು ಕಡೆ ಕತ್ತರಿಸಿದ ಸೀಳುಗಳಿದ್ದವು.



ಕೌನ್ಸಿಲರ್ ಶಕೀಲಾ


ಹೊಡೆದ ರಭಸ ಮತ್ತು ಚುಚ್ಚಿದ ಕ್ರೌರ್ಯಕ್ಕೆ ಪಳನಿ ಕಿಮಕ್ಕೆನ್ನದೆ ಪ್ರಾಣಬಿಟ್ಟಿದ್ದಾನೆ!

ಹೀಗೆ ನಡುರಸ್ತೆಯಲ್ಲಿ ಪಳನಿಯನ್ನು ಅಷ್ಟೊಂದು ಬರ್ಬರವಾಗಿ ಕೊಚ್ಚಿಕೊಂದದ್ದು ಅದೇ ದಯಾನಂದನಗರದ ಹಳೇ ರೌಡಿ ಮಾಟುಕ್ಕಾರ ಉರ್ಫ್ ನಾರಾಯಣ ಎಂಬ ಮತ್ತೊಬ್ಬ ರೌಡಿಯ ಮಕ್ಕಳಾದ ಸತೀಶ ಮತ್ತು ಹರೀಶ!

ಜೊತೆಗೆ ಇದೇ ಶ್ರೀರಾಂಪುರದ ಮತ್ತೊಬ್ಬ ರೌಡಿ ಕುಟ್ಟಿಪುಲಿ ಎಂಬಾತನ ಮಗ ಸುನೀಲನೂ ಇದ್ದನಂತೆ!

ಇಬ್ಬರು ಹಳೇ ರೌಡಿಗಳ ಮಕ್ಕಳು ಸೇರಿಕೊಂಡು ಮತ್ತೊಬ್ಬ ಹಳೇರೌಡಿಯನ್ನು ಕೊಚ್ಚಿಹಾಕಿದ ಕಾರಣ ಕೂಡ ವಿಚಿತ್ರವೇ. ಅದು ಹಳೆಯ ದುಷ್ಮನಿಯಂತೆ. ಇಲ್ಲಿಗೆ 12 ವರ್ಷದ ಹಿಂದೆ ಬೆಂಗಳೂರಿನ ಕುಖ್ಯಾತ ಕಿಸೆಗಳ್ಳನಾಗಿದ್ದ ಪಳನಿ ತನ್ನ ಏರಿಯಾದ ರೌಡಿ ಮಾಟುಕ್ಕಾರನನ್ನು ಹಿಡಿದು ಬಡಿದಿದ್ದನಂತೆ. ಆಗಿನ್ನೂ ರಟ್ಟೆ ಬಲಿಯದ ಪುಟಾಣಿಗಳಾಗಿದ್ದ ಮಾಟುಕ್ಕಾರನ ಮಕ್ಕಳು ಈಗ ಅಂದರೆ 12 ವರ್ಷಗಳ ನಂತರ ತಮ್ಮ ತಂದೆಯ ದುಷ್ಮನಿಗೆ ರಿವೇಂಜ್ ಕೈಗೊಂಡರಂತೆ!

ಇದು ಕೊಂದ ಹುಡುಗರು ಹೇಳುವ ಕತೆ. ಅದೊಂದೇ ಕಾರಣಕ್ಕೆ ಪಳನಿಯ ಕೊಲೆಯಾಯಿತೆಂಬುದನ್ನು ಇಡೀ ಶ್ರೀರಾಂಪುರವಷ್ಟೇ ಏಕೆ ಪೊಲೀಸರಿಗೂ ನಂಬಲಾಗುತ್ತಿಲ್ಲ. ಇಲ್ಲಿಗೆ ಹನ್ನೆರಡು ವರ್ಷದ ಹಿಂದೆ ಮಾಟುಕ್ಕಾರನನ್ನು ಹಿಡಿದು ಪಳನಿ ಬಡಿದದ್ದು ನಿಜವಾದರೂ ಅದು ದೊಡ್ಡ ದುಷ್ಮನಿಯೇನಾಗಿರಲಿಲ್ಲ, ಕ್ಷುಲ್ಲಕವಾಗಿ ಕುಡಿದು ಕಿತ್ತಾಡಿದ್ದ ಪಳನಿ ಮತ್ತು ಮಾಟುಕ್ಕಾರ ಅವತ್ತು ಪೊಲೀಸ್ ಠಾಣೆಯಲ್ಲೇ ರಾಜಿಯಾಗಿದ್ದರು. ಅನಂತರ ಪಳನಿಯಿಂದ ರಾಜಿಯ ಬಾಬತ್ತೆಂದು ಒಂದಷ್ಟು ಕಾಸನ್ನೂ ಮಾಟುಕ್ಕಾರ ಕಿತ್ತಿದ್ದ. ಒಂದೆರಡು ವರ್ಷಕ್ಕೆ ಇಬ್ಬರೂ ಇದನ್ನು ಮರೆತುಬಿಟ್ಟು ಮಾತಾಡಿಕೊಂಡಿದ್ದರು. ಆಗಿನ್ನೂ ಲೋಕ ಜ್ಞಾನವೇ ಇಲ್ಲದೆ ಗೋಲಿ ಆಡಿಕೊಂಡಿದ್ದ ಮಾಟುಕ್ಕಾರನ ಮಕ್ಕಳು ತಮ್ಮಪ್ಪ ಯಾವತ್ತೋ ಕಾಸು ಕಿತ್ತುಕೊಂಡು ರಾಜಿಯಾಗಿದ್ದ ಕಟ್ಟಾಟಕ್ಕೆ ಈಗ ಸೇಡಿಗೆ ಬಿದ್ದು ಇಷ್ಟೊಂದು ಬರ್ಬರವಾಗಿ ಕೊಲ್ಲುತ್ತಾರೆಂದರೆ ಅದು ಕೇವಲ ತಂದೆಯ ಸೇಡಿನ ಕಾರಣಕ್ಕಷ್ಟೇ ಅಲ್ಲ ಎಂಬುದು ಪಳನಿಯನ್ನು ಬಲ್ಲವರ ಅನುಮಾನ.




ಹಳೇ ಪಾತಕಿ ಪೈಂಟರ್ ಶೇಖರ್

ಅದು ನಿಜ ಕೂಡ. ಮಾಟುಕ್ಕಾರ ರೌಡಿಸಂ ಬಿಟ್ಟು ಯಾವುದೋ ಕಾಲವಾಗಿದೆ. ಪ್ರತೀಕಾರದ ಸಣ್ಣದೊಂದು ಸುಳಿವಿದ್ದರೂ ಪಳನಿ ಹುಷಾರಾಗಿರುತ್ತಿದ್ದ ದುಷ್ಮನಿ ಹಾಳಾಗಲಿ ಪಳನಿ ವಿರುದ್ಧ ಸಿಟ್ಟು ಕೂಡ ಮಾಟುಕ್ಕಾರನಿಗಿರಲಿಲ್ಲ, ಹಾಗಾದರೆ ಇದನ್ನೇ ನೆಪ ಮಾಡಿಕೊಂಡು ಬೇರೆ ಯಾರೋ ಸುಪಾರಿಕೊಟ್ಟು ಪಳನಿಯನ್ನು ಮುಗಿಸಿದರೆ?

ಇಂಥದೊಂದು ಪ್ರಶ್ನೆಗೆ ಉತ್ತರವೆಂಬಂತೆ ಕೇಳಿಬರುತ್ತಿರುವುದು ಸದ್ಯ ದಯಾನಂದನಗರದ ಕಾಂಗ್ರೆಸ್ ಕೌನ್ಸಿಲರ್ ಶಕೀಲಾ ಮುನಿರಾಜು ಮೈದುನ ಮನೋಹರ್ ಎಂಬಾತನ ಹೆಸರು.

ಹಿಂದೆ ಭಾಷ್ಯಂನಗರವಾಗಿದ್ದ ದಯಾನಂದನಗರ ವಾರ್ಡಿಗೆ ಆಗ ಕೌನ್ಸಿಲರ್ ಆಗಿದ್ದ ಮುನಿರಾಜು ತಾನು ಗೆಲ್ಲಲೆಂದು ಸಾಕಿಕೊಂಡಿದ್ದ ಪುಢಾರಿಗಳ ಪೈಕಿ ಪಳನಿ ಕೂಡ ಒಬ್ಬ. ಈ ಬಾರಿ ದಯಾನಂದನಗರ ಪರಿಶಿಷ್ಟ ಮಹಿಳೆಗೆ ಮೀಸಲಾಗಿದ್ದರಿಂದ ತನ್ನ ಪತ್ನಿ ಶಕೀಲಾರನ್ನೇ ನಿಲ್ಲಿಸಿ ಮುನಿರಾಜು ಗೆಲ್ಲಿಸಿಕೊಂಡು ತಾನು ಗೆದ್ದ ಮೇಲೆ ಮುನಿರಾಜು ಕಾಮಗಾರಿ ಸ್ಥಾಯಿ ಸಮಿತಿಗೆ ಅಧ್ಯಕ್ಷನಾಗಿದ್ದನಲ್ಲ; ಆಗ ತನ್ನ ತಮ್ಮ ಮನೋಹರನ ಹೆಸರಲ್ಲಿ ಬೇನಾಮಿ ಕಂಟ್ರಾಕ್ಟ್‌ಗಿರಿಗೆ ಕೈಯಿಟ್ಟ. ಬಹುತೇಕ ಕೌನ್ಸಿಲರ್‌ಗಳೆಲ್ಲ ಇದೇರೀತಿ ತಮ್ಮ ಪತ್ನಿ ಅಥವಾ ತಮ್ಮಂದಿರ ಹೆಸರಲ್ಲಿ ಬೇನಾಮಿ ಕಾಂಟ್ರಾಕ್ಟರಿಕೆಗೆ ಕೈಯಿಟ್ಟದ್ದರಿಂದ ಯಾರೂ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಶ್ರೀರಾಂಪುರದ ಜನ ಕೂಡ ಇದನ್ನು ತಪ್ಪೆಂದು ಭಾವಿಸಲಿಲ್ಲ, ಹಾಗೆ ತಮ್ಮನ ಹೆಸರಲ್ಲಿ ಬೇನಾಮಿ ಕಾಂಟ್ರಾಕ್ಟ್ ಹಿಡಿದ ಮುನಿರಾಜು ಹತ್ತುಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳನ್ನು ಹಿಡಿದು ಈ ಪೈಕಿ ಬಹುತೇಕ ಕಾಮಗಾರಿಗಳನ್ನು ಮಾಡದೇ ಬೋಗಸ್ ಬಿಲ್ ಜಡಿದು ನುಂಗಿಬಿಟ್ಟನಂತೆ. ಕೋಟ್ಯಂತರ ರೂಪಾಯಿಗಳ ಬೋಗಸ್ ಕರ್ಮಕಾಂಡದ ವಿರುದ್ಧ ಆವತ್ತೇ ಪ್ರತಿಭಟನೆಗಳಾಗಿದ್ದವು.

ಅಂಥ ಮುನಿರಾಜುವೇ ಕಾರ್ಪೋರೇಷನ್ ಕಂಟ್ರಾಕ್ಟರಿಕೆಗೆ ಕೈಯಿಟ್ಟ ಮೇಲೆ ತಾನ್ಯಾಕೆ ಅದಕ್ಕೆ ಕೈ ಹಾಕಬಾರದೆಂದು ಪಾಲಿಕೆ ಕಾಮಗಾರಿ ದಂಧೆಗೆ ಪಳನಿಯೂ ಕೈಯಿಟ್ಟ. ಅದು 2005ರ ಕಾಲ. ಆಗಷ್ಟೇ ಪಿಕ್‌ಪಾಕೆಟ್ ಕಸುಬಿಗೆ ಗುಡ್‌ಬೈ ಹೇಳಿದ ಪಳನಿ ದಯಾನಂದನಗರದ ಮೂರನೇ ಕ್ರಾಸಿನಲ್ಲಿ ಎಸ್.ಪಿ. ಎಂಟರ್‌ಪ್ರೈಸಸ್ ಎಂಬ ಮೀಟರ್ ಬಡ್ಡಿ ಫೈನಾನ್ಸ್ ಅಡ್ಡೆ ತೆರೆದಿದ್ದ. ಜೊತೆಗೆ ಅಗರಬತ್ತಿ ಫ್ಯಾಕ್ಟರಿಗಳಿಗೆ ಕಾರ್ಮಿಕರನ್ನೂ ಸರಬರಾಜು ಮಾಡುತ್ತಿದ್ದ. ಇದೆಲ್ಲದಕ್ಕಿಂತಲೂ ಪಾಲಿಕೆ ಕಾಂಟ್ರಾಕ್ಟಿನಲ್ಲೇ ಲಾಭವಿದೆಯೆಂದು ಲೆಕ್ಕ ಹಾಕಿ ಕಂಟ್ರಾಕ್ಟರ್ ಲೈಸೆನ್ಸ್ ಮಾಡಿಸಿಕೊಂಡ. ಪಳನಿಯ ಜೊತೆ ಕೌನ್ಸಿಲರ್ ಮುನಿರಾಜು ಭಟ್ಟಂಗಿಗಳಂತೆ ಓಡಾಡಿ ಕೊಂಡಿದ್ದ ಪ್ರಳಯಾಂತಕರ ಗ್ಯಾಂಗೇ ಇತ್ತು...



ಮುನಿರಾಜು

ಈ ಪೈಕಿ ಬಂದಿರೆಡ್ಡಿ ಸರ್ಕಲ್ಲಿನ ನಟೋರಿ ಯಸ್ ಪೈಂಟರ್ ಶೇಖರ್, ಹನುಮಂತ ಪುರದ ಕುಮಾರ್, ದಯಾನಂದನಗರದ ಕೃಷ್ಣ ಹನುಮಂತಪುರದ ಅನ್ಬು ಮುಂತಾದವರು ಪಳನಿ ಗ್ಯಾಂಗಿನಲ್ಲಿದ್ದ ಪ್ರಮುಖ ಪಂಟರ್‌ಗಳು. ಈ ಐದೂ ಮಂದಿ ಸೇರಿದರೆಂದರೆ ಅದೆಂಥಾ ಡೀಲನ್ನೂ ಮಾಡಿ ಮುಗಿಸುತ್ತಿದ್ದರು. ಇಂಥ ಪ್ರಚಂಡರನ್ನಿಟ್ಟುಕೊಂಡೇ ಪಾಲಿಕೆ ಚುನಾವಣೆ ಯಲ್ಲಿ ಗೆದ್ದ ಮುನಿರಾಜು ಅವರೆಲ್ಲರಿಗೂ ಕಾಮಗಾರಿ ಕಾಂಟ್ರಾಕ್ಟ್ ಕೊಡುತ್ತೇನೆಂದು ನಂಬಿಸಿ ಎಲೆಕ್ಷನ್ನಿಗೆ ಬಳಸಿಕೊಂಡಿದ್ದ. ಈ ಐವರ ಪೈಕಿ ಕೃಷ್ಣ ಎಂಬಾತನನ್ನು ಹೊರತುಪಡಿಸಿ ಮಿಕ್ಕೆಲ್ಲರಿಗೂ ಶಕ್ತ್ಯಾನುಸಾರ ಕಾಮಗಾರಿಗಳನ್ನು ಕೊಡಿಸಿದ್ದ. ಅದೇನು ಕಟ್ಟಾಟವಾಯಿತೋ, ಪಳನಿ ಮತ್ತು ಅನ್ಬು ಇದ್ದಕ್ಕಿದ್ದಂತೆ ಮುನಿರಾಜು ವಿರುದ್ಧ ತಿರುಗಿಬಿದ್ದು ಕಳ್ಳ ಕಾಮಗಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರುಕೊಟ್ಟರು.

ತಮ್ಮ ಜೊತೆಗಿದ್ದೇ ಕೌನ್ಸಿಲರ್ ಮೇಲೆ ಲೋಕಾಯುಕ್ತಕ್ಕೆ ದೂರು ಕೊಟ್ಟವ್ವರ ವಿರುದ್ಧ ಪೈಂಟರ್ ಶೇಖರ್ ಕೃಷ್ಣ ಮತ್ತು ಕುಮಾರ್ ಪಳನಿಯ ವಿರುದ್ಧ ತಿರುಗಿಬಿದ್ದರು. ಪಂಚಪಾಂಡವರಂತಿದ್ದ ಗ್ಯಾಂಗ್ ಇಬ್ಭಾಗ ವಾಯಿತು. ಮುನಿರಾಜು ತಮ್ಮ ಮನೋಹರ್ ಪೈಂಟರ್ ಶೇಖರ್‌ನ ಬೆನ್ನಿಗೆ ನಿಂತ. ಈ ಮಧ್ಯೆ ಮುನಿರಾಜುವೇ ಅನ್ಬು ಮತ್ತು ಪಳನಿಯನ್ನು ಕರೆಸಿ ರಾಜಿ ಮಾಡಿಕೊಂಡ. ಪ್ರತಿಯಾಗಿ ಒಂದೆರಡು ಕಾಮಗಾರಿಗಳನ್ನೂ ಕೊಡಿಸಿಕೊಟ್ಟ. ಇದಕ್ಕೆ ಪ್ರತಿಯಾಗಿ ಪಳನಿ ಮತ್ತು ಅನ್ಬು ಲೋಕಾಯುಕ್ತಕ್ಕೆ ಹಾಕಿದ್ದ ಕೇಸು ವಾಪಸ್ಸು ಪಡೆದು ಕಳೆದ ಪಾಲಿಕೆ ಚುನಾವಣೆಯಲ್ಲಿ ಮತ್ತೆ ಮುನಿರಾಜು ಪತ್ನಿ ಪರ ಪ್ರಚಾರಕ್ಕಿಳಿದರು.

ಆದರೆ ಜಿದ್ದು ಮಾತ್ರ ಹಾಗೇ ಇತ್ತು, ಅದು ಮುನಿರಾಜು ತಮ್ಮ ಮನೋಹರ್‌ನ



ಕಳ್ಳಬಿಲ್ಲು ಕಾಮಗಾರಿಯ ಕುರಿತಷ್ಟೇ ಆಗಿರದೇ ಪೈಂಟರ್ ಶೇಖರ್ ಮತ್ತು ಪಳನಿ ನಡುವಿನ ಮೀಟರ್ ಬಡ್ಡಿ ಹಣಾಹಣಿಗೂ ವಿಸ್ತರಿಸಿತ್ತು. ಚುನಾವಣೆ ಮುಗಿದು ಶಕೀಲಾ ಗೆದ್ದ ನಂತರ ಪಳನಿ ಮುನಿರಾಜು ತಮ್ಮನ ಕಾಂಟ್ರಾಕ್ಟ್ ಗೋಲ್‌ಮಾಲ್ ಹಗರಣವನ್ನು ಮತ್ತೆ ಕೆದಕಿ ಲೋಕಾಯುಕ್ತಕ್ಕೆ ಹಾಕ್ತೀನಿ ಎಂದು ಉಢಾಪೆ ಮಾಡಿಕೊಂಡು ಓಡಾಡಿದ್ದ ಅಥವಾ ಪಳನಿ ಜೊತೆಗಿದ್ದು ತಿರುಗಿಬಿದ್ದ ಪೈಂಟರ್ ಶೇಖರ್ ಹಾಗೆಂದು ಸುದ್ದಿ ಹಬ್ಬಿಸಿದ. ಎಷ್ಟೆಂದರೂ ಪೈಂಟರ್ ಶೇಖರ್ ಹಳೇ ಕ್ರಿಮಿನಲ್. ಮುನಿರಾಜು ತಮ್ಮ ಮನೋಹರ್‌ನನ್ನು ಪಳನಿ ವಿರುದ್ಧ ಎತ್ತಿಕಟ್ಟಿದನಾ? ಅಥವಾ ತಾನೇ ಸುಪಾರಿ ಕೊಟ್ಟು ಅದನ್ನು ಮನೋಹರ್ ಮೇಲೆ ಎತ್ತಿಹಾಕಿದನಾ? ಅಥವಾ ಹಿಂದೆ ನಡೆದಿದ್ದ ಕಳ್ಳಬಿಲ್ಲು ದಂಧೆಯ ವಿರುದ್ಧ ತನ್ನ ಪರಮಾಪ್ತ ಅನ್ಬು ಮೂಲಕ ಲೋಕಾಯುಕ್ತಕ್ಕೆ ದೂರು ಕೊಟ್ಟು ಪಜೀತಿ ಎಬ್ಬಿಸಿದ ಪಳನಿ ವಿರುದ್ಧ ಮನೋಹರ್‌ಗೆ ಒಳಗೊಳಗೆ ಸಿಟ್ಟಿತ್ತಾ? ಅದು ಈ ಸಲದ ಚುನಾವಣೆ ಮುಗಿದ ಬಳಿಕ ಕಾರ್ಯರೂಪಕ್ಕೆ ಬಂತಾ?


ಪಳನಿಗೂ ಮುನಿರಾಜು ತಮ್ಮ ಮನೋಹರ್‌ಗೂ ಮಾತುಕತೆಯಿರಲಿಲ್ಲ ಎಂಬುದಂತೂ ಸತ್ಯ, ಹಾಗೇ ಕ್ರಿಮಿನಲ್ ಪೈಂಟರ್ ಶೇಖರ್ ಪಳನಿ ವಿರುದ್ಧ ಕತ್ತಿ ಮಸೆಯುತ್ತಿದ್ದದು ಸತ್ಯ. ಇಬ್ಬರೂ ಸೇರಿಕೊಂಡೇ ಪಳನಿಯ ಕತೆ ಮುಗಿಸಲು ಮುಂದಾದರಾ? ಹೀಗೆ ಸ್ಕೆಚ್ ಹಾಕಿದ ಪೈಂಟರ್ ಶೇಖರ್ ತನ್ನ ಸ್ವಾರ್ಥಕ್ಕೆ ಮಾಟುಕ್ಕಾರನಿಗೂ ಪಳನಿಗೂ 12 ವರ್ಷಗಳ ಹಿಂದೆ ನಡೆದಿದ್ದ ಮಾರಾಮಾರಿಯನ್ನು ಬಳಸಿಕೊಂಡನಾ?

ಈ ಸಾಧ್ಯತೆಯೇ ಹೆಚ್ಚು ಕೆಲಸ ಮಾಡಿರು ವಂತಿದೆ. ಪಳನಿಯನ್ನು ಮುಗಿಸಬೇಕೆಂದರೆ ಆತ ಮಾಟುಕ್ಕಾರನಿಗೆ ಹೊಡೆದಿದ್ದದ್ದು ಬಿಟ್ಟರೆ ಬೇರೆ ನೆಪ ಇರಲಿಲ್ಲ. ಅದನ್ನೇ ಕೆದಕಿ ಮಾಟುಕ್ಕಾರನ ಮಕ್ಕಳನ್ನು ಪೈಂಟರ್ ಶೇಖರ್ ಅಣಿಗೊಳಿಸಿದ್ದಾನೆ. ಮಾಟುಕ್ಕಾರನ ಮಕ್ಕಳಾದ ಸತೀಶ್ ಮತ್ತು ಹರೀಶ್ ಇನ್ನೂ ಪಡ್ಡೆ ಹುಡುಗರು. ಅವರ ಜೊತೆ ಇದೇ ಶ್ರೀರಾಂ ಪುರದ ಹಳೇ ಪಾತಕಿ ಕುಟ್ಟಿಪುಲಿಯ ಮಗ ಸುನೀಲನೂ ಕೈ ಜೋಡಿಸಿದ್ದಾನೆ. ಇತರೇ ಮೂವರು ಪೋರ್ಕಿಗಳೂ ಸೇರಿಕೊಂಡು ಪಳನಿಯನ್ನು ಕತ್ತರಿಸಿದ್ದಾರೆ. ನಿಜಕ್ಕೂ ತಂದೆಯನ್ನು ಹೊಡೆದಿದ್ದಕ್ಕೆ ಮಕ್ಕಳು ಸೇಡು ತೀರಿಸಿಕೊಂಡಿದ್ದೇ ಆಗಿದ್ದರೆ ಪಳನಿಯನ್ನು ಕೊಲ್ಲಬೇಕಿರಲಿಲ್ಲ, ಹೊಡೆದು ಬಿಡಬಹುದಿತ್ತು, ಆತನನ್ನು ಮುಗಿಸಲೇ ಬೇಕಿದ್ದಂಥ ಅನಿವಾರ್ಯತೆಯಿದ್ದದು ಪಾಲಿಕೆ ಕಳ್ಳಬಿಲ್ಲು ದಂಧೆಕೋರರಿಗೆ ಮಾತ್ರ!

ನಿಜಕ್ಕೂ ಕೌನ್ಸಿಲರ್ ಶಕೀಲಮ್ಮನ ಮೈದುನ ಮನೋಹರ್‌ನ ಕೈವಾಡವಿದ್ದದ್ದೇ ಆದರೆ ಆ ಬಗ್ಗೆ ತನಿಖೆಯಾಗಬೇಕು. ಸದ್ಯ ಶ್ರೀರಾಂಪುರದ ಪೊಲೀಸ್ ಇನ್ಸ್‌ಪೆಕ್ಟರ್ ಉಪಾಧ್ಯ ಹಂತಕರ ಬೆನ್ನು ಹತ್ತಿ ತಮಿಳುನಾಡಿಗೆ ಹೋಗಿದ್ದಾರೆ. ಮಾಟುಕ್ಕಾರನ ಮಕ್ಕಳು ಕುಟ್ಟಿಪುಲಿಯ ಮಗ ಸೇರಿಕೊಂಡು ತಾವು ರೌಡಿಗಳಾಗಿ ತಲೆಯೆತ್ತಲು ಇಂಥದೊಂದು ಕೃತ್ಯಕ್ಕೆ ಕೈ ಹಾಕಿರುವ ಸಾಧ್ಯತೆಗಳೂ ಇಲ್ಲದಿಲ್ಲ.

ಒಂದಂತೂ ಸತ್ಯ, ಗೆದ್ದು ಕೌನ್ಸಿಲರ್ ಆಗಲು ಹೋಗಿ ಹಳೇ ಮಜೂರುಗಳು, ರೌಡಿಗಳು, ಪೋರ್ಕಿಗಳಿಗೆಲ್ಲ ಲೈಸೆನ್ಸ್ ಕೊಡಿಸಿ ಕಾಂಟ್ರಾಕ್ಟರ್ ಮಾಡಿ ಬಳಸಿಕೊಂಡರೆ ಏನಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ. ಕೌನ್ಸಿಲರ್ ಮುನಿರಾಜುಗಿದು ಪಾಠವಾಗಬೇಕು.

• ರಾ. ಸೋಮನಾಥ್
ra.somanath2010@gmail.com



ಮಂತ್ರಿ ಸುರೇಶ್‌ಕುಮಾರ್ ಪೇಚಾಟ

ಹಾಲೀ ಕೌನ್ಸಿಲರ್ ಶಕೀಲಾ ಪತಿ ಮುನಿರಾಜು ಋಣ ತೀರಿಸಲು ಸಚಿವ ಸುರೇಶ್‌ಕುಮಾರ್ ಮನೋಹರ್‌ನನ್ನು ಬೆಂಬಲಿಸುತ್ತಿದ್ದಾರಾ? ಆತನನ್ನು ಕೊಲೆ ಕೇಸಿನಿಂದ ಕೈಬಿಡುವಂತೆ ಪೊಲೀಸರಿಗೆ ದುಂಬಾಲು ಬಿದ್ದಿದ್ದಾರಾ?

ಈ ಥರದ ಪುಚೋದ್ಯವಂತೂ ಶ್ರೀರಾಂಪುರದುದ್ದಕ್ಕೂ ಗುಲ್ಲೆದ್ದಿದೆ. ಬಹುಶಃ ಸುರೇಶ್‌ಕುಮಾರ್ ಎದುರಾಳಿಗಳು ಹೀಗೊಂದು ಗಾಳಿಸುದ್ದಿ ಹಬ್ಬಿಸುತ್ತಿರಬಹುದು. ಆದರೆ ವಾಸ್ತವವೇ ಬೇರೆಯಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪದ್ಮಾವತಿ ವಿರುದ್ಧ ಮುನಿರಾಜು ಬಿಜೆಪಿ ನಾಯಕ ಸುರೇಶ್‌ಕುಮಾರ್‌ರನ್ನು ಬೆಂಬಲಿಸಿದ್ದು ಸತ್ಯವೇ. ಮುನಿರಾಜು ಹೇಳಿಕೇಳಿ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್‌ರ ಬೆಂಬಲಿಗ. ಯಾವತ್ತು ಹರಿಪ್ರಸಾದ್‌ರನ್ನು ಧಿಕ್ಕರಿಸಿ ಪದ್ಮಾವತಿ ದೀಕೆ ಮೂಲಕ ರಾಜಾಜಿನಗರ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದರೋ ಮುನಿರಾಜು ತಿರುಗಿಬಿದ್ದ. ಒಳಗೊಳಗೆ ಬಿಜೆಪಿ ನಾಯಕ ಸುರೇಶ್‌ಕುಮಾರ್‌ರನ್ನು ಬೆಂಬಲಿಸಿದ. ಇದರ ಫಲವೆಂಬಂತೆ ರಾಜಾಜಿನಗರ ಸುರೇಶ್‌ಕುಮಾರ್ ಪಾಲಾಯಿತು. ಆದರೆ ಪಾಲಿಕೆ ಚುನಾವಣೆಯಲ್ಲಿ ಸುರೇಶ್‌ಕುಮಾರ್ ಬಿಜೆಪಿ ಅಭ್ಯರ್ಥಿ ಲೋಕೇಶ್ ಪರ ಪ್ರಚಾರಕ್ಕೆಂದು ದಯಾನಂದನಗರಕ್ಕೆ ಬಂದರೆ ಮುನಿರಾಜು ತಮ್ಮ ಮನೋಹರ್ ತನ್ನ ಪಟಾಲಂ ಸೇರಿಸಿದ್ದೇ ವಾಚಾಮಗೋಚರ ಗದರಿಸಿಬಿಟ್ಟ.

ತಮ್ಮ ಬೆಂಬಲದಿಂದ ಗೆದ್ದು ತಮ್ಮ ವಿರುದ್ಧವೇ ಪ್ರಚಾರಕ್ಕೆ ಇಳಿದ ಸುರೇಶ್‌ಕುಮಾರ್ ಬಿಜೆಪಿ ಪರ ಪ್ರಚಾರಕ್ಕೆ ಬಂದಿದ್ದೇ ತಪ್ಪೆಂದು ಮನೋಹರ್ ಪಟಾಲಂ ರೋಪು ಹಾಕಿತ್ತು, ಇದೇ ಕಾರಣಕ್ಕೆ ಸುರೇಶ್‌ಕುಮಾರ್ ಮುನಿರಾಜು ವಿರುದ್ಧ ಸಿಟ್ಟಿಗೆದ್ದರು. ತನ್ನನ್ನು ಓರ್ವ ಮಂತ್ರಿ ಎಂಬುದನ್ನೂ ಲೆಕ್ಕಿಸದೇ ತಮ್ಮನನ್ನು ಛೂಬಿಟ್ಟು ಹಾವಳಿಯಿಟ್ಟ ಮುನಿರಾಜುನನ್ನು ಸೋಲಿಸಲೇಬೇಕೆಂದು ಏನೆಲ್ಲಾ ಶ್ರಮಪಟ್ಟರೂ ಪ್ರಯೋಜನವಾಗಲಿಲ್ಲ. ಮುನಿರಾಜು ನಾಲ್ಕು ಸಾವಿರದಷ್ಟು ಅಂತರದಿಂದ ಗೆದ್ದಿದ್ದ.

ಈಗ ಪಳನಿ ಕೊಲೆಯಾಗಿದ್ದೇ ಸುರೇಶ್‌ಕುಮಾರ್ ಅಲರ್ಟಾಗಿದ್ದಾರೆ. "ನಾನ್ಯಾಕೆ ಮನೋಹರ್‌ನ ಅರೆಸ್ಟ್ ಮಾಡಿಸ್ಲೀ...? ನಾನೇ ಕಮೀಷನರ್ ಬಿದರಿಗೆ ಫೋನ್ ಮಾಡಿ ಹೇಳಿದ್ದೀನಿ. ಕೊಲೆಗಾರರು ಅದೆಷ್ಟೇ ಪ್ರಭಾವಿಗಳಿದ್ದಾಗಲೂ ಬಿಡದೇ ಜೈಲಿಗೆ ಹಾಕಿ ಎಂದು ಇನ್ಸ್‌ಪೆಕ್ಟರ್ ಉಪಾಧ್ಯರಿಗೆ ವಾರ್ನ್ ಮಾಡಿದ್ದೀನಿ. ಅಷ್ಟಕ್ಕೂ ಮುನಿರಾಜು ಆಗಲಿ ಮನೋಹರ್ ಆಗಲಿ ನಮ್ಮ ಪಕ್ಷದವರಲ್ಲ, ಕಾಂಗ್ರೆಸ್ ಪಾರ್ಟಿಯವರು. ಅವರನ್ನು ಕೊಲೆ ಕೇಸಿನಿಂದ ಬಚಾವು ಮಾಡಿ ನನಗೆ ಸಿಗುವ ಲಾಭವಾದರೂ ಏನು?" ಇದು ರಾಜಾಜಿನಗರದ ಶಾಸಕ ಮತ್ತು ಮಂತ್ರಿ ಸುರೇಶ್‌ಕುಮಾರ್ ಮಾತಿನ ದಾಟಿ.

ಈ ಮಧ್ಯೆ ಮುನಿರಾಜು ಹತ ಪಳನಿಯ ಮನೆಗೆ ಹೋಗಿ ಈಗಾಗಲೇ ಪಳನಿ ಮಾಡಿದ್ದ ಎರಡು ಕಾಮಗಾರಿಗಳ ಬಿಲ್ಲನ್ನು ತಾನೇ ನಿಂತು ಕೊಡಿಸಿಕೊಡುತ್ತೇನೆಂದೂ, ಯಾರದೋ ಮಾತು ಕೇಳಿ ತನ್ನ ತಮ್ಮನ ಮೇಲೆ ದೂರು ಕೊಡಕೂಡದೆಂದೂ ತಲೆ ಸವರಿ ಬಂದಿದ್ದಾರಂತೆ. ಮನೆಯವರೇ ದೂರುಕೊಡದ ಮೇಲೆ ಪೊಲೀಸರಾದರೂ ಏನು ಮಾಡಲು ಸಾಧ್ಯ?

'ದಂಡ'ನಾಯಕ ದೇಶಪಾಂಡೆಗೆಂದು ಗೇಟ್‌ಪಾಸ್?

ಇದು ರಾಜ್ಯ ಕಾಂಗ್ರೆಸ್‌ನ ನಿಷ್ಠ-ಅನಿಷ್ಠ ಮೂಲ ...ಸಿ ವಲಸಿಗ ಕಾರ್ಯಕರ್ತರೆಲ್ಲರ ಏಕೈಕ ಪ್ರಶ್ನೆ! ಕಳೆದೆರಡು ...ದಿಂದ ರಾಜ್ಯ ಕಾಂಗ್ರೆಸ್ಸನ್ನು ಸರಣಿ ಅನಾಹುತಕ್ಕೆ ...ುಮಾಡುತ್ತಲಿರುವ ಕೆಪಿಸಿಸಿ ಅಧ್ಯಕ್ಷ ಆರ್.ವಿ.ದೇಶ ...ಡೆಯ ಕರ್ಮಗೇಡಿತನದಿಂದ ಇಡೀ ರಾಜ್ಯ ಕಾಂಗ್ರೆಸ್ ...ಕ ಅಷ್ಟು ರೋಸತ್ತು ಹೋಗಿದೆ!!

ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಹೀನಾಯ ...ಲು ಕಂಡಾಗಲೂ, ಪಕ್ಷ ಸತ್ತಿರಲಿಲ್ಲ. ಆದರೆ ಯಾವಾಗ ...ಪಿಂಡ ದೇಶಪಾಂಡೆಯನ್ನು ಕೆಪಿಸಿಸಿ ಪೀಠದಲ್ಲಿ ಪ್ರತಿ ...ಸಲಾಯ್ತೋ, ಅಂದೇ ಕಾಂಗ್ರೆಸ್‌ನ ಅವಸಾನ ಆರಂಭ ...ಯ್ತು! ಅಪ್ಪಟ ಸಮಯಸಾಧಕತನವನ್ನೇ ಸಿದ್ಧಾಂತ ...ಡಿಕೊಂಡು ಹೆಗಡೆ, ಜೆ.ಹೆಚ್.ಪಟೇಲ್, ದೇವೇಗೌಡ, ...ಗೆ ಕಾಂಗ್ರೆಸ್ ಎಂದೆಲ್ಲ ಅಂಡಲೆದು ಆಯಕಟ್ಟಿನ ...ಕಾರವನ್ನು ಬರೋಬ್ಬರಿ ಇಪ್ಪತ್ತೈದು ವರ್ಷ ಅನುಭವಿಸಿದ್ದ ...ಪಾಂಡೆ ಕಳೆದ ಬಾರಿ ಸ್ವಕ್ಷೇತ್ರ ಹಳಿಯಾಳದಲ್ಲೇ ಸೋತು ...ಲೆಗುಂಪಾಗಿ ಹೋಗಿದ್ದರು. ತಾನೇ ಸಾಕಿ-ಸಲುಹಿದ ...ತಿ ಕೊಂಕಣಿ ಪೋರ ಸುನಿಲ್ ಹೆಗಡೆ ಎದುರು ...ಪಾಂಡೆ ಶರಣಾಗಿದ್ದರು. ಕಾಲು ಶತಮಾನ ಆತ ಮಾಡಿದ್ದ ...ಳೆಗಾರಿ ಪಾಲಿಟಿಕ್ಸ್‌ಗೆ ತಕ್ಕ ...ಯಾಗಿತ್ತು!

...ಅಯೋಗ್ಯನಿಗೆ ಕಿರೀಟ


ಸಿದ್ದರಾಮಯ್ಯ

...ಇಂಥ ತಿರಸ್ಕೃತ ಪುಢಾರಿಯನ್ನು ...ನಿಯಾ ಗಾಂಧಿಯ ಒಡ್ಡೋಲಗದ ...ರ್ ಬ್ರೋಕರ್‌ಗಳು ಜೋಪಾನವಾಗಿ ... ತಂದು ಕೆಪಿಸಿಸಿ ಅಧ್ಯಕ್ಷ ಪೀಠದಲ್ಲಿ ...ತ್ರಿಸಿಬಿಟ್ಟರು. ಯಾರೂ ನಿರೀಕ್ಷಿಸದ, ...ೕಕ್ಷಿಸದ ದೇಶಪಾಂಡೆ ಕರ್ನಾಟಕ-...ಗ್ರೆಸ್ ಅಧ್ಯಕ್ಷನಾಗುತ್ತಲೇ ಸಮಸ್ತ ...ರ್ಯಕರ್ತರು-ಲೀಡರುಗಳೆಲ್ಲ ದಿಗಿಲು ಬಿದ್ದುಹೋದರು. ...ವ ಆ್ಯಂಗಲ್‌ನಿಂದ ನೋಡಿದರೂ ಕಾಂಗ್ರೆಸ್‌ನಂಥ ... ಸಮೀಕರಣ, ಒಂಚೂರಾದರೂ ಲೀಡರ್‌ಶಿಪ್ ಕ್ವಾಲಿಟಿ ...ವ ಪಕ್ಷದ ರಾಜ್ಯಮಟ್ಟದ ನಾಯಕನಾಗುವ ಯೋಗ್ಯತೆ ...ಪಾಂಡೆಗಿಲ್ಲದಿರುವುದು ಎದ್ದು ಕಾಣುತ್ತದೆ.

ದೇಶಪಾಂಡೆಗೆ ಜಾತಿಬಲವಿಲ್ಲ, ಎಲ್ಲರನ್ನೂ ಒಟ್ಟಿಗೆ ...ಕೊಂಡು ಹೋಗುವಂಥ ನಾಯಕತ್ವದ ಗುಣ-ಲಕ್ಷಣ ...ಲ್ಲ. ಈ ನೆಲದ ಯಾವ ಹೋರಾಟ-ಬದುಕು-ಬವಣೆಯ ...ಚಯವಿಲ್ಲ. ಸಂಘಟನಾ ಸಾಮರ್ಥ್ಯವೂ ಇಲ್ಲ. ...ಕರ್ಷಕ ವ್ಯಕ್ತಿತ್ವ ದೇಶಪಾಂಡೆಗಿಲ್ಲ. ಸದಾ ಫ್ಯೂಡಲ್ ...ಗರಲ್ಲಿರುವ ದೇಶಪಾಂಡೆಗೆ ಕಾರ್ಯಕರ್ತರಿಗೆ- ಜನ ...ಮಾನ್ಯರಿಗೆ ಗೌರವಕೊಟ್ಟು ಮಾತಾಡಿಸುವುದೇ ಗೊತ್ತಿಲ್ಲ.


ಇಬ್ರಾಹಿಂ

... ಅಲ್ಲ; ಆತನ ಕನ್ನಡ ಇವತ್ತಿಗೂ ...ಮುರುಕು. ಆತನ ಇಂಗ್ಲಿಷ್ ಪಕ್ಕಾ ...ರಿ ವ್ಯಾಕರಣದ್ದು. ದೀರ್ಘಕಾಲ ...ತ್ರಿ, ವಿರೋಧಪಕ್ಷದ ನಾಯಕ, ಹೆಗಡೆ ...ಯಂಥ ಪ್ರಭಾವಿಯ ಹಿಂಬಾಲಕತ್ವ ...ದಿದ್ದರೂ ದೇಶಪಾಂಡೆಗೆ ರಾಜ್ಯಮಟ್ಟ ... ಗುರುತಿಸಿಕೊಳ್ಳುವ ಗುಡ್‌ವಿಲ್ ...ಲ್ಲ; ಜನಪರ ಚಿಂತನೆಗಳಂತೂ ...ರಲೇ ಇರಲಿಲ್ಲ. ವ್ಯಾಪಾರಿ ಜಾಯ ...ದ ದೇಶಪಾಂಡೆ ಲಾಭ-ನಷ್ಟದ ...ಾರದ ತಕ್ಕಡಿ ಹಿಡಿದೇ ರಾಜಕಾರಣ ...ತ್ತಾ ಬಂದವರು.

ಸೂಟ್‌ಕೇಸ್ ಪ್ರೆಸಿಡೆಂಟ್

...ಂದು ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷನಾಗಲಿಕ್ಕೂ ...ಯಕ್ಕಲ್ಲದ ದೇಶಪಾಂಡೆಯಲ್ಲಿ ದಿಲ್ಲಿ ಕಾಂಗ್ರೆಸ್‌ನ ...ಡಲೀಕರು ಅದ್ಯಾವ ತಾಕತ್ತು ಕಂಡರೋ? ಸೋನಿಯಾರ ...ೕಯ ಕಾರ್ಯದರ್ಶಿ ಅಹ್ಮದ್ ಪಟೇಲ್, ಮಣಿ ...ರ್ ಅಯ್ಯರ್, ಗುಲಾಮ್‌ನಬಿ ಆಜಾದ್, ಆಸ್ಕರ್ ...ಂಡಿಸ್.. ಮುಂತಾದ ದಿಲ್ಲಿ ದಲ್ಲಾಳಿಗಳು ದೇಶ ...ಡೆಯ ಬಿಸಿನೆಸ್ ಬುದ್ಧಿ ಮತ್ತು ಕೊಪ್ಪರಿಗೆಗಟ್ಟಲೇ ...ಾಸು ನೋಡಿ ಈತ ಕೆಪಿಸಿಸಿಗೆ ಬೆಟರ್ ಪ್ರೆಸಿಡೆಂಟ್ ... ಸದಾ ಎಳೆದು ಮೇಡಮ್‌ನಿಂದ ಓಕೆ ಮಾಡಿಸಿ ...ದರು. ಕರ್ನಾಟಕ ರಾಜಕಾರಣಕ್ಕೆ ಬೇಕಾದ ಜಾತಿ ಬಲ ಅಥವಾ ಎಲ್ಲ ಜಾತಿ-ಸಮುದಾಯದವರಿಗೆ ಸಹ್ಯವಾದ ಸಮರ್ಥ ನಾಯಕತ್ವ ಎರಡೂ ಇಲ್ಲದಿದ್ದರೂ ದಗಾಕೋರ ದೇಶಪಾಂಡೆ ತನ್ನ ಸೂಟ್‌ಕೇಸ್ ರಾಜಕಾರಣದಿಂದ ಸೋನಿಯಾ ಸಹಾಯಕರ ಮೋಡಿ ಮಾಡಿಬಿಟ್ಟಿದ್ದರು.

ಮಾರ್ಗರೆಟ್ ಆಳ್ವ ಎಂಬ ಸೋನಿಯಾರ ಪರಿಚಾರಿಕೆಯೊಬ್ಬಳೇ ದೇಶಪಾಂಡೆಗೆ ದಿಲ್ಲಿ ಮಟ್ಟದಲ್ಲಿದ್ದ ಬಲಾಢ್ಯ ವಿರೋಧಿಯಾಗಿದ್ದರು. ಈಕೆಗೆ ತನ್ನನ್ನು ಕಾರವಾರ ಕ್ಷೇತ್ರದಲ್ಲಿ ಸೋಲಿಸಿದ ದೇಶಪಾಂಡೆ ಕೆಪಿಸಿಸಿ ಗದ್ದುಗೆ ಏರುವುದು ಇಷ್ಟವಾದೀತು ಹೇಗೆ? ಆಕೆಗೆ ದೇಶಪಾಂಡೆ ಅಡಿಗಡಿಗೂ ಅಡೆತಡೆಯೊಡ್ಡಿದ್ದರು. ಆಗೆಲ್ಲ ಕೆಪಿಸಿಸಿ ಕಿಂಗ್ ಆಗಲೇಬೇಕೆಂಬ ಹಠದಿಂದ ದೇಶಪಾಂಡೆ ತಂತ್ರಕ್ಕೆ ಬಿದ್ದರು. ಹಣದ ಜತೆಜತೆಗೆ ಮುಂಬೈ ಕಾಂಟೆಕ್ಟುಗಳ ಆಪರೇಟು ಮಾಡಿದರು. ತನ್ನ ಮಗನಿಗೆ ಹೆಣ್ಣುಕೊಟ್ಟ ಮಾವ-ಎನ್‌ಸಿಪಿಯ ಕೇಂದ್ರ ಮಂತ್ರಿ ಪ್ರಫುಲ್ ಪಟೇಲ್ ಮೂಲಕ ಶರದ್ ಪವಾರರಿಂದ ಸೋನಿಯಾಗೆ ಹೇಳಿಸಿದರು. ಸ್ವಜಾತಿಯ ಇನ್ನೊಬ್ಬ ಮಂತ್ರಿ ಮುರಳಿ ದೇವ್ರೂರಾರಿಂದ ಲಾಬಿ ಮಾಡಿಸಿದರು. ಅಹ್ಮದ್ ಪಟೇಲ್‌ರಂಥವರ ಖರೀದಿಸಿದರು. ಗುಲಾಮ್‌ನಬಿ, ಆಸ್ಕರ್‌ರ ಕಾಲೊತ್ತಿ ಮಸಾಜು ಮಾಡಿದರು.

ಸಿಎಂ ಕನಸು


ಕೆಪಿಸಿಸಿ ಅಧ್ಯಕ್ಷನಾಗುವಾಗ ಈತ ದಿಲ್ಲಿ ಧಣಿಗಳಿಗೆ ಕೊಟ್ಟ ಭರವಸೆ ಒಂದೇ: ಅಧ್ಯಕ್ಷನಾದ ಒಂದೇ ತಿಂಗಳಿಗೆ ಯಡ್ಡಿ ಸರ್ಕಾರ ಉರುಳಿಸಿ ಸಿಎಂ ಆಗ್ತೇನೆ. ಅದಕ್ಕೆ ಬೇಕಾದ ಸಂಪನ್ಮೂಲ ತಂತ್ರಗಾರಿಕೆ ನನ್ನಲ್ಲಿದೆ. ಕನಿಷ್ಠ 25 ಬಿಜೆಪಿ ಎಮ್ಮೆಲ್ಲೆಗಳ ಹೊರಗೆಳೆದು ನಾನೇ ಸಿಎಂ ಆಗ್ತೇನೆ. ನೀವೆಲ್ಲ ಜಾದೂ ನೋಡ್ತಾ ಇರಿ ಎಂದಿದ್ದ ದೇಶಪಾಂಡೆ. ಇದನ್ನೆಲ್ಲ ಸೋನಿಯಾ ಬಂಟರು ಅದೆಷ್ಟು ನಂಬಿದ್ದರೋ ಗೊತ್ತಿಲ್ಲ, ಆದರೆ ಶಾಸಕನಾಗಲೂ ಆಗದ ಪೊಕ್ಕು ಪುಢಾರಿ ತಾನು ರಾಜ್ಯದ ಮುಖ್ಯಮಂತ್ರಿಯಾಗುವ ಬಗ್ಗೆ ಬೊಗಳೆ ಬಿಟ್ಟುಬಂದಿದ್ದಂತೂ ಖರೆ.

ಆದರೂ ಈ ದೇಶಪಾಂಡೆಗೆ ಕರ್ನಾಟಕ ರಾಜಕಾರಣಕ್ಕೆ ಬೇಕಾದ ಜಾತಿಬಲ ಇರಲಿಲ್ಲವೆಂಬ 'ವಾಸ್ತವ' ಸೋನಿಯಾ ಸಲಹೆಗಾರರಿಗೆ ಇದ್ದೇ ಇತ್ತು. ಹಾಗಾಗಿ ರಾಜ್ಯ ರಾಜಕಾರಣದ ಆಯಕಟ್ಟಿನ ಜಾಗದಲ್ಲಿರುವ ಒಕ್ಕಲಿಗರ ಕುಲತಿಲಕ ಡಿ.ಕೆ.ಶಿವಕುಮಾರ್‌ನನ್ನು ಕಾರ್ಯಾಧ್ಯಕ್ಷನೆಂದು ನಾಮಿನೇಟ್ ಮಾಡಿದರು. ಹಾಗಂತ ಈತನೇನೂ ಇಡೀ ರಾಜ್ಯದ ಒಕ್ಕಲಿಗರು ಒಪ್ಪುವ ಧುರೀಣನೇನೂ ಅಲ್ಲ. ಹಾಗಂತ ದೇಶಪಾಂಡೆಗೆ ಕೇರ್ ಮಾಡುವ ಪೈಕಿಯೂ ಡಿಕೆಶಿ? ಅಲ್ಲಿಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಎರಡು ಸಮಾನಾಂತರ ಪವರ್ ಸೆಂಟರ್‌ಗಳು ಸೃಷ್ಟಿಯಾಗಿ ಮೇಲಾಟ ಶುರುವಾಯ್ತು.

ಜನತಾದಳದ ವಲಸಿಗ ದೇಶಪಾಂಡೆ ಕೆಪಿಸಿಸಿ ಅಧ್ಯಕ್ಷನಾಗಿದ್ದು ಬಹುತೇಕ ಕಾಂಗ್ರೆಸ್ಸಿಗರಿಗೆ ಇಷ್ಟವಾಗಲಿಲ್ಲ. ಈ ಅಸಮಾಧಾನದ ಬೆಂಕಿಗೆ ಡಿಕೆಶಿ ಆದಷ್ಟು ಪೆಟ್ರೋಲು ಸರಬರಾಜು ಮಾಡಿದರು. ದೇಶಪಾಂಡೆಗೆ ಪಾರ್ಟಿ ಸಂಘಟಿಸುವುದಿರಲಿ ವಲಸಿಗ-ಮೂಲ ನಿವಾಸಿ ನಡುವಿನ ಸಂಘರ್ಷ ನಿಯಂತ್ರಿಸುವುದೇ ಸಾಧ್ಯವಾಗಲಿಲ್ಲ. ಯಾವಾಗ ಇನ್ನೊಬ್ಬ ಮಾಜಿ ದಳಪತಿ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾದನೋ ಆಗ ಕಾಂಗ್ರೆಸ್ ಒಳಜಗಳದಿಂದ ಹೈರಾಣಾಗಿಹೋಯ್ತು.


ಸೋಲಿನ ಸರದಾರ

ದೇಶಪಾಂಡೆ ಅಧ್ಯಕ್ಷನಾಗುತ್ತಲೇ ರಾಜ್ಯ ಕಾಂಗ್ರೆಸ್‌ಗೆ ಕೇಡುಗಾಲ ಶುರುವಾಯ್ತು. ಒಂದರ ಹಿಂದೊಂದರಂತೆ ಹೊಡೆತ ಬಿತ್ತು. ಬಿಜೆಪಿ ಬಡಿದು ಸಿಎಂ ಆಗುವ ಪೌರುಷ ಹೈಕಮಾಂಡ್ ಮುಂದೆ ಹೊಡೆದು ಬಂದಿದ್ದ ದೇಶಪಾಂಡೆಗೆ ತನ್ನದೇ ಟೀಮಿನ ಸೈನಿಕ (ಶಾಸಕ)ರನ್ನು ವಿರೋಧಿ(ಬಿಜೆಪಿ)ಗಳು ಹೈಜಾಕ್ ಮಾಡಿದಾಗ ಏನೂ ಮಾಡಲಾಗಲಿಲ್ಲ. ಆಪರೇಷನ್ ಕಮಲ ನಡೆದಾಗ ದಿ ಗ್ರೇಟ್ ದೇಶಪಾಂಡೆಗೆ ಅದೆಂಥ ಮುಖಭಂಗವಾಗಿತ್ತೆಂದರೆ, ತಾನೇ ಮ್ಯಾಗಿಯ ವಿರೋಧ ಕಟ್ಟಿಕೊಂಡು ಟಿಕೆಟ್ ಕೊಡಿಸಿ ಶಾಸಕನಾಗಿದ್ದ


ದೇಶಪಾಂಡೆ

ಕಾರವಾರದ ಆನಂದ್ ಅಸ್ನೋಟಿಕರ್ ಎಂಬ ಬಚ್ಚಾ ರಾತ್ರೋರಾತ್ರಿ ಬಿಜೆಪಿ ಪಾಳೆಯಕ್ಕೆ ಹಾರಿದ್ದ ಆಗ ದೇಶಪಾಂಡೆ ಹತಾಶನಾಗಿ ಮೈ-ಕೈ ಪರಚಿಕೊಂಡಿದ್ದು ಮೋಜಾಗಿತ್ತು. ಮ್ಯಾಗಿ ಬಣಕ್ಕೆ ಖುಷಿ ಕೊಟ್ಟಿತ್ತು.


ದೇಶಪಾಂಡೆಯ ಕ್ಯಾಪ್ಟನ್‌ಶಿಪ್‌ನಲ್ಲಿ ನಡೆದ ಒಂದೇ ಒಂದು ಚುನಾವಣೆಯಲ್ಲೂ ಕಾಂಗ್ರೆಸ್ ಗೆದ್ದಿಲ್ಲ. ಆಪರೇಷನ್ ಕಮಲದ ಪಾತಕದಿಂದ ಎರಡೆರಡು ಬಾರಿ ನಡೆದ ಅಸೆಂಬ್ಲಿ ಬೈ-ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಮಕಾಡೆ ಮಲಗಿತು. ಅನಂತರದ ಲೋಕಸಭೆ ಚುನಾವಣೆಯಲ್ಲೂ ದೇಶಪಾಂಡೆಗೆ ಸ್ವಪಕ್ಷ ಗೆಲ್ಲಿಸಲು ಸಾಧ್ಯವಾಗಲೇ ಇಲ್ಲ.


ರಾಜಶೇಖರ್‌ಮೂರ್ತಿ

ಹಾಗೆಯೇ ಪಿಎಲ್‌ಡಿ ಬ್ಯಾಂಕು, ಸಹಕಾರಿ ಸಂಘಗಳ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲೇಸೋಲು. ಮೊನ್ನೆ ನಡೆದ ಬಿಬಿಎಂಪಿ ಎಲೆಕ್ಷನ್‌ನಲ್ಲಂತೂ ಕಾಂಗ್ರೆಸ್ ಹೀನಾಯ ಅಪಜಯ ಕಂಡಿದೆ. ಬಿಜೆಪಿ ಮತ್ತು ಸಿಎಂ ಯಡ್ಡಿ ಈ ಎರಡು ವರ್ಷದಲ್ಲಿ ಮಾಡಬಾರದ ಅಪರಾಧವೆಲ್ಲ ಮಾಡಿದ್ದಾರೆ. ಅಮಾಯಕ ರೈತರ ಕೊಂದಿದ್ದಾರೆ. ಚರ್ಚ್ ಮೇಲೆ, ಪಬ್ ಮೇಲೆ ಭಜರಂಗಿಗಳು ದಾಳಿ ಮಾಡಿದಾಗ, ಹೆಣ್ಣು ಮಕ್ಕಳಿಗೆ ಹೊಡೆದಾಗ ಹೇತ್ಲಾಂಡಿ ಹೋಮ್ ಮಿನಿಸ್ಟರ್ ಪಿಟೀಲು ಬಾರಿಸುತ್ತ ಪೇಜಾವರರ ಪಡಸಾಲೆಯಲ್ಲಿ ಪವಡಿಸಿದ್ದ! ಫ್ಯಾಸಿಸ್ಟ್ ಬಿಜೆಪಿಯನ್ನು ಹೆಡೆಮುರಿ ಕಟ್ಟಿ ಹಣಿಯಲು ಕಾಂಗ್ರೆಸ್‌ಗೆ ಹಲವು ಅವಕಾಶ ಸಿಕ್ಕಿತ್ತು. ಆದರೂ ಬಿಜೆಪಿ ಒಂದರ ಹಿಂದೊಂದರಂತೆ ಚುನಾವಣೆಗಳಲ್ಲಿ ಗೆಲ್ಲುತ್ತಲೇ ಬಂದಿದೆ. ಇದಕ್ಕೆ ಕಾಂಗ್ರೆಸ್‌ನ ದೌರ್ಬಲ್ಯ, ಅದರ ನಾಯಕ ದೇಶಪಾಂಡೆಯ ಹೇಡಿತನ-ನೈತಿಕ ಅಧಃಪತನಗಳೇ ಕಾರಣ.

ಬದಲಾವಣೆ ಬವಣೆ

ಬೆನ್ನೆಲುಬಿಲ್ಲದ ಮುಖೇಡಿ ದೇಶಪಾಂಡೆಯ ಜೂಜಾಟದಿಂದ ಇವತ್ತು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರೆಲ್ಲ ಡಿಮೊರಲೈಜ್ ಆಗಿಹೋಗಿದ್ದಾರೆ. ನಾಯಕರ ಕಚ್ಚಾಟದಿಂದ ಪಾರ್ಟಿ ಬರ್ಬಾದ್ ಆಗಿ ಹೋಗಿದೆ.


ಹರಿಪ್ರಸಾದ್

ದೇಶಪಾಂಡೆ ಕಂಡರೆ ಡಿಕೆಶಿಗೆ ಆಗುವುದಿಲ್ಲ, ಡಿಕೆಶಿಯೆಂದರೆ ಸಿದ್ದರಾಮಯ್ಯ ಮೂಗು ಮುರಿಯುತ್ತಾರೆ. ಹೋಗಲಿ ಕೇಂದ್ರದಲ್ಲಿರುವ ಇಲ್ಲಿಯ ಮಂತ್ರಿಗಳಲ್ಲಾದರೂ ಹೊಂದಾಣಿಕೆ, ಪಕ್ಷದ ಬಗ್ಗೆ ಕಾಳಜಿ ಇದೆಯಾ ಎಂದರೆ, ಊಹುಂ ಅದೂ ಇಲ್ಲ. ಕೃಷ್ಣ, ಖರ್ಗೆ ವೈರಿ. ಖರ್ಗೆ ಎಂದರೆ ಮುನಿಯಪ್ಪನಿಗೆ ಮುನಿಸು. ಆಸ್ಕರ್-ಮ್ಯಾಗಿಯಂಥವರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಜತೆಗಿನ ಬಾಂಧವ್ಯವನ್ನು ಸ್ಥಳೀಯ ಪಾರ್ಟಿಯನ್ನು ಚೂರಾಗಿಸಲು ಬಳಸುತ್ತಿದ್ದಾರೆ. ಇಂಥ ಕಾಲೆಳೆಯುವ ಮನೆಮುರುಕರಿಂದ ಕಾಂಗ್ರೆಸ್ ಉದ್ಧಾರವಾದೀತಾ? ಇವತ್ತು ಕಾಂಗ್ರೆಸ್ ಇಷ್ಟೊಂದು ಎಕ್ಕುಟ್ಟಿ ಹೋಗಲು ಆಸ್ಕರ್ ಫರ್ನಾಂಡಿಸ್‌ರ ಅಧಿಕ ಪ್ರಸಂಗದ ಕೊಡುಗೆ ದೊಡ್ಡದು! ಕಾಂಗ್ರೆಸ್‌ನ ಈ ಶೋಚನೀಯ ಸ್ಥಿತಿ ಸಾಕ್ಷಾತ್ ಸೋನಿಯಾ ತಲೆ ಬಿಸಿ ಮಾಡಿದರೆ ಆಕೆ ಕರ್ನಾಟಕದ ಕಾಂಗ್ರೆಸ್‌ಗೆ ಕಾಯಕಲ್ಪ ಕೊಡಲು ತನ್ನ ನಂಬಿಗಸ್ಥ ಬಂಟರ ಬಿಟ್ಟಿದ್ದಾರೆ.

ಬಿಬಿಎಂಪಿ ಎಲೆಕ್ಷನ್‌ನಲ್ಲಿ ಆಗಿರುವ ಭರ್ಜರಿ ಸೋಲಿನ ಬಳಿಕ 'ದೇಶಪಾಂಡೆ ಹಠಾವ್ರೋ' ಕೂಗಿಗೆ ಕುಸುವು ಬಂದಿದೆ. ಬಿಬಿಎಂಪಿ ಮುಖಭಂಗಕ್ಕೆ ದೇಶಪಾಂಡೆಯನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಈತನನ್ನು ಮನೆಗೆ ಕಳಿಸದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಉಳಿಗಾಲವಿಲ್ಲವೆಂಬುದು ಹೈಕಮಾಂಡ್‌ಗೆ ಖಾತ್ರಿಯಾಗಿದೆ. ಪಕ್ಷ ಹಾಳು ಕೆಡವಿದರೂ ದೇಶಪಾಂಡೆಗೆ ಅಧಿಕಾರ ಬಿಟ್ಟುಹೋಗುವ ಮರ್ಯಾದೆಯೂ ಇಲ್ಲವಾಗಿದೆ. ಆತ ತನ್ನ ಮುಂಬೈ ಆಶ್ರಯದಾತರ ಮೂಲಕ ಬಚಾವಿಗೆ ಲಾಬಿ ಶುರುಹಚ್ಚಿಕೊಂಡಿದ್ದಾರೆ.

ಅದೇನೇ ಇರಲಿ ಇವತ್ತು ರಾಜ್ಯದಿಂದ ಯಾರೇ ದಿಲ್ಲಿಗೆ ಹೋಗಲಿ ಸೋನಿಯಾ ಆಪ್ತ ಸಲಹೆಗಾರ ಅಹ್ಮದ್ ಪಟೇಲ್ ಒಂದು ಗಂಟೆ ಕರ್ನಾಟಕ ಕಾಂಗ್ರೆಸ್ ಕಾಯಕಲ್ಪದ ಸಾಧ್ಯಸಾಧ್ಯತೆ ಬಗ್ಗೆ ಚರ್ಚಿಸುತ್ತಾರೆ. ಒಂದು ರೌಂಡು ದೇಶಪಾಂಡೆ-ಡಿಕೆಶಿ-ಸಿದ್ದರಾಮಯ್ಯರನ್ನು ಸೋನಿಯಾ ಕರೆದು ಉಗಿದು ಕಳಿಸಿದ್ದೂ ಆಗಿದೆ. ಗ್ರಾಮ ಪಂಚಾಯ್ತಿ ಎಲೆಕ್ಷನ್ ಮುಗಿದ ತಕ್ಷಣ ಕೆಪಿಸಿಸಿ ಕ್ಯಾಪ್ಟನ್ ಬದಲಿಸುವ ತೀರ್ಮಾನ ಹೈಕಮಾಂಡ್ ಮಾಡಿದೆ. ತನ್ನ ತಲೆ ಉರುಳುವುದು ಖಾತ್ರಿಯಾಗಿರುವ ದೇಶಪಾಂಡೆ "ಸೋನಿಯಾ ಮೇಡಮ್ ಮನದಿಚ್ಛೆಯಂತಾಗಲಿ" ಎಂದು ಅಲವತ್ತುಕೊಳ್ಳುತ್ತಿದ್ದಾರೆ ಕಂಡಕಂಡಲ್ಲಿ.

ಯಾರು ಹಿತವರು?

ದೇಶಪಾಂಡೆಯನ್ನು ಬದಲಿಸಿದರೆ ಯಾರ ಕೈಗೆ ಚುಕ್ಕಾಣಿ ಕೊಡುವುದು? ಇದು ಕಾಂಗ್ರೆಸ್ ಹೈಕಮಾಂಡ್‌ಗೆ ದೊಡ್ಡ ತಲೆ ತಿನ್ನುವ ಪ್ರಶ್ನೆಯಾಗಿದೆ. ಉತ್ತರಾಂಚಲದ ರಾಜ್ಯಪಾಲೆ ಮಾರ್ಗರೆಟ್ ಆಳ್ವಗೆ ರಾಜ್ಯ ರಾಜಕಾರಣದಲ್ಲಿ ಆಸಕ್ತಿ ಜಾಸ್ತಿ. ತಾನೇ ಒಂದು ಕೈ ಏಕೆ ನೋಡಬಾರದು? ಆ ಮೂಲಕ ತನ್ನ ಎಂಪಿ ಕನಸು ಭಗ್ನ ಮಾಡಿದ, ತನ್ನ ಹಿಂಬಾಲಕರನ್ನು ಇವತ್ತಿಗೂ ಕಾರವಾರ ಜಿಲ್ಲೆಯಲ್ಲಿ ಕಾಡುತ್ತಿರುವ ವೈರಿ ದೇಶಪಾಂಡೆಯನ್ನೇಕೆ ಮುಗಿಸಬಾರದು? ಎಂಬ ಜಿದ್ದು ಆಕೆಗೆ. ಆದರೆ ಈಕೆ ಕೆಪಿಸಿಸಿ ರಾಣಿಯಾದರೆ 'ದೇಶಪಾಂಡೆ ಯುಗ' ಬದಲಾಗದು. ಒಣ ಈಗೋಗಳ ಈಯಮ್ಮನಿಗೆ ರಾಜ್ಯ ಮಟ್ಟದಲ್ಲಿ ನಾಯಕತ್ವ ಕೊಡುವ ಸಾಮರ್ಥ್ಯವಿಲ್ಲ. ಈಕೆ ಏನಿದ್ದರೂ ಹಿಂಬಾಗಿಲ ತೆರೆಮರೆಯ ರಾಜಕಾರಣಕ್ಕಷ್ಟೇ ಲಾಯಕ್ಕು.

ಮ್ಯಾಗಿಯನ್ನು ಒಪ್ಪುವವರೂ ಹೈಕಮಾಂಡ್‌ನಲ್ಲಿ ಕಮ್ಮಿ. ಇದು ಆಕೆಗೆ ಗೊತ್ತು. ಹೀಗಾಗಿ ಆಕೆ ರಾಜ್ಯ ಸಭಾ ಸದಸ್ಯ ಬಿ.ಕೆ.ಹರಿಪ್ರಸಾದ್ ಹೆಸರು ತೇಲಿಬಿಟ್ಟಿದ್ದಾರಂತೆ. ಈಡಿಗ ಸಮುದಾಯದ ಹರಿಗೆ ನಾಯಕತ್ವದ ಕ್ಯಾಲಿಬರ್ ಇದೆಯಾದರೂ ವರ್ತಮಾನ ರಾಜಕಾರಣ ಆತನಿಂದ ನಿಭಾಯಿಸುವುದು ಕಷ್ಟವಾದೀತು. ಇದು ದಿಲ್ಲಿಯಲ್ಲಿ ಕುಳಿತಿರುವ ಎಐಸಿಸಿ ಥಿಂಕ್ ಟ್ಯಾಂಕ್‌ನ ಚಿಂತನಮಂಥನ. ಈ ಹೈಕಮಾಂಡ್ ಮಾಂಡಲೀಕರೊಂದು ನಾಯಕತ್ವ ಸೂತ್ರವೂ ತಯಾರು ಮಾಡಿದ್ದಾರೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆವ ಟ್ಯಾಕ್‌ಟೀಸ್ ಇದು.

ಲಿಂಗಾಯತ ಯಡ್ಡಿ ಸರ್ಕಾರವನ್ನು ಗಣಿ ರೆಡ್ಡಿಗಳ ಹುತ್ತ ಬಡಿಯುವ ಮೂಲಕ ಉರುಳಿಸಿದರೆ ಪರ್ಯಾಯವಾಗಿ ಲಿಂಗಾಯತ ನಾಯಕನನ್ನು ತರಬೇಕು. ಹಾಗಾದಾಗ ಮಾತ್ರ ಬಹುಸಂಖ್ಯಾತ ಲಿಂಗಾಯತರನ್ನು ತಹಬಂದಿಯಲ್ಲಿಟ್ಟುಕೊಳ್ಳಬಹುದೆಂಬ ಲೆಕ್ಕಾಚಾರ ದಿಲ್ಲಿ ದೊರೆಗಳದು. ಅದಕ್ಕಾಗಿ ಒಂಚೂರು ಫೇಸ್‌ವ್ಯಾಲ್ಯೂ ಇರುವ ವಯೋವೃದ್ಧ ಲಿಂಗಾಯತ ಮುಖಂಡ-ಜೆಡಿಎಸ್‌ನ ರಾಜಶೇಖರಮೂರ್ತಿಯನ್ನು ಕೆಪಿಸಿಸಿ ಪ್ರೆಸಿಡೆಂಟ್ ಮಾಡಲು ಪ್ಲಾನ್ ಮಾಡಲಾಗಿದೆ. ಡಿಕೆಶಿಯ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಮುಸ್ಲಿಮ್ ಲೀಡರ್ ಸಿ.ಎಂ.ಇಬ್ರಾಹಿಂರನ್ನು ತಂದು ಕೂರಿಸಿದರೆ ಹೇಗೆಂಬ ಚರ್ಚೆಗಳು ಸಾಗಿವೆ ಕಾಂಗ್ರೆಸ್ ಪಡಸಾಲೆಯಲ್ಲಿ.

ಹೀಗೆ ರಾಜಶೇಖರಮೂರ್ತಿ-ಇಬ್ರಾಹಿಂ-ಸಿದ್ದರಾಮಯ್ಯ ಮೋಟವಮ್ಮರನ್ನು ಅಕ್ಕಪಕ್ಕ ನಿಲ್ಲಿಸಿ ಯುದ್ಧಕ್ಕಿಳಿಸಿದರೆ ಮತಾಂಧ ಬಿಜೆಪಿಯನ್ನು ಭೂಗತ ಮಾಡಬಹುದೆಂದು ಜಾತಿ ಸಮೀಕರಣ ದಿಲ್ಲಿಯಲ್ಲಿ ತಯಾರಾಗಿದೆ. ಇದು ರಾಜ್ಯದ ಪ್ರಬಲ ಕೋಮುಗಳಾದ ಲಿಂಗಾಯತ-ಅಲ್ಪಸಂಖ್ಯಾತ-ಹಿಂದುಳಿದ ಮತ್ತು ದಲಿತರ ಒಲವು ಗಳಿಸುವ ತಂತ್ರಗಾರಿಕೆ. ಈ ಸೂತ್ರ ವರ್ಕ್‌ಔಟ್ ಆದೀತೇ? ಔಟ್‌ಡೇಟೆಡ್ ರಾಜಶೇಖರಮೂರ್ತಿಯನ್ನು ಚಲಾವಣೆಗೆ ತರಲಾದೀತೆ? ಎಲ್ಲ ಪಕ್ಷ ಸುತ್ತಿರುವ ಮೂರ್ತಿಯಿಂದ ಕಾಂಗ್ರೆಸ್‌ಗೆ ಲಾಭವಾದೀತೆ? ಅನುಕೂಲವಾಗುತ್ತದೆಂದು ಇಟ್ಟುಕೊಂಡರೂ ಮೂರ್ತಿ ಲಿಂಗಾಯತ ಮಠಾಧೀಶರ ಫರ್ಮಾನು ಮೀರಿ ಕಾಂಗ್ರೆಸ್ ಸೇರಲು ಧೈರ್ಯ ತೋರಿಸಿಯಾರೇ? ಕೊನೆಗೆ ಕಪ್ಪೆ ಜಾತಿಯ ರಾಜ್ಯ ಕಾಂಗ್ರೆಸ್ ಪುಢಾರಿಗಳನ್ನು ಒಟ್ಟಿಗೆ ಕೂರಿಸಿಕೊಂಡು ಸದ್ರಿ ಸೂತ್ರ ಮನವರಿಕೆ ಮಾಡಿಸುವುದು ಸೋನಿಯಾರ ಸಲಹೆಗಾರರಿಂದ ಸಾಧ್ಯವೇ?

ಇದು ಸದ್ಯ ಕಾಂಗ್ರೆಸ್‌ನಲ್ಲಿ ನಡೆದಿರುವ ಸಾಧಕ-ಬಾಧಕ ಚರ್ಚೆ. ಒಂದಂತೂ ನಿಜ. ದಂಡ-ಪಿಂಡ ದೇಶಪಾಂಡೆಯನ್ನು ಕೆಪಿಸಿಸಿ ಅಧ್ಯಕ್ಷಗಾದಿಯಿಂದ ತೆಗೆಯದೇ ಕರ್ನಾಟಕ ಕಾಂಗ್ರೆಸ್ ಪುನರುತ್ಥಾನ ಸಾಧ್ಯವೇ ಇಲ್ಲ!

• ನಮುಶ



ಸ್ವಯಂ'ವರ'ನನ್ನು ವಂಚಿಸಿದ 'ವಧು'!

ಇಡೀ ಮಾಧ್ಯಮವೇ ಮಾರುಕಟ್ಟೆಯ ಗುಲಾಮನಾಗುತ್ತಿರುವುದಕ್ಕೆ ಈ 'ಸ್ವಯಂವರ' ಒಂದು ಉದಾಹರಣೆಯಷ್ಟೇ. ಪಶ್ಚಿಮದ ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರಮೋಟ್ ಮಾಡುತ್ತಿರುವ ಟಿ.ವಿ. ಚಾನೆಲ್‌ಗಳು ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಹೆಣ್ಣನ್ನು ಹರಾಜಿಗಿಟ್ಟಿವೆ... ಕ್ರೈಮ್‌ಸ್ಟೋರಿಗಳು, ಮಾಟ-ಮಂತ್ರಗಳು, ನಿತ್ಯ ಜ್ಯೋತಿಷ್ಯಗಳು... ಹೀಗೆ ಎಲ್ಲದರಲ್ಲಿ ಹೆಣ್ಣೇ ಮೂಲ ಕೇಂದ್ರ... ಮತ್ತು ಹೆಣ್ಣೇ ಪೂರ್ತಿ ಶೋಷಿತಳು.... ಚಾನೆಲ್‌ಗಳ ಈ ಅಸಹ್ಯಕರ ಚಟುವಟಿಕೆಗೆ ಈ ಪ್ರಕರಣ ಒಂದು ಎಕ್ಸಾಂಪಲ್ ಅಷ್ಟೇ... ವಿಚಿತ್ರವೆಂದರೆ ಟಿವಿ ಚಾನೆಲ್‌ಗಳ ಟಿಆರ್‌ಪಿ ಏರಿಸುತ್ತಿರುವವರಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕ!

ಕೇವಲ ಮೂರು ವಾರಗಳ ಹಿಂದಷ್ಟೇ ನಿಮ್ಮ ಈ 'ಲಂಕೇಶ್' ವಾರ ಪತ್ರಿಕೆಯ ಸಿನಿಮಾ ಪುಟದಲ್ಲಿ 'ರಕ್ಷಿತಾಳ ಸ್ವಯಂವರದಲ್ಲಿ ನಕಲಿ ವಧುಗಳು!' ಎಂಬ ವರದಿ ಪ್ರಕಟವಾಗಿತ್ತು. 'ಈ ಕಾರ್ಯಕ್ರಮದಲ್ಲಿ ಸಾಕಷ್ಟು ಕಲರ್‌ಫುಲ್ ಇತಿಹಾಸವಿರುವ ಸುಧಾ, ನವ್ಯಾ ಎಂಬ ಸಹನಟಿಯನ್ನು ಕರೆತಂದು ಇವರೇ ವಧುಗಳು ಎಂದು ತೋರಿಸಿ ವಂಚಿಸುತ್ತಿದ್ದಾರೆ. ಇವರು ನಿಜವಾದ ವಧುಗಳಲ್ಲ ಬದಲಾಗಿ ದಿನದ ಪೇಮೆಂಟ್‌ಗಾಗಿ ಬರುತ್ತಿರುವ ನಕಲಿ ವಧುಗಳು' ಎಂದು 'ಸ್ವಯಂವರ' ಆರಂಭಗೊಂಡ ಎರಡನೇ ವಾರಕ್ಕೇ ನಾವು ಬರೆದಿದ್ದೆವು. ಈಗ ಅದೇ ವಿಚಾರ ದೊಡ್ಡ ರಾದ್ಧಾಂತವಾಗಿ ಓರ್ವ ಯುವಕನ ಮದುವೆಯ ಕನಸುಗಳನ್ನು ಛಿದ್ರ ಮಾಡಿದೆಯಲ್ಲದೆ, ಸುವರ್ಣ ಚಾನೆಲ್‌ನ ಮಾನವೂ ಹರಾಜಾಗುವಂತೆ ಮಾಡಿದೆ.

ಕಾರ್ಯಕ್ರಮ ಆರಂಭವಾಗಿದ್ದು ಹೀಗೆ...

ಸದ್ಯ ಎಲ್ಲ ಚಾನೆಲ್‌ಗಳಲ್ಲೂ ಸಣ್ಣಪುಟ್ಟ ಮಕ್ಕಳಿಂದ ಹಾಡು ಹೇಳಿಸಿ ಡ್ಯಾನ್ಸ್ ಮಾಡಿಸಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ಜೊತೆಗೆ ಗಲ್ಲಿ ಗಲಾಟೆಗಳನ್ನು ಮತ್ತೆ ಮನೆಯೊಳಗಿನ ಕಿತ್ತಾಟಗಳನ್ನು ಕ್ಯಾಮೆರಾಗಳ ಮುಂದೆ ತಂದು ಕಿಟ್ಟದರಿದ್ರದ ಕಣ್ಣೀರಿನ ಶೋಗಳೇ ಮೂಡಿಬರುತ್ತಿವೆ. ಆದರೆ ಸುವರ್ಣ ಚಾನೆಲ್‌ನವರು ಅವೆಲ್ಲಕ್ಕೂ ಹೊರತಾದ ಬೇರೊಂದು ರಿಯಾಲಿಟಿ ಶೋ ಆರಂಭಿಸಬೇಕು ಎಂದು ಪ್ಲಾನ್ ಮಾಡಿದರು. ಅದೇ ಹೊತ್ತಿಗೆ ಸ್ಟಾರ್ ಪ್ಲಸ್‌ನಲ್ಲಿ 'ಪರ್‌ಫೆಕ್ಟ್ ಬ್ರೈಡ್' ಎಂಬ ಕಾರ್ಯಕ್ರಮವೊಂದು ತುಂಬಾ ಜನಪ್ರಿಯತೆ ಪಡೆದಿತ್ತು. ಆ ಕಾರ್ಯಕ್ರಮವನ್ನು ಮೆಡಿಟೆಕ್ ಸಂಸ್ಥೆಯೇ ನಿರ್ಮಾಣ ಮಾಡಿತ್ತು. ಹಿರಿಯ ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವ ಅವರ ಇಬ್ಬರು ಪುತ್ರರು ನಡೆಸುವ ಈ ಸಂಸ್ಥೆಗೆ ಈ ಕಾರ್ಯಕ್ರಮವನ್ನು ಕನ್ನಡದಲ್ಲೂ ನಿರ್ಮಿಸಬೇಕೆಂದು ಸುವರ್ಣ ವಾಹಿನಿ ಮನವಿ ಮಾಡಿತ್ತು. ಅದಕ್ಕೆ ಮೆಡಿಟೆಕ್ ಮುಖ್ಯಸ್ಥ ನಿವೇದಿತ್ ಆಳ್ವ ಕೂಡ ಒಪ್ಪಿಗೆ ಸೂಚಿಸಿದರು.

ಕಾರ್ಯಕ್ರಮದ ನಿರೂಪಣೆಗೆ ಇತ್ತೀಚಿಗಿನ ತನಕ ಪಡ್ಡೆಗಳ ಅಚ್ಚುಮೆಚ್ಚಿನ ನಾಯಕಿಯಾಗಿದ್ದ ರಕ್ಷಿತಾಳನ್ನು ಒಪ್ಪಿಸಿದ್ದಾಯಿತು: ಕಾರ್ಯಕ್ರಮದ ಪ್ರೋಮೋಗಳನ್ನು ಶೂಟ್ ಮಾಡಿ ಏಪ್ರಿಲ್ '12ರಿಂದ ಪ್ರಸಾರ'ವಾಗುತ್ತದೆ ಎಂದು ಜಾಹೀರಾತುಗಳೂ ರಾರಾಜಿಸಿದವು. ವಿಕಟವೆಂದರೆ, ಏಪ್ರಿಲ್ 9ನೇ ತಾರೀಖು ದಾಟಿದರೂ ಈ ಕಾರ್ಯಕ್ರಮದ ಒಂದೇ ಒಂದು ಎಪಿಸೋಡೂ ಚಿತ್ರೀಕರಣಗೊಂಡಿರಲಿಲ್ಲ! ಅದಕ್ಕೆ ಕಾರಣ, ಇವರ ಪ್ರೋಮೋಗಳನ್ನು ನೋಡಿ ಹತ್ತಾರು ಜನ ಹುಡುಗರು ಬಂದು 'ಸ್ವಯಂವರ'ದ ಬಾಗಿಲಲ್ಲಿ ಕ್ಯೂ ನಿಂತಿದ್ದರೂ, ಒಬ್ಬೇ ಒಬ್ಬ ಸಭ್ಯ ಹೆಣ್ಣು ಮಗಳೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮನಸ್ಸು ಮಾಡಿರಲಿಲ್ಲ. 'ಮದುವೆ ಗಂಡಿಗೆ ಅದೇ ಇಲ್ಲ' ಅನ್ನೋ ಹಾಗೆ 'ಸ್ವಯಂವರ'ಕ್ಕೆ ವಧುಗಳೇ ದಿಕ್ಕಿಲ್ಲದಂತಾಗಿತ್ತು.



ಸುಧಾ ಹಿರೇಮಠ್

ಆಗ ವಿಧಿಯಿಲ್ಲದೆ, ಸುವರ್ಣ ಚಾನೆಲ್ ಪಿಆರ್‌ಓ ತರುಣ್, ಸಿನಿಮಾ ಶೂಟಿಂಗ್‌ಗಳಿಗೆ ಎಕ್ಸ್‌ಟ್ರಾ ನಟಿಯರನ್ನು ಸರಬರಾಜು ಮಾಡುವ ವರುಣ್ ಎಂಬ ಬ್ರೋಕರ್‌ನನ್ನು ಸಂಪರ್ಕಿಸಿ "'ಸ್ವಯಂವರ'ದಲ್ಲಿ ಪಾತ್ರವಹಿಸಲು ಒಬ್ಬ ಹುಡುಗಿ ಬೇಕು" ಎಂದರು. ಆಗ ವರುಣ್ 'ಸ್ವಯಂವರ'ಕ್ಕೆ ಓರ್ವ ವಧುವಿನ ಅರೇಂಜ್‌ಮೆಂಟ್ ಮಾಡಿದರು. ಈ ಮಹಾತ್ಮ ವರುಣ್ 'ಸ್ವಯಂವರ'ಕ್ಕೆ ಕರುಣಿಸಿದ ಹುಡುಗಿಯಾದರೂ ಎಂಥವಳು?

ಪಕ್ಕಾ ಪ್ರೊಫೆಷನಲ್ಲು!

ಮೊದಲ ಎಪಿಸೋಡಿನಲ್ಲಿ ಸುಧಾ ಎಂಬ ಹುಡುಗಿ ಪ್ರತ್ಯಕ್ಷವಾದ ಕೂಡಲೆ ಎಲ್ಲರಿಗೂ ಒಂದು ರೀತಿಯ ಅನುಮಾನ ಶುರುವಾಗಿತ್ತು. ಗಾಂಧಿನಗರವನ್ನು ಚೆನ್ನಾಗಿ ಬಲ್ಲವರಂತೂ "ಇದೇನಪ್ಪಾ?" ಎಂದು ಬಾಯಿಮೇಲೆ ಬೆರಳಿಟ್ಟುಕೊಂಡಿದ್ದರು. ಸುಧಾ ಹಿರೇಮಠ್ ಎಂಬ ಹುಡುಗಿ ಮೂಲತಃ ವಿಜಾಪುರದವಳು. ಸಿನಿಮಾ ಹೀರೋಯಿನ್ ಆಗಬೇಕು ಎಂಬ ಆಸೆಯೊಂದಿಗೆ ಬೆಂಗಳೂರು ಸೇರಿದ್ದ ಈ ಹುಡುಗಿಗೆ ಇಲ್ಲಿ ದೊರಕಿದ್ದು ಹೀರೋಯಿನ್ ಹಿಂದೆ ನಿಲ್ಲುವ ಪಾತ್ರಗಳಷ್ಟೇ. ಇದ್ದುದರಲ್ಲೇ 'ನೀನ್ಯಾರೆ?', 'ಕಿರಣ್ ಬೇಡಿ' ಚಿತ್ರಗಳಲ್ಲಿ ಮುಖ ಕಾಣುವಂತಹ ಪಾತ್ರಗಳು ಆಕೆಗೆ ದೊರಕಿದ್ದವು. ಈಗ ಚಿತ್ರೀಕರಣಗೊಳ್ಳುತ್ತಿರುವ, ವಿಜಯರಾಘವೇಂದ್ರ ನಟಿಸಿರುವ 'ರಾಧಾ' ಎಂಬ ಚಿತ್ರದಲ್ಲೂ ಈಕೆ ಸಣ್ಣದೊಂದು ಪಾತ್ರದಲ್ಲಿ ನಟಿಸಿದ್ದಾಳೆ. ಜೊತೆಗೆ ಒಂದಿಷ್ಟು ಸೀರಿಯಲ್ಲುಗಳಲ್ಲೂ ಸಣ್ಣ ಪುಟ್ಟ ಪಾತ್ರ ಮಾಡಿದ್ದಾಳೆ.

ಆದರೆ ಜೂನಿಯರ್ ಆರ್ಟಿಸ್ಟ್ ಆಗಿರುವುದರಿಂದ, ಸಂದುಗೊಂದುಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳಿಂದ ತಾನು ಜೀವನ ನಡೆಸುವುದು ಅಸಾಧ್ಯ ಎಂಬುದನ್ನು ತಿಳಿದ ಈ ಹುಡುಗಿ ಕೊನೆಗೆ ಮೊರೆ ಹೋಗಿದ್ದು ಮೈ ಕಸುಬಿಗೆ. ಮೊದಲು ನವರಂಗ್ ಬಳಿ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಿದ್ದ ಈಕೆ ಆನಂತರ ಬಸವೇಶ್ವರನಗರದ ಮಂಜು ಆಂಟಿ ಯಾನೆ ಅಮೃತಾ, ಶ್ವೇತಾ ಮುಂತಾದವರೊಂದಿಗೆ ಸೇರಿಕೊಂಡು ತನ್ನದೇ ಬಿಜಿನೆಸ್ಸನ್ನು ಆರಂಭಿಸಿದ್ದಳು. ನೋಡನೋಡುತ್ತಿದ್ದಂತೆ ಆಕೆ ಕಮಲಾನಗರ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ಫ್ಲಾಟೊಂದನ್ನು ಹಿಡಿದು ಐಷಾರಾಮಿ ಜೀವನ ಆರಂಭಿಸಿದಳು. ಈ ಮಧ್ಯೆ ಕಿರುತೆರೆ ಛಾಯಾಗ್ರಾಹಕ ಜೀವಾ ಎಂಬಾತನೊಂದಿಗೆ ಜುಮ್ಮಾ ಚಕ್ಕಾ ಕೂಡಾ ಆರಂಭವಾಗಿತ್ತು...


ರಾಮಕೃಷ್ಣ

ಇವೆಲ್ಲಾ ಆಕೆಯ ಖಾಸಗಿ ವಿಚಾರಗಳು. ಆದರೆ ಇಂಥ ಹುಡುಗಿಯೊಬ್ಬಳು 'ಸ್ವಯಂವರ'ದಂಥ ಕಾರ್ಯಕ್ರಮದಲ್ಲಿ ಮದುವೆ ಹೆಣ್ಣಿನ ರೂಪದಲ್ಲಿ ಪ್ರತ್ಯಕ್ಷಗೊಂಡರೆ ಯಾರಿಗೆ ತಾನೆ ಆಶ್ಚರ್ಯವಾಗುವುದಿಲ್ಲ?

ಹೋಗಲಿ, ತನ್ನ ಹಳೇ ವ್ಯವಹಾರಗಳನ್ನು ಬಿಟ್ಟು ಈಕೆ ಹೊಸ ಜೀವನವನ್ನು ಅಪೇಕ್ಷಿಸಿದ್ದರೆ, ಆ ಮಾತು ಬೇರೆ ಇರುತ್ತಿತ್ತು. ಆದರೆ ಈಕೆ ಕಾರ್ಯಕ್ರಮದ ನಿರ್ದೇಶಕ ತ್ಯಾಗರಾಜ್ ಮುಂದೆಯೇ 'ಸ್ವಯಂವರ'ಕ್ಕೆ ಬಂದಿದ್ದ ಯುವಕರನ್ನು ಕಂಡು 'ಅಯ್ಯೋ, ಇದಕ್ಕಿಂತ ಚೆಂದವಿರುವ ಎಂತೆಂಥಾ ಹುಡುಗರನ್ನೆಲ್ಲಾ ನೋಡಿದ್ದೀನಿ.. ಇವರ್‍ಯಾವ ಮಹಾ' ಎಂದು ಬಿಂಕ ಮಾಡುತ್ತಿದ್ದಳಂತೆ. ಕಡೆಗೆ ಗಂಗಾಧರ್ ಎಂಬ ವರ ಈಕೆಯನ್ನು ಒಪ್ಪಿ ಮದುವೆಯಾಗಲು ತುದಿಗಾಲಲ್ಲಿ ನಿಂತಿದ್ದಾಗ, ಸ್ವತಃ ಕಾರ್ಯಕ್ರಮದ ಸಂಘಟಕರೇ "ಬೇಡಯ್ಯಾ ಈ ಹುಡುಗಿಯ ಸಹವಾಸ... ಬಿಟ್ಟುಬಿಡು. ಆಕೆ ಇಲ್ಲಿ ಬಂದಿರುವುದು ನಟಿಸುವುದಕ್ಕೆ" ಎಂದು ಹೇಳಿ ಆತನನ್ನು ಪಾರು ಮಾಡಿದ್ದರು. ಹೀಗಾಗಿ ವೀಕ್ಷಕರ ಮುಂದೆ ಈ ಮದುವೆ ಮುರಿದುಬಿತ್ತು!

'ಸ್ವಯಂವರ'ದಲ್ಲಿ ವಧು ಪಾತ್ರದಲ್ಲಿ ಸುಧಾ ನಟಿಸಿದ್ದಕ್ಕೆ, ಕಾರ್ಯಕ್ರಮದವರು ಆಕೆಗೆ ದಿನಕ್ಕೆ ಮೂರು ಸಾವಿರ ರೂಪಾಯಿಗಳಂತೆ ಹದಿನೈದು ಸಾವಿರ ರೂಪಾಯಿಗಳನ್ನು ನೀಡಿದ್ದರಂತೆ. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಸುಧಾ ವರನ ಕಡೆ ತಿರುಗಿಯೂ ನೋಡದೇ ರೊಕ್ಕ ಎಣಿಸಿಕೊಂಡು ನಾಪತ್ತೆಯಾದಳು...

ಎರಡನೇ ಎಪಿಸೋಡು ಶುರುವಾಯ್ತು...

ಎರಡನೇ ಎಪಿಸೋಡಿನಲ್ಲಿ ವಧುವಾಗಿ ಬಂದವಳು ಕೂಡ ಓರ್ವ ಧಾರಾವಾಹಿ ನಟಿ. ಆಕೆಯ ಹೆಸರು ನವ್ಯಾ. ಈಕೆಯ ತಂದೆ ಪುಟ್ಟಸ್ವಾಮಿ ಮೈಸೂರಿನಲ್ಲಿ ಕೆಎಸ್‌ಐಸಿ ಅಧಿಕಾರಿ. ಈ ಅಯ್ಯಂಗಾರಿ ಹುಡುಗಿಯ ತಾಯಿ ಸರಸ್ವತಿ ಕೂಡಾ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುತ್ತಾಳೆ. ದಿನೇಶ್ ಬಾಬು ನಿರ್ದೇಶನದ ಚಿತ್ರಗಳಲ್ಲಿ ಮಾತ್ರ ಸರಸ್ವತಿ ಆಂಟಿಗೆ 'ಪರ್ಮನೆಂಟ್ ಪಾರ್ಟು' ಇದ್ದೇ ಇರುತ್ತದಂತೆ! ಕನಕಪುರ ರಸ್ತೆಯ ತಿರುಮಲ ರೆಸಿಡೆನ್ಸಿಯಲ್ಲಿ ಮನೆ ಹೊಂದಿರುವ ಸರಸ್ವತಿ ಪುತ್ರಿ ನವ್ಯಾಳದ್ದೂ ರಂಗುರಂಗಿನ ಇತಿಹಾಸವೇ...


ನವ್ಯಾ

'ಕಲ್ಯಾಣಿ', 'ಜೋಕಾಲಿ' ಮುಂತಾದ ಧಾರಾವಾಹಿಗಳಲ್ಲಿ ನಟಿಸಿರುವ ನವ್ಯಾ ಎರಡು ವರ್ಷಗಳ ಹಿಂದೆ ಆರಂಭವಾದ ದಯಾಳ್ ನಿರ್ದೇಶನದ 'ಸರ್ಕಸ್' ಚಿತ್ರದ ಮುಹೂರ್ತದ ದಿನದಂದೇ ಮೊದಲ ಬಾರಿಗೆ ಪತ್ರಕರ್ತರ ಮುಂದೆ ಕಾಣಿಸಿಕೊಂಡಿದ್ದಳು. ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ನಡೆದ ಮುಹೂರ್ತದಲ್ಲಿ ನಿರ್ದೇಶಕ ದಯಾಳ್ "ಈಕೆಗೆ ಡೈನಾಮಿಕ್ ಪಾತ್ರವೊಂದನ್ನು ಕೊಟ್ಟಿದ್ದೀನಿ" ಎಂದು ಹೇಳಿದ್ದ. ಆದರೆ ಸಿನಿಮಾ ಆರಂಭವಾದ ಒಂದೆರಡು ದಿನಕ್ಕೇ ಅದೇನಾಯಿತೋ. ನವ್ಯಾ ಕಿರಿಕ್ಕು ಮಾಡಿಕೊಂಡು ಮೈಸೂರಿನಲ್ಲಿ ನಡೆಯುತ್ತಿದ್ದ ಶೂಟಿಂಗ್‌ಅನ್ನು ನಿಲ್ಲಿಸಿ, ಅರ್ಧಕ್ಕೇ ಬೆಂಗಳೂರಿಗೆ ಓಡಿಬಂದಿದ್ದಳು. ಇನ್ನೇನು ಬಿಡುಗಡೆಗೆ ಕಾದಿರುವ 'ಎರಡನೇ ಮದುವೆ' ಚಿತ್ರದಲ್ಲೂ ಈಕೆ ನಟಿಸಿದ್ದಾಳೆ.

ಈ ನಡುವೆ 'ಜೋಕಾಲಿ' ಧಾರಾವಾಹಿಯಲ್ಲಿ ನಟಿಸುವಾಗ ನಟ ಶಿವಧ್ವಜ್‌ನೊಂದಿಗೆ ಈಕೆಯ ಪರಿಚಯ ಬೆಳೆದಿತ್ತು. ಅಂಬೇಡ್ಕರ್ ಕಾಲೇಜು ಹತ್ತಿರದ ಉಲ್ಲಾಳ ರಸ್ತೆಯಲ್ಲಿರುವ ಶಿವಧ್ವಜ್‌ನ ಸ್ಟುಡಿಯೋದಲ್ಲೇ ಈಗ 'ಸ್ವಯಂವರ'ದ ಎಪಿಸೋಡುಗಳು ಚಿತ್ರೀಕರಣಗೊಳ್ಳುತ್ತಿರುವುದು. ಹೀಗಾಗಿ ಯಾವುದೋ ನಟಿಗೆ ಹೋಗುವ ಸಂಭಾವನೆ ನಮ್ಮವರಿಗೇ ಸಿಗಲಿ ಎಂಬ ಕಾರಣಕ್ಕೆ ಶಿವಧ್ವಜ್ 'ಸ್ವಯಂವರ'ದಲ್ಲಿ ನಟಿಸುವ ಅವಕಾಶವನ್ನು ನವ್ಯಾಳಿಗೆ ಕೊಡಿಸಿದ್ದರು. ಎಪಿಸೋಡೊಂದಕ್ಕೆ ಹತ್ತು ಸಾವಿರ ಬೇಕು ಎಂದು ಈಕೆ ಆರಂಭದಲ್ಲಿ ಹಠ ಹಿಡಿದರೂ ಛಾನೆಲ್‌ನವರು ಈಕೆಗೆ ದಿನವೊಂದಕ್ಕೆ ಐದು ಸಾವಿರದಂತೆ ಒಟ್ಟು ಐದು ದಿನದ ಶೂಟಿಂಗ್‌ಗೆ 25 ಸಾವಿರ ರೂಪಾಯಿಗಳಿಗೆ ಒಪ್ಪಂದ ಮಾಡಿಕೊಂಡರು.

ಆದರೆ ನವ್ಯಾ ವರನಿಗಾಗಿ ಹುಡುಕುತ್ತಿರುವ ವಧು ಅಲ್ಲ ಬದಲಾಗಿ ದಿನದ ಪಗಾರಕ್ಕೆ ನಟಿಸುತ್ತಿರುವ ಬೆಡಗಿ ಎಂದು 'ಸ್ವಯಂವರ'ದ ಎರಡನೆ ಎಪಿಸೋಡಿನಲ್ಲಿ ಭಾಗವಹಿಸಿದ್ದ ಐವರು ವರರಿಗೆ ಗೊತ್ತಾಗಲೇ ಇಲ್ಲ. ಇನ್ನು ನವ್ಯಾ ಕೊನೆಗೆ ಆಯ್ಕೆ ಮಾಡಿಕೊಂಡ ಅಮಾಯಕ ವರ ರಾಮಕೃಷ್ಣ ಎಂಬಾತನಿಗಂತೂ ಇದರ ಸುಳಿವು ಕೂಡ ಸಿಗದೆ 'ಈಕೆ ನನ್ನನ್ನು ಮದುವೆಯಾಗಲು ಒಪ್ಪಿರುವುದು ನಿಜ' ಎಂದೇ ನಂಬಿದ. ನಟಿಯೊಬ್ಬಳು ತನ್ನನ್ನು ಮದುವೆಯಾಗುತ್ತಿದ್ದಾಳೆ ಎಂದು ಖುಷಿಗೊಂಡ ರಾಮಕೃಷ್ಣನು 'ಆಹಾ ನನ್ ಮದ್ವೆಯಂತೆ, ನವ್ಯಾ-ನಾನು ಜೋಡಿಯಂತೆ ಡುಂಡುಂಡುಂ' ಅಂತ ಕುಣಿದುಕುಪ್ಪಳಿಸಿದ.

ಅಸಹ್ಯಗಳೇ ಆಕರ್ಷಣೆಯಾದಾಗ...

ಹಿಂದೆ ಅಪರಾಧಗಳನ್ನು ವೈಭವೀಕರಿಸುತ್ತಿದ್ದ 'ಕ್ರೈಂ ಸ್ಟೋರಿ' ಮತ್ತು 'ಕ್ರೈಂ ಡೈರಿ'ಗಳೆಂಬ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದ ಸಂದರ್ಭದಲ್ಲೂ ಹೀಗೇ ಆಗಿತ್ತು. ಅಂದು ಜನರೆಲ್ಲರು ಆ ಕಾರ್ಯಕ್ರಮಗಳ ವಿರುದ್ಧ ವಾಚಾಮಗೋಚರವಾಗಿ ಬೈಯುತ್ತಿದ್ದರು. "ಇವರಿಗೆ ಮಾಡೋ ಕೆಲ್ಸ ಇಲ್ಲ, ಊಟ ಮಾಡೋ ಹೊತ್ತಲಿ, ಮಲಗೋ ಟೈಮಲ್ಲಿ ಕೊಲೆ, ಸುಲಿಗೆ, ರಕ್ತಪಾತಗಳನ್ನು ತೋರಿಸಿ ಮನಸು ಹಾಳು ಮಾಡ್ತಾರೆ... ಛೀ ಇದೆಂಥಾ ಹೊಲಸು..." ಎಂದು ಜನ ಗೊಣಗುತ್ತಿದ್ದರು. ಆದರೆ ಯಾವ ಜನ ಹಾಗೆ ಗೊಣಗುತ್ತಿದ್ದರೋ ಅದೇ ಜನ ಆ ಕಾರ್ಯಕ್ರಮಗಳನ್ನು ಬಿಟ್ಟೂ ಬಿಡದೆ ನೋಡುತ್ತಿದ್ದರು!

ಈಗ 'ಸ್ವಯಂವರ'ದ ವಿಚಾರದಲ್ಲಿ ಆಗಿರುವುದೂ ಅದೇ... 'ಸ್ವಯಂವರ'ದ ಪ್ರೋಮೋಗಳು ಮತ್ತು ಅದರಲ್ಲಿ ರಕ್ಷಿತಾ ಭಾಗವಹಿಸುತ್ತಿರುವುದು - ಕಿರುತೆರೆ ವೀಕ್ಷಕರು ಅದರಲ್ಲೂ - ಮಹಿಳೆಯರನ್ನು ಹೆಚ್ಚು ಆಕರ್ಷಿಸಿತ್ತು. ಅಲ್ಲಿ ನಕಲಿ ವಧುಗಳನ್ನು ಕೂರಿಸಿಕೊಂಡು 'ಸ್ವಯಂವರ' ನಡೆಸುತ್ತಿದ್ದರೆ, ಈ ಪಾಪದ ಜನ ತಮ್ಮ ಮನೆಯ ಹೆಣ್ಣುಮಕ್ಕಳಿಗೇ ಮದುವೆ ನಿಶ್ಚಯವಾದಷ್ಟು ಸಂತಸಪಡುತ್ತಿದ್ದರು. ಹೀಗಾಗಿ ಕೇವಲ ಒಂದೇ ವಾರದಲ್ಲಿ ಈ ಕಾರ್ಯಕ್ರಮ ಅತಿಹೆಚ್ಚು ಟಿಆರ್‌ಪಿ ರೇಟಿಂಗ್‌ಅನ್ನು ಪಡೆಯಿತು. ಆರಂಭದಲ್ಲಿ 2.7 ಇದ್ದ ಟಿಆರ್‌ಪಿ ಕೊನೆಗೆ 6.5 ಗೆ ಏರಿತು. ಸುವರ್ಣಕ್ಕೆ ಇರುವ ಒಟ್ಟು ಮುನ್ನೂರು ಜಿಆರ್‌ಪಿ (ಗ್ರಾಸ್ ರೇಟಿಂಗ್ ಪಾಯಿಂಟ್)ಯಲ್ಲಿ 'ಸ್ವಯಂವರ'ಕ್ಕೆ 60 ರಿಂದ 70ರಷ್ಟು ರೇಟಿಂಗ್ ದೊರೆತಿತ್ತು.

ಈಗ ಈ ಕಾರ್ಯಕ್ರಮ ಬೋಗಸ್ ಎಂದು ಗೊತ್ತಾದರೂ, ವೀಕ್ಷಕರು ಅದನ್ನು ಬೈದಾಡಿಕೊಂಡೇ ನೋಡುವುದನ್ನು ಮುಂದುವರೆಸಿದ್ದಾರೆ...

ಅದಕ್ಕೇ ಹೇಳಿದ್ದು ಜನರ ಪಾಲಿಗೆ ಅಸಹ್ಯವೇ ಹೆಚ್ಚು ಆಕರ್ಷಣೆ ಎಂದು..!



ಎಪಿಸೋಡಿನ ಚಿತ್ರೀಕರಣ ಮುಗಿಯುತ್ತಿದ್ದಂತೇ ನವ್ಯಾಳ ಫೋನ್ ನಂಬರ್ ಕೂಡಾ ರಾಮಕೃಷ್ಣ ಪಡೆದ. ಆನಂತರ ಆ ನಂಬರಿಗೆ ಆತ ಎಷ್ಟೇ ಬಾರಿ ಕರೆ ಮಾಡಿದರೂ 'ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ' ಎಂದಷ್ಟೇ ಕೇಳಿಸುತ್ತಿತ್ತು! ಅಂದರೆ ರಾಮಕೃಷ್ಣನ ಪಾಲಿಗೆ ನವ್ಯಾ 'ಔಟ್ ಆಫ್ ರೇಂಜ್' ಆಗಿದ್ದಳು!

ಮಡಿಕೇರಿಯಲ್ಲಿ ಬೇಕರಿ ಇಟ್ಟುಕೊಂಡು, ಜೊತೆಯಲ್ಲಿ ಒಂದಿಷ್ಟು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡಿಕೊಂಡಿರುವ ಬೆಣ್ಣೆ ಮುರುಕು ರಾಮಕೃಷ್ಣ ಕಡೆಗೆ ತಮ್ಮ ಸ್ನೇಹಿತರ ಮುಖಾಂತರ ನವ್ಯಾಳ ತಾಯಿ ಸರಸ್ವತಿಯ ನಂಬರು ಪಡೆದು ಆಕೆಗೇ ಫೋನ್ ಮಾಡಿದ್ದಾರೆ. ಆದರೆ ಆ ಮಹಾತಾಯಿಯೋ "ಅಯ್ಯೋ ಹೋಗ್ರಿ, ನಮ್ಮ ಹುಡುಗಿ ನಿಮ್ಮನ್ನು ಮದುವೆಯಾಗೋ ಮಾತೇ ಇಲ್ಲ, ಏನೋ ದಿನಾ ಐದು ಸಾವಿರ ದುಡ್ಡು ಕೊಟ್ಟರು ಅಂತ ನಮ್ಮ ಹುಡುಗಿ ಹಾಗೆ ಆಕ್ಟ್ ಮಾಡಿದ್ಲು...' ಎಂದಿದ್ದಾಳೆ.

'ಒಂಭತ್ತು'ಗಳೂ ಕೈಕೊಟ್ಟರು!

ಇದನ್ನು ಕೇಳಿ ಬೇಸರ ಮತ್ತು ಆವೇಶಕ್ಕೆ ಒಳಗಾದ ರಾಮಕೃಷ್ಣ ಟೀವಿ ಒಂಭತ್ತು ಎಂಬ ಎಡಬಿಡಂಗಿ ಚಾನೆಲ್‌ಗೆ ಹೋಗಿ, 'ಸ್ವಯಂವರ'ದಲ್ಲಿ ತನಗಾದ ಅವಮಾನ ಮತ್ತು ನೋವುಗಳನ್ನೆಲ್ಲ ವಿವರವಾಗಿ ಹೇಳಿಕೊಂಡಿದ್ದಾನೆ. ಆ ಚಾನೆಲ್‌ಅನ್ನು ಆತ ಅದೆಷ್ಟೇ ಕಾಡಿ ಬೇಡಿದರೂ ಅವರು ಈ ವಿಚಾರವನ್ನು ಸುದ್ದಿಮಾಡಲೇ ಇಲ್ಲ, ಯಾಕೆಂದರೆ, ಅಷ್ಟೊತ್ತಿಗಾಗಲೇ ಟೀವಿ ಒಂಭತ್ತು ಮತ್ತು ಸುವರ್ಣ ವಾಹಿನಿಯ ನಡುವೆ ಸಣ್ಣದೊಂದು ಮ್ಯೂಚುಯಲ್ ಅಂಡರ್‌ಸ್ಟಾಂಡಿಂಗ್ ಕುದುರಿತ್ತು, ಇಬ್ಬರದ್ದೂ ನ್ಯೂಸ್ ಚಾನೆಲ್‌ಗಳಾಗಿರುವುದರಿಂದ ಒಬ್ಬರ ಮೇಲೆ ಒಬ್ಬರು ಪರಸ್ಪರ ಸುದ್ದಿ ಮಾಡಿಕೊಳ್ಳುವುದು ಬೇಡ ಎಂಬುದೇ ಅವರಿಬ್ಬರ ನಡುವಿನ ಕರಾರಾಗಿತ್ತು.

ಚಾನೆಲ್ ಒಂಭತ್ತರ ಮಂದಿ ಕೂಡ ಹೀಗೆ ತನಗೆ ಕೈಕೊಟ್ಟಾಗ ಮತ್ತಷ್ಟು ವ್ಯಾಕುಲಕ್ಕೊಳಗಾದ ರಾಮಕೃಷ್ಣ ಸಿಕ್ಕಸಿಕ್ಕ ಪತ್ರಿಕಾ ಕಚೇರಿಗಳಿಗೆಲ್ಲಾ ಫೋನ್ ಮಾಡಿ 'ಸ್ವಯಂವರ'ದ ವಿವರವನ್ನು ಹೇಳಿ, ಚಾನೆಲ್ ಮರ್ಯಾದೆಯನ್ನು ಬೀದಿಗೆ ಎಳೆಯುತ್ತಿದ್ದಾರೆ.

ರಾಮಕೃಷ್ಣ ಅದೆಷ್ಟು ಕೋಪಿಷ್ಠನಾಗಿದ್ದಾನೆಂದರೆ "ನನ್ನ ಮರ್ಯಾದೆ ಹೋದರೂ ಸರಿ, ನಾನು ಮಾತ್ರ ಸುವರ್ಣ ಚಾನೆಲ್‌ನವರನ್ನು ಸುಮ್ಮನೆ ಬಿಡೊಲ್ಲ. ಈ ಕಾರ್ಯಕ್ರಮ ಒಂದು ರೀತಿಯ ಡ್ರಾಮಾ ಅಂಥ ಮೊದಲೇ ಹೇಳಿದ್ದರೆ, ನಾನು ಕೂಡ ಹೋಗಿ ನಟಿಸಿಬರುತ್ತಿದ್ದೆ. ಆದರೆ ಮದುವೆ ಮಾಡಿಸುತ್ತೇವೆ ಎಂದು ಸುಳ್ಳು ಹೇಳಿ, ನನ್ನಂಥ ಹುಡುಗರನ್ನು ವಂಚಿಸಿರುವ ಸುವರ್ಣ ವಿರುದ್ಧ ನಾನು ಕೇಸು ಹಾಕ್ತೀನಿ...' ಎಂದೆಲ್ಲಾ ಗುಟುರು ಹಾಕುತ್ತಿದ್ದಾನೆ...

ಹೀಗೆ ರಾಮಕೃಷ್ಣ-ನವ್ಯಾರ 'ಸ್ವಯಂವರ' ಹಾದಿರಂಪ ಬೀದಿರಂಪವಾಗುತ್ತಿರುವಾಗಲೇ ಪ್ರಸಾರಗೊಂಡ 'ಸ್ವಯಂವರ'ದ ಮೂರನೇ ಎಪಿಸೋಡಾದರೂ ಹೇಗಿತ್ತು ಅಂದು ನೋಡಿದರೆ ಅದೂ ಗಬ್ಬುನಾರುತ್ತಿತ್ತು, ಆ ಎಪಿಸೋಡಿನಲ್ಲಿ ಪುಷ್ಪ ಎಂಬ ಹುಡುಗಿ ಬಂದು ಐದು ದಿನಗಳ ಕಾಲ ಟುಸ್ ಪುಸ್ ಎನ್ನುತ್ತಾ ಕೊನೆಗೆ ಒಬ್ಬ ಪೆದ್ದಾದೆ ಹುಡುಗನನ್ನು ಆಯ್ಕೆ ಮಾಡಿಕೊಂಡಳು. ಹಾಗೆ ಆಯ್ಕೆ ಮಾಡಿಕೊಂಡ ಮರುಕ್ಷಣವೇ "ನೀನು ನಿನ್ನ ಸ್ನೇಹಿತರ ಸಂಪರ್ಕವನ್ನೆಲ್ಲಾ ತೊರೆದು ಬರಬೇಕು" ಎಂಬ ಷರತ್ತನ್ನು ಆತನಿಗೆ ಹಾಕಿದಳು. ಆತ ಅದಕ್ಕೆ ಒಪ್ಪದಿದ್ದಾಗ "ನನಗೆ ನಿನ್ನ ಮದುವೆಯಾಗಲು ಇಷ್ಟ ಇಲ್ಲ, ನನಗೆ ಈ ಮೊದಲೇ ಬೇರೊಬ್ಬನೊಂದಿಗೆ ಅಫೇರು ಇತ್ತು..." ಎಂಬ ಬಾಂಬ್ ಸಿಡಿಸಿದು ಕಾರ್ಯಕ್ರಮದಿಂದ ಕಳಚಿಕೊಳ್ಳಲು ನೋಡಿದಳು.

ಕಡೆಗೆ ಗೊತ್ತಾದ ಅಸಲಿಯತ್ತೇನೆಂದರೆ, ಈಕೆಗೆ ಟೀವಿಯಲ್ಲಿ ಕಾಣಿಸಿಕೊಳ್ಳುವ ಆಸೆ ಇತ್ತು, ಹಾಗಾಗಿ 'ಸ್ವಯಂವರ'ದಲ್ಲಿ ವಧುವಾಗಿ ಬಂದು ಪುಕ್ಕಟೆ ಪ್ರಚಾರ ಪಡೆದುಕೊಂಡಳು. ಇದು ಕಾರ್ಯಕ್ರಮದ ಸೂತ್ರಧಾರಿಣಿ ಶ್ವೇತಾಳಿಗೆ ಗೊತ್ತಾದಾಗ ಆಕೆ "ಟೀವಿಯಲ್ಲಿ ಬರೋ ಆಸೆಯಿಂದ ಹೀಗೆಲ್ಲಾ ಮಾಡ್ಬೇಡ" ಎಂದು ಬೈದು, ಗೋಳೋ ಅಂತಾ ಅತ್ತು ಈಕೆಯನ್ನು ಓಡಿಸಿದಳು...

ಒಂದಂತೂ ನಿಜ. ನಮ್ಮ ಕನ್ನಡದ ಹುಡುಗಿಯರು ಇಂಥ ಕಳಪೆ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮಿಚ್ಛೆಯ ಹುಡುಗರನ್ನು ಆಯ್ಕೆಮಾಡಿಕೊಳ್ಳುವ ಚಾಲಾಕಿಗಳಾಗಲಿ, ಮರ್ಯಾದೆಗೆಟ್ಟವರಾಗಲಿ ಅಲ್ಲ, ಈ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುವ ಹುಡುಗಿಯರದ್ದು ರಂಗೀನ್ ದುನಿಯಾದಲ್ಲಿ ಮಿಂಚುವ ಬಯಕೆ. ಇನ್ನು ಛಾನೆಲ್‌ನವರಿಗೆ ಕಾರ್ಯಕ್ರಮ ಯಾವುದಾದರೇನು? ಯಾರ ಮಾನ ಹರಾಜಾದರೇನು? ಅವರಿಗೆ ಬೇಕಿರುವ ಟಿಆರ್‌ಪಿ ರೇಟಿಂಗ್ ಮತ್ತು ಅದರೊಂದಿಗೆ ಹರಿದುಬರುವ ಜಾಹೀರಾತುಗಳ ಹಣ ಇದ್ದರೆ ಸಾಕು...

ಆದರೆ ರಾಮಕೃಷ್ಣರಂತ ಬೆಣ್ಣೆ ಬಿಸ್ಕತ್‌ಗಳಿಗೆ ಇದೆಲ್ಲ ಅರ್ಥವಾಗುವುದು ಹೇಗೆ?

• ಅರುಣ್ ಕುಮಾರ್.ಜಿ
arunodayagc@gmail.com

ಬ್ಯಾಡಪ್ಪಾ ಈ ಹುಚ್ಚನ ಸಹವಾಸ...!

ಹುಚ್ಚು ಪ್ರಯೋಗಗಳಿಂದಲೇ ಉಪ್ಪಿ ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿದ್ದು. ಆದರೆ ಇತ್ತೀಚೆಗೆ ಉಪೇಂದ್ರ ಚಿತ್ರಗಳು ಒಂದರ ಹಿಂದೊಂದು ತೋಪಾಗಿವೆ. ಆದರೂ ಈತನನ್ನು ನಂಬಿರುವ ನಿರ್ಮಾಪಕರಾಗಲಿ, ಪ್ರೇಕ್ಷಕರಾಗಲಿ ಇವೆಲ್ಲವನ್ನೂ ಸಹಿಸಿದ್ದು ಕಾದಿದ್ದು ಯಾಕೆಂದರೆ ಇನ್ನು ಮುಂದಾದರೂ ಈತನಿಂದ ಒಳ್ಳೇ ಸಿನಿಮಾಗಳು ಬರಬಹುದು ಎಂಬ ಏಕೈಕ ಕಾರಣಕ್ಕೆ, ಈ ಹಿನ್ನೆಲೆಯಲ್ಲಿ ನೋಡಿದರೆ 'ಸೂಪರ್' ಚಿತ್ರ ಉಪೇಂದ್ರನ ಪಾಲಿಗೆ 'ಕೊನೇ ಪ್ರಯತ್ನ'.

ಹತ್ತು ವರ್ಷಗಳ ಹಿಂದೆ ಉಪೇಂದ್ರ ಸಿನಿಮಾಗಳನ್ನು ನಿರ್ದೇಶಿಸಿದಾಗ ಕನ್ನಡ ಚಿತ್ರರಂಗದ ಪರಿಸ್ಥಿತಿಯೇ ಬೇರೆಯಿತ್ತು, ಆದರೆ ಇವತ್ತಿನ ಪರಿಸ್ಥಿತಿಯೇ ಬೇರೆಯದ್ದಾಗಿದೆ. ಉಪ್ಪಿಗಿಂತಲೂ ಕ್ರಿಯಾಶೀಲವಾಗಿ ಚಿಂತಿಸುವ ಯೋಗರಾಜ್ ಭಟ್, ಸೂರಿ, ಗುರುಪ್ರಸಾದ್, ಶಶಾಂಕ್‌ರಂಥ ಹೊಸ ಪೀಳಿಗೆಯ ನಿರ್ದೇಶಕರು ಬಂದಿದ್ದಾರೆ.

ಒಂದು ದಶಕದ ಹಿಂದೆ ಯಾವ ಯೋಗರಾಜ್ ಭಟ್ ಉಪೇಂದ್ರನ ಬಳಿ ಅವಕಾಶಕ್ಕಾಗಿ ಅಲೆದಾಡುತ್ತಿದ್ದರೋ ಅದೇ ಭಟ್ಟರೀಗ ಉಪೇಂದ್ರನನ್ನೂ ಮೀರಿಸುವ ನಿರ್ದೇಶಕನಾಗಿ ಬೆಳೆದುನಿಂತಿದ್ದಾರೆ. ಪ್ರೇಮ್ ಎಂಬ ಹಳ್ಳಿ ಹೈದ ಉಪ್ಪಿಗಿಂತಲೂ ಹೆಚ್ಚು ಗಿಮಿಕ್‌ಗಳನ್ನು ಮಾಡಿ ಗಮನ ಸೆಳೆಯುತ್ತಿರುತ್ತಾನೆ.




ಇವರನ್ನೆಲ್ಲಾ ಹಿಂದಿಕ್ಕಿ, ಅವರಿಗಿಂತಲೂ ಹೊಸದಾದ ಟ್ರೆಂಡ್ ಹುಟ್ಟುಹಾಕುವುದು ಉಪ್ಪಿಯ ಸದ್ಯದ ಉತ್ಕಟ ಬಯಕೆ. ಆದರೆ ಉಪ್ಪಿ ತಲೆ ಕೆಳಗು ಮಾಡಿ ಕಾಲು ಮೇಲೆತ್ತಿದರೂ ಹಳೇ ಗಿಮಿಕ್ಕುಗಳನ್ನು ಬಿಟ್ಟರೆ ಬೇರೇನೂ ಆತನಿಗೆ ಹೊಳೆಯುತ್ತಿಲ್ಲವಂತೆ. ಹೀಗಾಗಿ ಜೊತೆಗಿರುವ ತಂತ್ರಜ್ಞರು ಎಷ್ಟೇ ಹೊಸತನ್ನು ಆಲೋಚಿಸಿ, ಕೆಲಸ ಮಾಡಿದರೂ ಉಪ್ಪಿಗೆ ಅದರಲ್ಲಿ ತೃಪ್ತಿಸಿಗುತ್ತಿಲ್ಲ. "ಈ ಹತ್ತು ವರ್ಷಗಳಲ್ಲಿ ಯಾರೂ ಮಾಡದ್ದನ್ನು ನಾನು ಮಾಡಬೇಕು" ಎಂಬ ಅತೀ ಹುಚ್ಚು ಉಪ್ಪಿಯ ತಲೆ ಹೊಕ್ಕಿದೆ. ತನ್ನ ಸಿನಿಮಾಕ್ಕಾಗಿ ಕೆಲಸ ಮಾಡುವ ತಂತ್ರಜ್ಞರಿಗೂ ಖಾಸಗೀ ಜೀವನವಿದೆ, ಪರ್ಸನಲ್ ಆದ ನೂರೆಂಟು ಕಮಿಟ್‌ಮೆಂಟುಗಳಿರುತ್ತವೆ ಎಂಬುದನ್ನೇ ಮರೆತ ಉಪ್ಪಿ ಎಲ್ಲರೂ ಹಗಲೂ ರಾತ್ರಿ ತನ್ನ ಜೊತೆಗೇ ಇರಬೇಕು ಎಂದು ಬಯಸುತ್ತಾರೆ. ಆದರೆ ಇದನ್ನು ಸಹಿಸಿಕೊಂಡು ಉಪ್ಪಿಯೊಂದಿಗೆ ಏಗುವುದು ಬಹಳಷ್ಟು ಜನರಿಗೆ ಅಸಾಧ್ಯವಾಗಿದೆ...

ಆದ್ದರಿಂದ 'ನೀನೂ ಬೇಡ, ನಿನ್ನ ಕೆಲಸವೂ ಬೇಡ, ನೀನು ಕೊಡುವ ಕಾಟವಂತೂ ಬೇಡವೇ ಬೇಡ' ಎಂದು ಎಲ್ಲರೂ ಅಡ್ಡಡ್ಡ ಬಿದ್ದು ಉದ್ದಂಡ ನಮಸ್ಕಾರ ಹಾಕಿ ಎಸ್ಕೇಪ್ ಆಗುತ್ತಿದ್ದಾರೆ.


ಹುಚ್ಚರೊಂದಿಗೆ ಹೆಣಗುವುದು ಎಂದರೆ ಇದೇ ಅಲ್ಲವೇ? •

ಉಪ್ಪಿಯ 'ಸೂಪರ್' ಹುಚ್ಚಾಟ!



ರಿಯಲ್ ಸ್ಟಾರ್ ಉಪೇಂದ್ರ ಹತ್ತು ವರ್ಷಗಳ ದೊಡ್ಡ ಗ್ಯಾಪ್ ನಂತರ ಮತ್ತೆ ಸಿನಿಮಾ ನಿರ್ದೇಶನಕ್ಕೆ ಇಳಿದಿರುವುದರಿಂದ, ಈಗ ಹಲವಾರು ಸೋಲುಗಳಿಂದ ಉಪ್ಪಿ ಕಂಗಾಲಾಗಿರುವುದರಿಂದ ಈ ಬಾರಿ ಅವರು ಏನೋ ಕಡಿದು ಕಟ್ಟೆ ಹಾಕುತ್ತಾರೆ... ಎಂಬೆಲ್ಲಾ ನಿರೀಕ್ಷೆಗಳಿದ್ದವು. ಆದರೆ ಈಗ ಉಪ್ಪಿಯ ಚಿತ್ರತಂಡದಲ್ಲಾಗಿರುವ ಬದಲಾವಣೆಗಳನ್ನು, ಎಸ್ಕೇಪ್ ಕೇಸ್‌ಗಳನ್ನು ನೋಡಿದರೆ 'ಸೂಪರ್'ನಲ್ಲಿ ಯಾವುದೂ ನೆಟ್ಟಗೆ ನಡೆಯುತ್ತಿರುವಂತೆ ಕಾಣುತ್ತಿಲ್ಲ

ಈಗ್ಗೆ ಎರಡೂವರೆ ತಿಂಗಳ ಹಿಂದಷ್ಟೇ ಉಪ್ಪಿ 'ಸೂಪರ್' ಎಂಬ ಚಿತ್ರವನ್ನು ಆರಂಭಿಸಿದರು. ಆದರೆ ಈ 45 ದಿನಗಳಲ್ಲೇ ಹತ್ತಕ್ಕೂ ಹೆಚ್ಚು ಮಂದಿ ತಂತ್ರಜ್ಞರು ಈ ಚಿತ್ರ ತಂಡದಿಂದ ಹೊರಬಂದಿದ್ದಾರೆ ಎಂದರೆ ಅಲ್ಲಿ ಇನ್ನೆಷ್ಟು ಅರಾಜಕತೆ ತಾಂಡವವಾಡುತ್ತಿದೆ ಎಂದು ಊಹಿಸಿ...



ವಿ.ಮನೋಹರ್



ಗುರುಕಿರಣ್



ಕಬೀರ್ ಲಾಲ್

ಮೊದಲು ಈ ಚಿತ್ರದ ಛಾಯಾಗ್ರಾಹಕರಾಗಿ ಸಂತೋಷ್ ರೈ ಪತಾಜೆ ಆಯ್ಕೆಯಾಗಿದ್ದರು. ಆದರೆ ಸಿನಿಮಾ ಆರಂಭವಾಗುವ ಹೊತ್ತಿಗೆ ಪತಾಜೆ ಜಾಗಕ್ಕೆ ಕಬೀರ್‌ಲಾಲ್ ಅವರನ್ನು ಕರೆತರಲಾಯಿತು. ಹಿಂದಿಯ ಹಲವಾರು ಸೂಪರ್ ಹಿಟ್ ಚಿತ್ರಗಳಿಗೆ ಛಾಯಾಗ್ರಾಹಕರಾಗಿರುವ ಕಬೀರ್ ಲಾಲ್‌ಗೂ, ಉಪೇಂದ್ರನಿಗೂ ಹೊಂದಾಣಿಕೆಯಾಗಲೇ ಇಲ್ಲ, ಹೀಗಾಗಿ ಪಿ.ಕೆ.ಎಚ್.ದಾಸ್‌ರನ್ನು ನೇಮಿಸಿಕೊಂಡಿದ್ದಾಯಿತು. ಆದರೆ ದಾಸ್ ಅವರ ವರ್ಕಿಂಗ್ ಸ್ಟೈಲ್ ಕೂಡಾ ಸರಿಹೊಂದದ ಕಾರಣ ಈಗ ಆ ಜಾಗಕ್ಕೆ ಮತ್ತೊಬ್ಬ ಛಾಯಾಗ್ರಾಹಕ ಅಶೋಕ್ ಕಶ್ಯಪ್ ಬಂದು ಕ್ಯಾಮೆರಾ ಹಿಡಿದು ಕುಂತಿದ್ದಾರೆ. ಅಂದರೆ ಕಾಶ್ಯಪ್ ಆ ಚಿತ್ರದ ನಾಲ್ಕನೇ ಕ್ಯಾಮರಾಮನ್.

ಇನ್ನು ಚಿತ್ರ ಆರಂಭವಾಗುವುದಕ್ಕೆ ಮುನ್ನವೇ ಉಪೇಂದ್ರನ ಜೊತೆಗೆ ಕಥೆ, ಚಿತ್ರಕತೆ, ಡಿಸ್ಕಷನ್ನುಗಳಲ್ಲಿ ಭಾಗವಹಿಸಿದ್ದ ವಿ.ಮನೋಹರ್ ಚಿತ್ರಕ್ಕೆ ಟ್ಯೂನ್‌ಗಳನ್ನು ಸಿದ್ಧಪಡಿಸಿದ್ದರು. ಆದರೆ ಉಪ್ಪಿಗೆ ಅನಂತ ಏನನ್ನಿಸಿತೋ? "ಮನೋಹರ್ ಅವರ ಟ್ಯೂನ್‌ಗಳು ಸರಿಬಂದಿಲ್ಲ, ಅವರಿಂದ ರೀರೆಕಾರ್ಡಿಂಗ್ ಮಾಡಿಸುತ್ತೇನೆ. ಸಿನಿಮಾದ ಹಾಡುಗಳಿಗೆ ಟ್ಯೂನ್ ನೀಡುವ ಜವಾಬ್ದಾರಿಯನ್ನು ಗುರುಕಿರಣ್ ನಿಭಾಯಿಸಲಿ.." ಎಂದರು ಉಪ್ಪಿ. ಹೀಗೆ ಮನೋಹರ್ ಜಾಗಕ್ಕೆ ಬಂದ ಗುರುವಿನೊಂದಿಗೂ ಅದೇನು ಭಿನ್ನಾಭಿಪ್ರಾಯ, ತಕರಾರುಗಳು ಏರ್ಪಟ್ಟವೋ.. ಈಗ ಗುರುಕಿರಣ್ ಬಿಟ್ಟುಹೋಗಿರುವ ಸ್ಥಾನದಲ್ಲಿ ವಿ. ಹರಿಕೃಷ್ಣರನ್ನು ತಂದು ಕೂರಿಸಲಾಗಿದೆ.

ಚಿತ್ರದಲ್ಲಿ ಬರುವ ಇನ್ಸ್‌ಪೆಕ್ಟರ್ ಪಾತ್ರವೊಂದಕ್ಕೆ, ನಟ ಪ್ರಕಾಶ್ ರೈ ಅವರ ಕಾಲ್‌ಶೀಟ್ ಕೇಳಿದ್ದರು ಉಪ್ಪಿ, ರೈ ಕೂಡಾ "ಮೇ ಇಪ್ಪತ್ತರ ನಂತರ ಡೇಟ್ಸ್ ಕೊಡ್ತೀನಿ" ಎಂದು ಹೇಳಿದ್ದರು. ಆದರೆ ರೈ ಡೇಟ್ಸ್ ಕೊಡುವವತನಕ ಕಾಯುವ ವ್ಯವಧಾನವಿಲ್ಲದ ಉಪ್ಪಿ ತಮಿಳು ನಟನೊಬ್ಬನನ್ನು ಕರೆತಂದು ಆ ಪಾತ್ರ ಮಾಡಿಸಿದ್ದಾರೆ.

ಇಷ್ಟೇ ಅಲ್ಲದೆ, ಆರಂಭದಲ್ಲಿ ಈ ಸಿನಿಮಾದ ಕೆಲಸಗಳಿಗಾಗಿ ನೇಮಕಗೊಂಡಿದ್ದ ಕಾಸ್ಟ್ಯೂಮ್ ಡಿಸೈನರ್ ಇಂಚರ, ಮೇಕಪ್‌ಮ್ಯಾನ್ ಭೋರ, ಪ್ರೊಡಕ್ಷನ್ ಕಂಟ್ರೋಲರ್ ಅನುರಾಧಾ, ಮಾರ್ಕೆಟಿಂಗ್ ವಿಭಾಗದ ಪ್ರಶಾಂತ್, ಕಲಾ ನಿರ್ದೇಶಕ ಹೊಸ್ಮನೆ ಮೂರ್ತಿ, ಡ್ರೈವರ್ ರಾಜು... ಮಾತ್ರವಲ್ಲದೆ, ಮೂರ್ಮೂರು ಜನ ಮ್ಯೂಸಿಕ್ ಡೈರೆಕ್ಟರುಗಳೂ, ನಾಲ್ಕುನಾಲ್ಕು ಜನ ಕ್ಯಾಮರಾಮನ್‌ಗಳೂ ಉಪ್ಪಿಯ ಸಹವಾಸ ಬಿಟ್ಟು ಗಾಯಬ್ ಆಗಿದ್ದಾರೆ.

ಇದಕ್ಕೆಲ್ಲಾ ಕಾರಣ ಬದಲಾಗದ ಉಪೇಂದ್ರರ ವರಸೆ. ಆತನೊಂದಿಗೆ ಕೆಲಸ ಮಾಡಿರುವವರ ಪ್ರಕಾರ ಈ ಬಾರಿ ಉಪ್ಪಿ ಯಾವುದೇ ಪ್ಲಾನ್, ತಯಾರಿಗಳಿಲ್ಲದೆ ಸಿನಿಮಾ ಪ್ರಾರಂಭಿಸಿದ್ದಾರಂತೆ. ಆ ಕಾರಣಕ್ಕಾಗಿ ಇದ್ದಕ್ಕಿದ್ದ ಹಾಗೆ ಬದಲಾಗುವ ಅವರ ಐಡಿಯಾಗಳು ಜೊತೆಗಿರುವವರಿಗೆ ಅಸಾಧ್ಯ ಕಿರಿಕಿರಿಯುಂಟುಮಾಡುತ್ತಿವೆಯಂತೆ. ಹಾಗೆಯೇ ಯಾವುದನ್ನು ಮಾಡಬೇಕು ಯಾವುದನ್ನು ಮಾಡಬಾರದು ಎಂದು ತೀರ್ಮಾನಿಸುವ ಕೆಪಾಸಿಟಿಯನ್ನೇ ಉಪ್ಪಿ ಕಳೆದುಕೊಂಡು ಗೊಂದಲಮಯವಾಗಿದ್ದಾರಂತೆ.

ಮೊದಲಾದರೆ, ಉಪ್ಪಿ ಸಿನಿಮಾ ಒಂದನ್ನು ಪ್ರಾರಂಭಿಸುವ ಮುನ್ನ ಆತನೊಂದಿಗೆ ಗೋಪಾಲ್, ಮುರಳಿ ಮೋಹನ್, ಲೋಕಿ, ರಾಜಾರಾಂ, ಡಾ. ನಾಗೇಶ್‌ರಂಥ ಸಹಾಯಕರ ಸಮರ್ಥ ತಂಡವಿತ್ತು, ಆದರೆ ಯಾವಾಗ ಉಪ್ಪಿ ಕೈಗೆ ದುಡ್ಡು ಸೇರಿತೋ ಅಂದಿನಿಂದ ತನ್ನ ತಂಡದಲ್ಲಿದ್ದವರನ್ನು ಸೈಡ್ ಲೈನು ಮಾಡಲು ಶುರು ಮಾಡಿದರು. ಆಗ ಒಬ್ಬೊಬ್ಬರಾಗಿ ಉಪ್ಪಿಯ ತಂಡವನ್ನು ತೊರೆದು ಬೇರೆಬೇರೆ ತಂಡಗಳನ್ನು ಸೇರಿಕೊಂಡರು. ತನ್ನೊಟ್ಟಿಗೆ ಸ್ನೇಹಮಯವಾಗಿ ವರ್ಷಗಟ್ಟಲೆ ದುಡಿದ ಅಸೋಸಿಯೇಟ್‌ಗಳಿಗೆ "ನನ್ನ ಮುಂದಿನ ಸಿನೆಮಾವನ್ನು ನೀನೇ ಡೈರೆಕ್ಟ್ ಮಾಡುವೆಯಂತೆ" ಎಂದು ಆಸೆ ಹುಟ್ಟಿಸುತ್ತಿದ್ದರು ಉಪ್ಪಿ, ತಮಗೆ ಛಾನ್ಸು ಈಗ ಸಿಗಬಹುದು, ಆಗ ಸಿಗಬಹುದು ಎಂದು ಕಾದ ಆತನ ತಂಡದ ಸದಸ್ಯರ ತಲೆಗೂದಲು ನೆರೆಯಲು ಶುರುವಾಯಿತೇ ಹೊರತು ನಿರ್ದೇಶಕರಾಗುವ ಬಯಕೆ ಯಾರಿಗೂ ಫಲಿಸಲೇ ಇಲ್ಲ....

ರಾಜಾರಾಂ, ಗೋಪಾಲ್‌ರಂಥ ಭಂಟರಿಗೆ ಉಪ್ಪಿ "ನಿಮ್ಮ ಬದುಕಿಗೆ ನಾನೇ ಭದ್ರತೆ ಒದಗಿಸಿಕೊಡುತ್ತೇನೆ..... ಯಾವತ್ತೂ ನಿಮ್ಮ ಕೈಬಿಡುವುದಿಲ್ಲ" ಎಂದು ಹೇಳುತ್ತಲೇ ಅವರಿಂದ ಹತ್ತನ್ನೆರಡು ವರ್ಷಗಳ ಕಾಲ ದುಡಿಸಿಕೊಂಡರು. ಆದರೆ ಉಪ್ಪಿ ಅವರಿಗೆ ಏನೂ ಸಹಾಯವನ್ನು ಮಾಡಿದಿಲ್ಲ, ಬದಲಾಗಿ ತನಗೆ ಮಾತ್ರ ಬಂಗಲೆ, ರೆಸಾರ್ಟುಗಳನ್ನು ಮಾಡಿಕೊಂಡರು ಎಂಬ ಅಸಮಾಧಾನ ರಾಜಾರಾಂ, ಗೋಪಾಲರದ್ದು.

ಈಗ ಉಪ್ಪಿಯೊಂದಿಗೆ ಉಳಿದಿರುವ ಒಬ್ಬನೇ ವ್ಯಕ್ತಿ ಪ್ರವೀಣ್ ನಾಯಕ್. ಹಿಂದೊಮ್ಮೆ ಇದೇ ಪ್ರವೀಣ್ ನಾಯಕ್ ಉಪ್ಪಿ ತಂಡದಿಂದ ಹೊರಬಂದು ಬಂಡಾಯವೆದ್ದು ಉಪ್ಪಿಯ 'ಎ' ಚಿತ್ರದ ವಿರುದ್ಧ 'ಝೂಡ್' ಎಂಬ ಸಿನಿಮಾವೊಂದನ್ನು ನಿರ್ದೇಶಿಸಿದ್ದ. ಆ ಚಿತ್ರದಲ್ಲಿ ಉಪೇಂದ್ರನ ಐಲುಪೈಲು, ತಿಕ್ಕಲುಗಳನ್ನೇ ಬಂಡವಾಳವಾಗಿಸಿಕೊಂಡಿದ್ದ ಪ್ರವೀಣ್‌ನಾಯಕ್ ಇವತ್ತು ಮತ್ತೆ ಉಪ್ಪಿಯ ತಂಡ ಸೇರಿದ್ದಾನೆ. ಈಗ ತನ್ನ ಹಳೇ ಸ್ನೇಹಿತರೆಲ್ಲಾ ದೂರವಾದ ಮೇಲೆ ಉಪ್ಪಿ ತನ್ನ ಈ ಹಳೇ ದುಶ್ಮನ್ ಪ್ರವೀಣ್ ನಾಯಕ್‌ನನ್ನು ಕರೆದು ಆತನನ್ನೇ 'ಸೂಪರ್' ಚಿತ್ರಕ್ಕೆ ತನ್ನ ಅಸೋಸಿಯೇಟ್ ಮಾಡಿಕೊಂಡಿದ್ದಾರೆ.

ಉಪೇಂದ್ರನ ಹುಚ್ಚಾಟಗಳು 'ಸೂಪರ್' ಚಿತ್ರದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್‌ಗೂ ಇರುಸು ಮುರುಸು ಉಂಟುಮಾಡಿದೆಯಂತೆ. ಮೊದಲೇ ರಾಕ್ ಮಹಾನ್ ಶಿಸ್ತಿನ ಮನುಷ್ಯ. ಹಿಂದೊಮ್ಮೆ ನಟಿ ಸೌಂದರ್ಯ ಚಿತ್ರೀಕರಣಕ್ಕೆ ಹಾಜರಾಗಲಿಲ್ಲ ಎಂಬ ಕಾರಣಕ್ಕೆ ಆಕೆಯ ಮನೆಮುಂದೆ ಧರಣಿ ಕೂತು ನ್ಯಾಯ ಪಡೆದಿದ್ದರು. ನಿರ್ದೇಶಕ ದಿನೇಶ್ ಬಾಬು ಸರಿಯಾಗಿ ಕಾರ್ಯ ನಿರ್ವಹಿಸಲಿಲ್ಲ ಎಂದು ಆತನ ವಿರುದ್ಧ ಚೇಂಬರ್‌ನಿಂದ ಒಂದು ವರ್ಷದ ಬಹಿಷ್ಕಾರ ಹಾಕಿಸಿದ್ದರು. ಇನ್ನೊಮ್ಮೆ ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿ ಟೈಮಿಗೆ ಸರಿಯಾಗಿ ಕೈಕೊಟ್ಟರು ಎಂದು ದೇಸಾಯಿಯಂಥ ದೇಸಾಯಿಯನ್ನೇ ಕೈಕಾಲು ಕಟ್ಟಿಸಿ ಕುರಿಯಂತೆ ಎತ್ತಾಕಿಕೊಂಡು ಬಂದು ಅವರಿಂದ ಕೆಲಸ ಮಾಡಿಸಿಕೊಂಡಿದ್ದರು. ಇಂಥ ರಾಕ್ 'ಸೂಪರ್' ಮುಗಿಯುವ ಹೊತ್ತಿಗೆ, ಉಪ್ಪಿಯ ತಿಕ್ಕಲುತನಗಳನ್ನು ತಡೆಯಲಾರದೆ ಉಪ್ಪಿಗೆ ಯಾವ ಗತಿ ಕಾಣಿಸುತ್ತಾರೋ ಗೊತ್ತಿಲ್ಲ.

• ಅರುಣ್.ಜಿ
arunodayagc@gmail.com



ಆಕೆಗಿರುವ ತಾಳ್ಮೆ....

ಉಪೇಂದ್ರನನ್ನು ಹತ್ತಿರದಿಂದ ಬಲ್ಲ, ಆತನ ಅಷ್ಟೂ ಹುಚ್ಚಾಟಗಳನ್ನು ನೋಡಿದವರೆಲ್ಲಾ ಹೇಳುವ ಮಾತೆಂದರೆ 'ಆತನ ಹೆಂಡತಿ ಪ್ರಿಯಾಂಕಾನೇ ಪರವಾಗಿಲ್ಲ....'

ಉಪೇಂದ್ರ ಪ್ರಿಯಾಂಕಾಳನ್ನು ಪ್ರೀತಿಸಿ ಮದುವೆಯಾದಾಗ 'ಈ ಸಂಬಂಧ ಹೆಚ್ಚು ದಿನ ನಿಲ್ಲೊಲ್ಲ' ಎಂದೇ ಬಹುತೇಕ ಗಾಂಧಿನಗರಿಗರು ಭವಿಷ್ಯ ನುಡಿದಿದ್ದರು. ಆದರೆ ಆ ಎಲ್ಲ ಭವಿಷ್ಯವಾಣಿಗಳನ್ನು, ಅಂದಾಜುಗಳನ್ನು ಅಕ್ಷರಶಃ ಸುಳ್ಳು ಮಾಡಿದರು ಪ್ರಿಯಾಂಕಾ. ಈ ಬೆಂಗಾಲಿ ಹೆಣ್ಣುಮಗಳು ಉಪೇಂದ್ರನ ತುಂಬು ಸಂಸಾರದೊಂದಿಗೆ ಇಂದು ಸಂತಸದ ಜೀವನ ನಡೆಸುತ್ತಿದ್ದಾರೆ. ಪತ್ರಕರ್ತರು ಮತ್ತು ನೆರೆಹೊರೆಯವರೊಂದಿಗೂ ಅಷ್ಟೇ. ಅವತ್ತು ಹೇಗಿದ್ದರೋ ಇಂದಿಗೂ ಅದೇ. ವಿಶ್ವಾಸವನ್ನು ಉಳಿಸಿಕೊಂಡುಬಂದಿದ್ದಾರೆ ಪ್ರಿಯಾಂಕಾ. ಎದುರಿಗೆ ಸಿಕ್ಕವರನ್ನು ನಗುನಗುತ್ತಾ ಬಾಯ್ತುಂಬಾ ಮಾತಾಡಿಸಿ ಎಲ್ಲರ ಪ್ರೀತಿಗೆ ಪಾತ್ರಳಾಗಿದ್ದಾರೆ. ಈಕೆ ಮಾತಾಡುವ ಕನ್ನಡವೂ ಅಷ್ಟೇ. ಆರಂಭದಲ್ಲಿ ಈಕೆಗೆ ಕನ್ನಡದ ಗಂಧಗಾಳಿಯೂ ಗೊತ್ತಿರಲಿಲ್ಲ, ಆದರೀಗ ಇಲ್ಲೇ ಹುಟ್ಟಿ ಬೆಳೆದವರಿಗಿಂತಲೂ ಹೆಚ್ಚು ಕನ್ನಡ ಭಾಷೆಯನ್ನು ಪ್ರೀತಿಸುವ ಪ್ರಿಯಾಂಕಾ ತನ್ನಿಬ್ಬರು ಮಕ್ಕಳೊಟ್ಟಿಗೂ ಅಚ್ಚುಕಟ್ಟಾಗಿ ಕನ್ನಡದಲ್ಲೇ ಮಾತಾಡುತ್ತಾರೆ. ಆದರೆ ಉಪೇಂದ್ರನದ್ದೇ ಸಮಸ್ಯೆ. ಯಾವಾಗ, ಯಾರೊಂದಿಗೆ ಈತ ಹೇಗೆ ವರ್ತಿಸುತ್ತಾರೆ ಅನ್ನೋದನ್ನು ಯಾರಿಂದಲೂ ಅಂದಾಜಿಸಲು ಸಾಧ್ಯವಿಲ್ಲ....



ರೌಡಿ ಶಾಸಕ ತಗಡು ಶಿವಣ್ಣನ ಜಾತಕ

10 ಕೋಟಿಯ ಬಂಗಲೆ-ಗೂಂಡಾ ಗ್ಯಾಂಗು ಲೋಕಾಯುಕ್ತ ತನಿಖೆ- ಪತ್ರಕರ್ತನ ಕೊಲೆ ಯತ್ನ

• ಪಾರ್ವತೀಶ
bparvateesha@gmail.com

ಇದು ತುಮಕೂರಿನ ಬಿಜೆಪಿ ಶಾಸಕ ಶಿವಣ್ಣನ ಹೀನ ಚರಿತ್ರೆ. ಬಿಜೆಪಿಗಳ ನಿತ್ಯರೋಗ. ಮೈತ್ರಾದೇವಿ, ಪದ್ಮಪ್ರಿಯರ ಹತ್ಯೆಗಳು, ನರ್ಸ್ ಜಯಲಕ್ಷ್ಮಿ, ಚಂದ್ರಾವತಿಯರ ಮೇಲೆ ಮಾಡಿರುವ ಲೈಂಗಿಕ ದೌರ್ಜನ್ಯಗಳು, ಬಳ್ಳಾರಿ ರೆಡ್ಡಿಗಳ ಗೂಂಡಾಗಿರಿ ಹಾಗೂ ಹಗಲು ದರೋಡೆಗಳ ಸೂಟ್ ಆಗುವಂತಹ, ಬಿಜೆಪಿಗಳ ಯೋಗತ್ಯೆಗೆ ತಕ್ಕ ಹೊಸ ಘಟನೆ.

ಈಗ ನಾಲ್ಕನೆ ಬಾರಿಗೆ ತುಮಕೂರಿನ ಶಾಸಕನಾಗಿರುವ ಶಿವಣ್ಣ ಒಂದು ಕಾಲದಲ್ಲಿ ಅವರೇ ಮಾರಿಕೊಂಡಿದ್ದ ಶಾಸಕನಾದ ಮೇಲೆ ಜನ ಸೇವೆ ಮಾಡಿ ಮಾಡಿ ಅದೆಷ್ಟು ಬಲಿತು ಹೋಗಿದ್ದಾನೆಂದರೆ ತುಮಕೂರಿನ ಹೊರವಲಯದಲ್ಲಿ ಅವನೀಗ ಕಟ್ಟಿಸುತ್ತಿರುವ ಬಂಗಲೆ ಮತ್ತದರ ಸುತ್ತಲಿನ ತೋಟ ಕನಿಷ್ಠ ಹತ್ತು ಕೋಟಿ ರೂಪಾಯಿ ಬಾಳುತ್ತಿದೆ. ತುಮಕೂರಿನ ಜನರನ್ನು, ಸರ್ಕಾರಿ ಅಧಿಕಾರಿಗಳನ್ನು ಬೆದರಿಸುತ್ತಾ ಕಂಟ್ರೋಲಿನಲ್ಲಿಟ್ಟುಕೊಳ್ಳಲು ಒಂದು ದಾಂಢಿಗ ಗೂಂಡಾ ಗ್ಯಾಂಗನ್ನೇ ಶಿವಣ್ಣ ಸಾಕಿಕೊಂಡಿದ್ದಾನೆ.



ಶಿವಣ್ಣನ ಹೆಂಡತಿ ನಾಗರತ್ನ

ಬಹಳ ಮುಖ್ಯವಾಗಿ ಚುನಾವಣಾ ಆಯೋಗಕ್ಕೆ ಹಾಗೂ ಲೋಕಾಯುಕ್ತರಿಗೆ ನೀಡಿರುವ ಆಸ್ತಿ ಘೋಷಣಾ ಪತ್ರದಲ್ಲಿ ಶಿವಣ್ಣ ಅನೇಕ ಸುಳ್ಳು ಮಾಹಿತಿ ನೀಡಿರುವುದು ಗೊತ್ತಾಗಿದ್ದು ಈಗ ತನಿಖೆ ಚಾಲೂ ಆಗಿದೆ.

ಈ ಸುಳ್ಳು ಮಾಹಿತಿಗಳ ಬಗ್ಗೆ ಲೋಕಾಯುಕ್ತರಿಗೆ ದಾಖಲೆ ಸಹಿತ ದೂರು ನೀಡಿರುವುದು ಬ್ರಹ್ಮಾನಂದ ರೆಡ್ಡಿ. ತುಮಕೂರಿನ ಲಾಯರ್ ಹಾಗೂ ಪತ್ರಕರ್ತರಾಗಿರುವ ಬ್ರಹ್ಮಾನಂದ ರೆಡ್ಡಿ ಯಾವಾಗ ಶಿವಣ್ಣನ ಭ್ರಷ್ಟಾಚಾರ, ಅಕ್ರಮ ಆಸ್ತಿ ಹಾಗೂ ಗೂಂಡಾಗಿರಿಯ ವಿರುದ್ಧ ಹೋರಾಟಕ್ಕೆ ನಿಂತರೋ ಅವತ್ತಿನಿಂದಲೇ ಶಿವಣ್ಣ ಸಿಟ್ಟಿಗೆದ್ದಿದ್ದ.

ಆ ಸಿಟ್ಟು ಈಗ ಬ್ರಹ್ಮಾನಂದ ರೆಡ್ಡಿಯ ಅಪಹರಣ ಹಾಗೂ ಕೊಲೆ ಪ್ರಯತ್ನದವರೆಗೂ ಹೋಗಿದೆ. ಅಕಸ್ಮಾತ್ತಾಗಿ ಸಾವಿನಿಂದ ಪಾರಾಗಿ ಬಂದಿರುವ ಬ್ರಹ್ಮಾನಂದ ರೆಡ್ಡಿಯನ್ನು ಮುಗಿಸಿ ಬಿಡಲು ಶಾಸಕ ಶಿವಣ್ಣ, ಮತ್ತವನ ಗೂಂಡಾ ಗ್ಯಾಂಗ್ ಜೊತೆಗೆ ಈಗ ತುಮಕೂರು ಪೊಲೀಸರೂ ಶಾಮೀಲಾಗಿದ್ದಾರೆ. ತುಮಕೂರಿನ ಸರ್ಕಲ್ ಇನ್ಸ್‌ಪೆಕ್ಟರ್ ಗೌತಮ್ ಎಂಬುವನು ರೌಡಿಗಳನ್ನು ಮೀರಿಸುವಂತೆ ಶಿವಣ್ಣನ ಬೆಂಗಾವಲು ಭಂಟನಂತೆ ದೌರ್ಜನ್ಯ ನಡೆಸುತ್ತಿದ್ದಾನೆ.



ಬ್ರಹ್ಮಾನಂದ ಕಿಡ್‌ನ್ಯಾಪ್-ಕೊಲೆ ಯತ್ನ

ಸೊಗಡು ಶಿವಣ್ಣ ಅಲಿಯಾಸ್ ತಗಡು ಶಿವಣ್ಣ ಯಾವ್ಯಾವ ಕಳ್ಳದಾರಿಯಲ್ಲಿ ದುಡ್ಡು ಮಾಡುತ್ತಿದ್ದಾನೆ. ಯಾರ್ಯಾರಿಗೆ ತಪ್ಪು ಲೆಕ್ಕ ಕೊಟ್ಟಿದ್ದಾನೆ, ಎಲ್ಲೆಲ್ಲಿ ಅಕ್ರಮ ಆಸ್ತಿ ಮಾಡಿದ್ದಾನೆಂದು ಈ ಬ್ರಹ್ಮಾನಂದ ರೆಡ್ಡಿ ಪತ್ತೆ ಹಚ್ಚುತ್ತಿದ್ದರು. ಹೀಗೆ ಅನೇಕ ದಾಖಲೆ ಸಂಗ್ರಹಿಸಿ ಲೋಕಾಯುಕ್ತರಿಗೆ 2009ರ ಡಿಸೆಂಬರ್ ಹನ್ನೊಂದರಂದು ಶಾಸಕ ಸೊಗಡು ಶಿವಣ್ಣನ ವಿರುದ್ಧ ಅಧಿಕೃತವಾಗಿ ದೂರು ನೀಡಿದ್ದರು. ದೂರು ಪಡೆದ ಲೋಕಾಯುಕ್ತರು ಶಿವಣ್ಣನಿಗೆ ನೋಟೀಸ್ ಜಾರಿ ಮಾಡಿದ್ದರು. ಇದರಿಂದ ಗಾಬರಿಯಾದ ಶಿವಣ್ಣ ಅನೇಕ ರೀತಿಯಲ್ಲಿ ಬ್ರಹ್ಮಾನಂದರನ್ನು ಬಗ್ಗಿಸಲು ನೋಡಿದ. ಬೇಡಿಕೆ, ಆಮಿಷ ಇದ್ಯಾವುದೂ ನಡೆಯದಿದ್ದಾಗ ಕೊನೆಗೆ ನೇರವಾಗಿ ಬೆದರಿಕೆ ಹಾಕಲು ಶುರು ಮಾಡಿದ್ದ. ಅಪಾಯದ ಅರಿವಾದ ಬ್ರಹ್ಮಾನಂದ ರೆಡ್ಡಿ ತನಗೆ ರಕ್ಷಣೆ ನೀಡುವಂತೆ ತುಮಕೂರು ಎಸ್‌ಪಿ ಹರ್ಷರಿಂದ ಹಿಡಿದು ರಾಜ್ಯಪಾಲರವರೆಗೂ ಪತ್ರ ಬರೆದರು. ಗವರ್ನರ್ ಕಚೇರಿಯಿಂದ ಈ ಬಗ್ಗೆ ತುಮಕೂರು ಪೊಲೀಸರಿಗೆ ನಿರ್ದೇಶನವೂ ಹೋಯಿತು. ಆದರೆ ಎಸ್‌ಪಿ ಹರ್ಷ, ಡಿವೈಎಸ್‌ಪಿ ಜಗದೀಶ್‌ಗೆ ಶಿವಣ್ಣನ ಮನೆ ಕಾವಲು ನಿಲ್ಲುವ ಚಾಳಿ, ಕಾನೂನುಪಾಲನೆ ಅವರಿಗೆ ಬೇಕಿರಲಿಲ್ಲ. ಹಾಗಾಗಿ ಶಿವಣ್ಣ ಮೊನ್ನೆ ಏಪ್ರಿಲ್ 26 ರಂದು ನೇರ ಫೀಲ್ಡಿಗಿಳಿದಿದ್ದಾನೆ.


ಅವತ್ತು ಜಿಲ್ಲಾಧಿಕಾರಿ ಆಫೀಸಿಗೆ ಹೋಗಿದ್ದ ಬ್ರಹ್ಮಾನಂದ ತಮಗೆ ಬೇಕಿದ್ದ ಕೆಲ ಮಾಹಿತಿ ಹಾಗೂ ದಾಖಲೆಗಾಗಿ ಓಡಾಡುತ್ತಿದ್ದಾಗಲೇ ಶಿವಣ್ಣನ ಗೂಂಡಾ ಗ್ಯಾಂಗ್ ದಾಳಿ ಮಾಡಿದೆ. ಟಿ.ಕೆ. ನರಸಿಂಹಮೂರ್ತಿ, ಅನಂತ, ಗಂಗಾ, ಮಹೇಂದ್ರ ಮುಂತಾದ ಶಿವಣ್ಣನ ಚೇಲಾಗಳು ಎಲ್ಲರೆದುರೇ ಬ್ರಹ್ಮಾನಂದ ಜೊತೆ ಕಾಲು ಕೆರೆದು ಜಗಳ ಶುರು ಮಾಡಿ, ಹೊಡೆದು ಒಂದು ವ್ಯಾನಿಗೆ ಹಾಕಿಕೊಂಡಿದ್ದಾರೆ. ತುಮಕೂರಿನ ಹೊರವಲಯದ ಕೋತಿ ತೋಪಿನ ಸ್ಮಶಾನದ ಹತ್ತಿರ ವ್ಯಾನ್ ನಿಂತಾಗ ಬ್ರಹ್ಮಾನಂದನಿಗೆ ದಿಗ್ಭ್ರಮೆ!

ಅಲ್ಲಿ ಸಾಕ್ಷಾತ್ ಶಿವಣ್ಣನೇ ಇದ್ದ. ಜೊತೆಗೆ ಅವನ ತಮ್ಮ ನಾಗೇಶ್ ಮತ್ತಿತರರಿದ್ದರು. ಅಲ್ಲಿ ಬ್ರಹ್ಮಾನಂದರಿಗೆ ಹಾಕಿ ಸ್ಟಿಕ್, ವಿಕೆಟ್‌ಗಳಿಂದ ಮನಸೋ ಇಚ್ಛೆ ಹೊಡೆದಿದ್ದಾರೆ. ಏಟು ತಾಳದೆ ಬ್ರಹ್ಮಾನಂದ ಪ್ರಜ್ಞೆ ತಪ್ಪಿದಾಗ ಸತ್ತನೆಂದು ಭಾವಿಸಿ ದಾಳಿಕೋರರು ಜಾಗ ಖಾಲಿ ಮಾಡಿದ್ದಾರೆ. ಆದರೆ ಪವಾಡವೆಂಬಂತೆ ಬ್ರಹ್ಮಾನಂದ ಬದುಕಿದ್ದರು.

ಶಿವಣ್ಣನ ಗೂಂಡಾ ಗ್ಯಾಂಗ್



ಒನಿಡಾ ನಟರಾಜು



ನಾಗಣ್ಣ

ಶಿವಣ್ಣ ಲಾಗಾಯ್ತಿನಿಂದಲೂ ರೌಡಿತನದ ನಂಟು ಹೊಂದಿದ್ದವನೆ. ಶಾಸಕನಾದ ಮೇಲಂತೂ ಇದೇ ತೋಳ್ಬಲ ಬಳಸಿ ಅದರ ಮೂಲಕ ಹಣಬಲ ಜಾಸ್ತಿ ಮಾಡಿಕೊಂಡು ಅದನ್ನೇ ಆಧರಿಸಿ ಜನಬಲ ಪಡೆದು ಕೊನೆಗೀಗ ರಾಕ್ಷಸನಾಗಿ ಹೋಗಿದ್ದಾನೆ.

ಇವನ ಗ್ಯಾಂಗ್‌ನಲ್ಲಿ ಸಮ್ಮಿಶ್ರ ತಳಿಯ ಜನರಿದ್ದಾರೆ. ಕಂಟ್ರಾಕ್ಟರುಗಳು, ಸರ್ಕಾರಿ ಅಧಿಕಾರಿಗಳು, ಪಾರ್ಟಿಯ ಭ್ರಷ್ಟ ಲೀಡರ್‌ಗಳು ಹಾಗೂ ಪೊಲೀಸರ ಕಾಂಬಿನೇಷನ್ ಇದು. ಹೆಬ್ಬಾಕ ರವಿ, ಒನಿಡಾ ನಟ ಅಲಿಯಾಸ್ ನಟರಾಜ್, 'ಆಪ್' ನಂದೀಶ್ ಮುಂತಾದವರದ್ದು ಕಂಟ್ರಾಕ್ಟಗಿರಿ, ಹಫ್ತಾ ವಸೂಲಿ, ಜಗಳ ಹೊಡೆದಾಟಗಳ ಗುಂಪು. ಶಿವಣ್ಣನ ಹೆಂಡತಿ ನಾಗರತ್ನರ ತಮ್ಮ ಬಿ.ಎಸ್. ನಾಗೇಶ್ ಇವರಿಗೆಲ್ಲಾ ಇಮ್ಮಡಿಯಟ್ ಬಾಸ್. ಇನ್ನು ಚೇತನ್ ಹಾಗೂ ದತ್ತ ಎಂಬ ಖದೀಮರು ಶಿವಣ್ಣನ ಅಕ್ರಮ-ಸಕ್ರಮ ಹಣಕಾಸಿನ ದಂಧೆ ಮ್ಯಾನೇಜ್ ಮಾಡುತ್ತಿರುತ್ತಾರೆ. ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಣ್ಣಮುದ್ದಯ್ಯ ಎಂಬುವನಂತೂ ತಾನೊಬ್ಬ ಸರ್ಕಾರಿ ನೌಕರ ಎಂಬುದನ್ನೇ ಮರೆತು ಶಿವಣ್ಣನ ಚೇಲಾಗಿರಿ ಮಾಡುತ್ತಿದ್ದಾನೆ. ಅಧಿಕಾರಿಗಳನ್ನು ಪಳಗಿಸಿ ಶಿವಣ್ಣನಿಗೆ ಹಫ್ತಾ ಕೊಡಿಸುವುದು, ವರ್ಗಾ ದಂಧೆ, ಸರ್ಕಾರಿ ಜಾಗ ಹುಡುಕಿ ಗುಳುಂ ಮಾಡುವ ದಾರಿ ಹುಡುಕಿ ಶಿವಣ್ಣನಿಗೆ ಹೇಳುವುದು ಇವೇ ಈ ನೀಚನ ನಿತ್ಯಕಾಯಕ.



ಹೆಬ್ಬಾಕ ರವಿ



ಸಣ್ಣಮುದ್ದಯ್ಯ

...ತ ರಕ್ತಸ್ರಾವದಿಂದ ...ಗೊಂಡಿದ್ದರೂ, ಒಬ್ಬರೆ ...ಕಿ.ಮೀ. ನಡೆದು ...ರೋಡಿಗೆ ಬಂದು ಆಟೋ ...ಸ್ತ್ಯಾಂದ್ರ ತಲುಪಿ ಅಲ್ಲಿಂದ ...ಂಡಿದು ಬೆಂಗಳೂರಿನ ಕೆ.ಸಿ. ...ಲ್ ಆಸ್ಪತ್ರೆಗೆ ಸೇರಿಕೊಂಡಿದ್ದಾರೆ. ...ಮೆಡಿಕೊ ಲೀಗಲ್ ಕೇಸಾದ ...ಮಲ್ಲೇಶ್ವರ ಪೊಲೀಸರು ...ಹೋಗಿದ್ದಾರೆ. ಹಲ್ಲೆಕೋರರು, ...ನಂದರ KA 35 L 6982 ...ನ ಬೈಕ್, ಬ್ಯಾಗು, ...ಳು ಸಾವಿರ ರೂಪಾಯಿ ಹಣ, 9844483376 ...ನೆ ಮೊಬೈಲ್ ಎಲ್ಲಾ ...ಂಡು ಹೋಗಿದ್ದರು. ಈ ...ಎಂತಾ ಕ್ರಿಮಿನಲ್ ...ರುವನೆಂದರೆ ಒಂದು ಕಡೆ ...ಗೂಂಡಾಗಳನ್ನು ಛೂಬಿಟ್ಟು ...ನಂದನ ಮೇಲೆ ಹಲ್ಲೆ ...ಸಿದ ನಂತರ ದಲಿತ ಚೇಲಾ ...ನ್ನು ಪೊಲೀಸರ ಹತ್ತಿರ ...ಪಿ ಬ್ರಹ್ಮಾನಂದ ವಿರುದ್ಧವೇ ...ಟಿ ದೂರು ಕೊಡಿಸಿಬಿಟ್ಟ. ...ಟು ತಿಂದ ಬ್ರಹ್ಮಾನಂದರ ...ಜನರಲ್ ಆಸ್ಪತ್ರೆಯಲ್ಲಿ ...ದ್ದಾಗಲೇ ಸರ್ಕಲ್ ಇನ್ಸ್‌ಪೆಕ್ಟರ್ ಗೌತಮ್‌ನ ...ಸ್ ಗ್ಯಾಂಗ್ ಒಂದು ಬ್ರಹ್ಮಾನಂದರನ್ನೇ ...ಮಾಡಿ ತುಮಕೂರಿಗೆ ಎಳೆದೊಯ್ದಿದ್ದಾರೆ.


ಡಿವೈಎಸ್ಪಿ ಜಗದೀಶ


ಎಸ್ಪಿ ಹರ್ಷ

ಆತ ಗಾಯಗೊಂಡಿರುವುದನ್ನು ಕೇರ್ ಮಾಡದೆ ಅಶೋಕ ನಗರದ ಮನೆಗೆ ನುಗ್ಗಿ ಟೆರರಿಸ್ಟರ ಡೆನ್‌ನಂತೆ ತಲಾಷ್ ನಡೆಸಿ ಕೈಗೆ ಸಿಕ್ಕ ಡಾಕುಮೆಂಟ್‌ಗಳನ್ನೆಲ್ಲಾ ಎತ್ತೊಯ್ದಿದ್ದಾರೆ. ಕೊನೆಗೆ ಬ್ರಹ್ಮಾನಂದನಿಗೆ ಜಾಮೀನು ಸಿಗದಂತೆ, ಸೆಲ್‌ನಲ್ಲೇ ಕೊಳೆಯುವಂತೆ ಪೊಲೀಸರು ನೋಡಿಕೊಂಡಿದ್ದಾರೆ.

ಈಗ ಬ್ರಹ್ಮಾನಂದ ತನ್ನ ಕಿಡ್‌ನ್ಯಾಪ್ ಹಾಗೂ ಕೊಲೆ ಯತ್ನದ ಬಗ್ಗೆ ತುಮಕೂರಿನ ನ್ಯೂ ಎಕ್ಸ್‌ಟೆನ್ಷನ್ ಪೊಲೀಸರಿಗೆ ಕಂಪ್ಲೇಂಟು ಕೊಟ್ಟು, ಶಿವಣ್ಣ ಸೇರಿದಂತೆ ಇಡೀ ಗೂಂಡಾ ಗ್ಯಾಂಗ್ ಬಗ್ಗೆ ವಿವರ ಕೊಟ್ಟಿದ್ದಾರೆ. ಆದರೇನು ಇನ್ಸ್‌ಪೆಕ್ಟರ್ ಗೌತಂ, ಡಿವೈಎಸ್‌ಪಿ ಜಗದೀಶ್, ಎಸ್‌ಪಿ ಹರ್ಷ ಕೇರ್ ಮಾಡುತ್ತಿಲ್ಲ.

ಇಂತವರಿಂದ ಪೊಲೀಸ್ ಇಲಾಖೆಗೆ ಅವಮರ್ಯಾದೆ ಆಗುತ್ತಿದೆ.

ಸೊಗಡು ಶಿವಣ್ಣ ತಗಡು ಶಿವಣ್ಣ ಆದದ್ದು

ಈ ಶಿವಣ್ಣ ಈ ಪರಿ ರಾಕ್ಷಸನಾಗಲು ಬಿಜೆಪಿಗಳ ಬೆಂಬಲ ಎಷ್ಟು ಕಾರಣವೋ ಕಾಂಗೈಗಳ ದುಷ್ಟತನವೂ ಅಷ್ಟೇ ಕಾರಣವಾಗಿದೆ. ಇಲ್ಲಿಂದ ಗೆದ್ದುಬರುತ್ತಿದ್ದ ಕಾಂಗ್ರೆಸ್‌ನ ಶಫಿ ಅಹಮದ್‌ನ ಬೇಜವಾಬ್ದಾರಿತನ ಹಾಗೂ ಆತನ ಸುತ್ತಾ ಬೆಳೆದ ಪುಂಡರ ಗುಂಪು ತುಮಕೂರಿನ ಜನರಲ್ಲಿ ಅಸಹನೆ ಮೂಡಿಸಿತ್ತು, ಇದನ್ನು ಸಕಾಲದಲ್ಲಿ ಅರ್ಥಮಾಡಿಕೊಂಡ ಜಾಣ ಚೆಡ್ಡಿಗಳು ಬೀದಿ ಪುಂಡನಂತಿದ್ದ ಶಿವಣ್ಣನಿಗೆ ಉತ್ತೇಜನ ನೀಡಿ ಶಫಿ ವಿರುದ್ಧ ಬೆಳೆಸಿದರು. ನಂತರ ಶಿವಣ್ಣ ಬಿಜೆಪಿ ಶಾಸಕನೂ ಆದ. ಇದಾಗಿ ಹತ್ತು ವರ್ಷಗಳಾಗುತ್ತಿದೆ. ಆಗ ಕೈಲಿ ಏನೂ ಇರದೆ ಬರಿಗೈ ದಾಸನಾಗಿದ್ದ ಶಿವಣ್ಣ ಇವತ್ತು ಅನಾಮತ್ತು ಇಪ್ಪತ್ತೈದು ಕೋಟಿ ರೂಪಾಯಿಗೂ ಜಾಸ್ತಿ ತೂಗುತ್ತಿದ್ದಾನೆ. ಮನೆ, ಬಂಗಲೆ, ತೋಟ, ಪೆಟ್ರೋಲ್ ಬಂಕ್, ಇಟ್ಟಿಗೆ ಫ್ಯಾಕ್ಟರಿ, ಕಾರುಗಳು ಹೀಗೆ ಕಣ್ಣಿಗೆ ಕಾಣಿಸುವ ಆಸ್ತಿಯೇ ಇಷ್ಟಿದೆ. ಇನ್ನು ಬೇನಾಮಿ ಆಸ್ತಿಯ ಲೆಕ್ಕ ಯಾರಿಗೆ ತಾನೆ ತಿಳಿದೀತು ಹೇಳಿ? ತುಮಕೂರು ನಗರಪಾಲಿಕೆಯ ಕಮೀಷನರ್ ಆದರ್ಶಗೌಡನೂ ಶಿವಣ್ಣನೆಂಬ ಇವರಿಬ್ಬರೂ ಸೇರಿ ಊರಿನ ಸರ್ಕಾರಿ ಆಸ್ತಿಗೇ ಬೇಲಿ ಸುತ್ತುವ ದಣಾಯಿತರಾಗಿ ಹೋಗಿದ್ದಾರೆ.


ಬ್ರಹ್ಮಾನಂದ


ಪಾಲಿಕೆ ಆಯುಕ್ತ ಆದರ್ಶಕುಮಾರ್

ಇಂತಹದನ್ನೆಲ್ಲಾ ಕೇಳಿದರೆ, ಪ್ರಶ್ನಿಸಿದರೆ ಶಿವಣ್ಣನಿಗೆ ನಖಶಿಖಾಂತ ಕೋಪ.

ಬ್ರಹ್ಮಾನಂದರ ಕಿಡ್‌ನ್ಯಾಪ್ ಹಾಗೂ ಕೊಲೆ ಯತ್ನಕ್ಕೆ ಕೇವಲ ಅಸಹನೆಯೊಂದೇ ಕಾರಣವಾಗಿಲ್ಲ, ಕರ್ನಾಟಕ ಲೋಕಯುಕ್ತರು ಈಗ ತನಿಖೆ ಚಾಲೂ ಮಾಡುತ್ತಿದ್ದಾರೆ. ಪ್ರಕರಣ ಸಂಖ್ಯೆ ಕಂಪ್ಲೆಂಟ್/ ಲೋಕ್/ ಬಿಡಿ 98/2009/ARS-2 ದಿನಾಂಕ 16.12.2009 ರಲ್ಲಿ ಶಿವಣ್ಣನಿಗೆ ನೋಟೀಸ್ ನೀಡಲಾಗಿದೆ. ಶಿವಣ್ಣ ಈಗ ತನ್ನ ಕಳ್ಳ ಆಸ್ತಿ ಸುಳ್ಳುಲೆಕ್ಕಗಳ ವಿವರ ಕೊಡಲೇ ಬೇಕಾಗಿ ಬಂದಿದೆ.

ತುಮಕೂರಿನ ಜನರ ಕಣ್ಣಲ್ಲಿ ಒಮ್ಮೆ ಸೊಗಡು ಶಿವಣ್ಣನಾಗಿ ಕಂಡಿದ್ದ ಇವನು ತಗಡು ಶಿವಣ್ಣನಾಗಿ ಹೋಗಿದ್ದಾನೆ.

ಲೋಕಾಯುಕ್ತರು ಇವನ ಹೀನ ಜಾತಕ, ಭ್ರಷ್ಟಾಚಾರ, ಕಳ್ಳ ಆಸ್ತಿ, ಸುಳ್ಳು ಮಾಹಿತಿಗಳ ಬಗ್ಗೆ ಬೇಗ ತನಿಖೆ ಮಾಡಿ ತಗಡು ಶಿವಣ್ಣನ ಅಸಲಿ ಯೋಗ್ಯತೆ ಏನೆಂದು ಬಯಲು ಮಾಡಬೇಕಿದೆ. ಅಷ್ಟರವರೆಗೂ ಬ್ರಹ್ಮಾನಂದರೆಡ್ಡಿಯ ಜೀವಕ್ಕೆ ಅಪಾಯವಾಗದಂತೆ ರಕ್ಷಣೆ ಕೊಡಲು ತುಮಕೂರಿನ ಭ್ರಷ್ಟ ಪೊಲೀಸರಿಗೆ ಎಚ್ಚರಿಕೆ ನೀಡಲಿ.





ಶಿವಣ್ಣನ ೧೦ ಕೋಟಿಯ ಹೊಸ ಬಂಗಲೆ..


ಅಂತರಸನ ಹಳ್ಳಿಯ ರೈಸ್ ಮಿಲ್.....


ಬಾಮ್ಮೈದರ ಹೆಸರಿನಲ್ಲಿರುವ ಪೆಟ್ರೋಲ್ ಬಂಕ್...

ಇಷ್ಟು ಆಸ್ತಿ ಹೇಗೆ ಬಂತು ಶಿವಣ್ಣೋರೆ?



ಈಗ್ಗೆ ಹದಿನೈದು ವರ್ಷಗಳ ಹಿಂದೆ ಶಿವಣ್ಣ ಹೇಗಿದ್ದ, ಜೇಬಲ್ಲಿ ಎಷ್ಟು ಹಣ ಇರುತ್ತಿತ್ತೆಂದು ಚೆನ್ನಾಗಿ ಗೊತ್ತಿರುವ ಜನ ತುಮಕೂರಿನಲ್ಲಿ ಈಗಲೂ ಇದ್ದಾರೆ. ಹಾಗಿದ್ದ ಶಿವಣ್ಣ ಎಂಎಲ್‌ಎ ಆದ ಮೇಲೆ ದುಡ್ಡು ದೋಚುವುದನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡ. ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ತುಮಕೂರಿನ ಸಮಗ್ರ ಅಭಿವೃದ್ಧಿಯ ನೆಪ ಹೇಳಿ ಪುಸಲಾಯಿಸಿ ಒಂದೇ ಏಟಿಗೆ ನಲವತ್ತೈದು ಕೋಟಿ ರೂಪಾಯಿ ರಿಲೀಸ್ ಮಾಡಿಸಿಕೊಂಡು ಹೋದವನು ಅದೇ ಹಣವನ್ನು ಹಗಲುರಾತ್ರಿಯೆನ್ನದೆ ತಿಂದು ದುಂಡಗಾದ. ಬೇಕಾದಷ್ಟು ಆಸ್ತಿ ಮಾಡಿಕೊಂಡ. ಎಲೆಕ್ಷನ್‌ಗೆ ನಿಲ್ಲುವಾಗ ಚುನಾವಣಾ ಆಯೋಗಕ್ಕೆ ಒಂದು ಲೆಕ್ಕ ತೋರಿಸಿದರೆ, ಪ್ರತಿ ವರ್ಷ ಲೋಕಾಯುಕ್ತರಿಗೆ ಆಸ್ತಿ ವಿವರ ನೀಡುವಾಗ ಬೇರೊಂದು ವಿವರ ಕೊಟ್ಟ. ಹೀಗೆ 1995 ರಿಂದ 2007 ರವರೆಗೆ ಶಿವಣ್ಣ ಸಲ್ಲಿಸಿರುವ ದಾಖಲೆಗಳಲ್ಲೇ ಡಜನ್‌ಗಟ್ಟಲೆ ಅಪರಾತಪರಾಗಳಿವೆ.

ಅಂತಹ ಕೆಲವು ಉದಾಹರಣೆಗಳು ಹೀಗಿವೆ.

1. ರಂಗಾಪುರದಲ್ಲಿ ಪತ್ನಿ ನಾಗರತ್ನರ ಹೆಸರಿನಲ್ಲಿರುವ 2 ಎಕರೆ 19 ಗುಂಟೆ ಜಮೀನಿನ ಬೆಲೆ 45 ಲಕ್ಷ ಎಂದು ತೋರಿಸಿ ಅದೇ ಗ್ರಾಮದಲ್ಲಿ ತನ್ನ ಹೆಸರಿನಲ್ಲಿರುವ ಎರಡು ಎಕರೆ 21 ಗುಂಟೆ ಜಮೀನಿನ ಮೌಲ್ಯ ಕೇವಲ 48 ಸಾವಿರ ಎಂದಿದ್ದಾರೆ.

ಇದು ನಂಬುವ ಮಾತೆ?

2. 2002 ರಲ್ಲಿ ದೇವರಾಯನಪಟ್ಟಣದಲ್ಲಿ 1 ಎಕರೆ 35 ಗುಂಟೆ ಜಮೀನನ್ನು 4.25 ಲಕ್ಷಕ್ಕೆ ಖರೀದಿಸಿರುವುದಾಗಿ ಹೇಳಿದ್ದಾನೆ. ನಂತರ 2005 ರಲ್ಲಿ ಅದೇ ಜಮೀನಿನ ಪಕ್ಕದ 1 ಎಕರೆ 15 ಗುಂಟೆ ಜಮೀನು ಖರೀದಿಸಿ ಅದರ ಬೆಲೆ 2.41 ಲಕ್ಷ ಎಂದಿದ್ದಾನೆ.

ಶಿವಣ್ಣನ ಪ್ರಕಾರ ಜಮೀನಿನ ಬೆಲೆ ದಿನೇದಿನೇ ಕಡಿಮೆ ಆಗಿದೆ!

3. 1995 ರಿಂದ 2007ರವರೆಗೆ ಸಲ್ಲಿಸಿರುವ ಆಸ್ತಿ ಘೋಷಣೆ ಪ್ರಮಾಣ ಪತ್ರದಲ್ಲಿ ತನ್ನ ಪಿತ್ರಾರ್ಜಿತ ಆಸ್ತಿಯ ವಿವರ ನೀಡಿಲ್ಲ, 1998-99 ರಲ್ಲಿ ತನ್ನ ವಾರ್ಷಿಕ ಆದಾಯ ಕೇವಲ 42 ಸಾವಿರ ಎಂದು ತಿಳಿಸಿ ತುಮಕೂರಿನ ಕೈಗಾರಿಕಾ ಪ್ರದೇಶದಲ್ಲಿನ ಒಂದು ಬಿಲ್ಡಿಂಗ್ ಖರೀದಿಸಿದ್ದಾನೆ. ಆ ಹಣದ ಮೂಲದ ಬಗ್ಗೆ ಮಾಹಿತಿ ನೀಡಿಲ್ಲ.

4. 1999-2000ರಲ್ಲಿ ಹೆಂಡತಿ ಹೆಸರಿನಲ್ಲಿ 1.35 ಎಕರೆ ಅಡಿಕೆ ತೋಟ ಖರೀದಿ. ಮಾರುಕಟ್ಟೆ ಬೆಲೆ ಎಕರೆಗೆ 8 ಲಕ್ಷವಿದ್ದರೂ ಎಂಬತ್ತೊಂದು ಸಾವಿರ ಬೆಲೆ ತೋರಿಸಿ ಸ್ಟಾಂಪ್‌ಡ್ಯೂಟಿ ವಂಚನೆ.

5. ಅತೀ ಆಶ್ಚರ್ಯ ಏನೆಂದರೆ 2004-05ನೇ ಸಾಲಿನ ಆಸ್ತಿ ವಿವರ ನೀಡುವಾಗ ವಾರ್ಷಿಕ ಆದಾಯ 4 ಲಕ್ಷ ತೋರಿಸಿ ಸಾಲ 12.5 ಲಕ್ಷ ಎಂದಿದ್ದಾನೆ. ಆದರೆ ಅದರ ಹಿಂದಿನ ವರ್ಷದಲ್ಲಿ ಸಾಲದ ಮೊತ್ತ 36 ಲಕ್ಷ ತೋರಿಸಿದ್ದ. ಆದಾಯವೇ ನಾಲ್ಕು ಲಕ್ಷವಿದ್ದಾಗ ಶಿವಣ್ಣ ಅದು ಹೇಗೆ 24 ಲಕ್ಷ ರೂಪಾಯಿ ಸಾಲ ತೀರಿಸಿದನೋ ಶ್ರೀರಾಮಚಂದ್ರನಿಗೆ ಗೊತ್ತು?

ಇಂತಹ ನೂರಾರು ಅಕ್ರಮಗಳು ಶಿವಣ್ಣನ ಜಾತಕದಲ್ಲಿವೆ. ಲೋಕಾಯುಕ್ತರು ತನಿಖೆ ಕೈಗೆತ್ತಿಕೊಂಡಿದ್ದಾರೆ.

ಈ ಶಿವಣ್ಣ ಎಂತಹ ಕೊಳ್ಳುಬಾಕನೆಂದರೆ ತುಮಕೂರಿನಾದ್ಯಂತ ಎತ್ತ ನೋಡಿದರೂ ಇವನ ಆಸ್ತಿಪಾಸ್ತಿ ಬ್ಯುಸಿನೆಸ್‌ಗಳೇ ಕಾಣಸಿಗುತ್ತಿವೆ.

ಅವುಗಳ ಕೆಲವು ಫೋಟೋಗಳು ಇಲ್ಲಿವೆ.


ಬಾಮ್ಮೈದರ ಹೆಸರಿನಲ್ಲಿರುವ ಬಾವಿ ಕಟ್ಟೆ ಕಲ್ಯಾಣಮಂಟಪ



ತುಮಕೂರು ಸಿರಾಗೇಟ್ ಬಳಿ ಇರುವ ಹಾಲೋಬ್ರಿಕ್ಸ್ ಕಾರ್ಖಾನೆ...


1994 ರಲ್ಲಿ ಹವಾಯಿ ಚಪ್ಪಲಿ ಹಾಕಿಕೊಂಡಿರುವ ಶಿವಣ್ಣ ಹೀಗಿದ್ದ...


ಚಿಕ್ಕಮಗಳೂರು: ಕಾಂಗ್ರೆಸ್ ಅಂಧತ್ವದಲ್ಲಿ ಬಿಜೆಪಿಯ ದರ್ಬಾರು

ಚಿಕ್ಕಮಗಳೂರು ಜಿಲ್ಲೆಯ ಕಾಂಗ್ರೆಸ್ ಮುಖಂಡರು ಇನ್ನೂ ಪಾಠ ಕಲಿತಿಲ್ಲ.

ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಒಂದರ ಹಿಂದೊಂದು ಸೋಲುಗಳನ್ನು ಕಂಡಿದೆ. ಪ್ರತಿ ಹಂತದಲ್ಲೂ ಬಿಜೆಪಿ ಕಾಂಗ್ರೆಸ್‌ಗೆ ಸೆಡ್ಡು ಹೊಡೆಯುತ್ತಿದೆ. ಇಲ್ಲಿ ಪಕ್ಷ ನೆಲಕಚ್ಚುತ್ತಿದ್ದರೂ ಇಲ್ಲಿನ ಕಾಂಗ್ರೆಸ್ ನಾಯಕರು ತಟಸ್ಥರಾಗಿರುವುದು ದಿಗ್ಭ್ರಮೆ ಮೂಡಿಸುವಂತಿದೆ.


ಶಂಕರ್

1978 ರಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಗೆ ರಾಜಕೀಯ ಮರುಜನ್ಮ ನೀಡಿದ ಲೋಕಸಭಾ ವ್ಯಾಪ್ತಿಯ ಕ್ಷೇತ್ರವಿದು. ಇಂದಿಗೂ ಗಾಂಧಿ ಮನೆತನದ ಮೇಲೆ ಮರುಕ ಹೊಂದಿರುವವರು ಈ ಜಿಲ್ಲೆಯಲ್ಲಿದ್ದಾರೆ. ರಾಜೀವ್ ಗಾಂಧಿಯನ್ನು ಆರಾಧಿಸುವವರಿದ್ದಾರೆ. ರಾಹುಲ್ ಗಾಂಧಿಯನ್ನು ತೀವ್ರವಾಗಿ ಮೆಚ್ಚಿಕೊಂಡವರಿದ್ದಾರೆ.




ದಶಕದ ಹಿಂದೆ ಕಾಂಗ್ರೆಸ್ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದವರು ಪ್ರಚಾರ ಮಾಡದಿದ್ದರೂ ಗೆಲ್ಲುವಂತಹ ಪರಿಸ್ಥಿತಿ ಇಲ್ಲಿತ್ತು. ಆದರೀಗ ಕಾಂಗ್ರೆಸ್ ಪರವಾಗಿ ಎದೆಯುಬ್ಬಿಸಿ ಮಾತನಾಡುವ ಕಾರ್ಯಕರ್ತರೂ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಂತಾಗಿದೆ.



ಸಿ.ಟಿ.ರವಿ

ಸದ್ಯದ ಮಟ್ಟಿಗೆ ಇಲ್ಲಿ ಕಾಂಗ್ರೆಸ್ ಸ್ಥಿತಿ ಹೇಗಿದೆ ಎಂದರೆ ನಮ್ಮ ಶತ್ರುಗಳಿಗೂ ಇಂತಹ ದುರ್ಗತಿ ಬರಬಾರದು ಅಂತನ್ನಿಸುತ್ತದೆ. ಮೊದಲಿಗೆ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸೋಲು. ಬಳಿಕ ಲೋಕಸಭೆ ಚುನಾವಣೆಯಲ್ಲಿ ಸೋಲು. ತದನಂತರ ಉಪ ಚುನಾವಣೆಗಳಲ್ಲಿ, ಲ್ಯಾಂಪ್ಸ್ ಸೊಸೈಟಿಯಲ್ಲಿ, ಕೃಷಿ ಕ್ಷೇತ್ರಗಳಲ್ಲಿ, ಸಹಕಾರ ಸಂಸ್ಥೆಗಳಲ್ಲಿ, ತಾಲ್ಲೂಕು ಪಂಚಾಯತಿಗಳಲ್ಲಿ, ಪಟ್ಟಣ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ, ಹೀಗೆ ಪ್ರತಿಯೊಂದು ಚುನಾವಣೆಯಲ್ಲಿ ಸೋಲೋ ಸೋಲು.

ಈ ಎಲ್ಲ ಸೋಲುಗಳು ಸರಣಿರೂಪದಲ್ಲಿ ಸಂಭವಿಸುತ್ತಿದ್ದರೆ ಕಾಂಗ್ರೆಸ್ ಎಚ್ಚೆತ್ತುಕೊಳ್ಳಲಿಲ್ಲ, ಹಾಗೆಯೇ ಬಿಜೆಪಿ ತನ್ನ ಗೆಲುವುಗಳ ಮೇಲೆ ವಿರಮಿಸಲಿಲ್ಲ. ಈಗ ಬಿಜೆಪಿ ತನ್ನ ಕಾರ್ಯಕರ್ತರನ್ನು ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ನಿಲ್ಲಿಸಿ ಗ್ರಾಮ ಮತ್ತು ಪಕ್ಷ ನಡುವೆ ಹೊಸತೊಂದು ಕೊಂಡಿ ಹೊಸೆಯಲು ಕಾದುನಿಂತಿದೆ. ಹಣಬಲ, ತೋಳ್ಬಲ, ಜನಬಲ ಅಥವಾ ಇನ್ನೇನೇನೋ ಬಳಸಿ ಗ್ರಾಮಮಟ್ಟದಲ್ಲಿ ತನ್ನ ಇರುವಿಕೆಯ ತಿದಿಯೊತ್ತಲು ಬಿಜೆಪಿ ನಾಯಕರು ಸಜ್ಜಾಗಿದ್ದಾರೆ. ಮೂಡಿಗೆರೆ ಕ್ಷೇತ್ರದ ಎಂ.ಪಿ.ಕುಮಾರಸ್ವಾಮಿ, ಚಿಕ್ಕಮಗಳೂರಿನ ಸಿ.ಟಿ.ರವಿ, ಶೃಂಗೇರಿಯ ಡಿ.ಎನ್.ಜೀವರಾಜ್, ತರೀಕೆರೆಯ ದೊರನಾಳು ಸುರೇಶ್.. ಮೇಲ್ನೋಟಕ್ಕೆ ಇವರೆಲ್ಲರೂ ನಾಲ್ಕು ದಿಕ್ಕುಗಳಿಗೆ ಮುಖ ಮಾಡಿ ಕುಳಿತಿದ್ದಾರಾದರೂ ಚುನಾವಣೆ ಸಮಯದಲ್ಲಿ ಮಾತ್ರ ಅವರಿಂದ ಯಡವಟ್ಟು ನಡೆಯುತ್ತಿಲ್ಲ.


ಪ್ರಾಣೇಶ್

ಎರಡನೆ ಅವಧಿಗೆ ಎಂ.ಕೆ. ಪ್ರಾಣೇಶ್ ಜಿಲ್ಲಾಧ್ಯಕ್ಷರಾದ ಬಳಿಕ ಬಿಜೆಪಿಯ ಅಬ್ಬರ ಕಡಿಮೆ ಆಗಿಲ್ಲ. ಚಿಕ್ಕಮಗಳೂರು, ತರೀಕೆರೆ, ಮೂಡಿಗೆರೆ, ಕಡೂರು, ಕೊಪ್ಪ ಎನ್.ಆರ್.ಪುರ, ಶೃಂಗೇರಿ ತಾಲ್ಲೂಕುಗಳಲ್ಲಿ ಈಗಾಗಲೇ ಅಡಿಪಾಯ ಹಾಕುವಂತಹ ಅಧ್ಯಕ್ಷರುಗಳನ್ನು ಪಕ್ಷ ಆಯ್ಕೆ ಮಾಡಿದೆ. ಅವರೆಲ್ಲರೂ ನಿಯತ್ತಿನಿಂದ ದುಡಿಯುತ್ತಾರೋ ಇಲ್ಲವೋ ಅದು ಬೇರೆ ಮಾತು. ಆದರೆ ಬಿಜೆಪಿ ಮಾತ್ರ ಕೆಳಗಿಳಿಯುತ್ತಿಲ್ಲ. ಅದಕ್ಕೆಲ್ಲಾ ಕಾಂಗ್ರೆಸ್ ಮುಖಂಡರ ಸೋಮಾರಿತನವೇ ಕಾರಣವೆಂಬುದು ಜನಜನಿತವಾಗಿದೆ.



ಎಂ.ಎಲ್.ಮೂರ್ತಿ

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರಾಗಿ ಎಂ.ಎಲ್.ಮೂರ್ತಿ ಆಯ್ಕೆಯಾದಾಗ ಅವರ ಬಗ್ಗೆ ಹಲವರು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದರು. ಮೂರ್ತಿ ಹೊಂದಿದ್ದ ಜನಪರ ಕಾಳಜಿ, ತತ್ವಗಳು, ಸೇವಾಮನೋಭಾವ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ಹುರುಪು ನೀಡಲಿದೆ ಎಂದು ಅವರೆಲ್ಲ ಲೆಕ್ಕಹಾಕಿದ್ದರು. ಅಲ್ಲದೇ ಇತರ ರಾಜಕೀಯ ಪಕ್ಷಗಳಿಗೆ ಮೂರ್ತಿಯ ನಿಲುವುಗಳಿಂದ ಮಾರಕವಾಗಲಿದೆ ಎಂದುಕೊಂಡಿದ್ದರು. ಆದರೆ ಅಂತಹ ನಿರೀಕ್ಷೆಗಳಿಂದು ಹೊಳೆಯಲ್ಲಿ ತೊಳೆದು ಹುಣಸೆ ಎಂತಾಗಿದೆ.



ಜಿಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಇವತ್ತಿಗೂ ಘಟಾನುಘಟಿಗಳಿದ್ದಾರೆ, ಹೆಚ್ಚಿನ ಕೋಟ್ಯಾಧೀಪತಿಗಳಿದ್ದಾರೆ. ಹಿಂದೆ ಕೇಂದ್ರದಲ್ಲಿ ಆರೋಗ್ಯ ಮಂತ್ರಿಯಾಗಿದ್ದ ಡಿ.ಕೆ.ತಾರಾದೇವಿ ಸಿದ್ದಾರ್ಥ, ಮಾಜಿ ಸಭಾಪತಿ ಬಿ.ಎಲ್.ಶಂಕರ್, ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಸಿ.ಆರ್. ಸಗೀರ್ ಅಹಮದ್, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕಿ ಮೋಟಮ್ಮ, ಮಾಜಿ ಸಚಿವ ಬಿ.ಬಿ.ನಿಂಗಯ್ಯ, ಎರಡು ಅವಧಿಗಳಿಗೆ ಸಂಸದನಾಗಿ ಎಂಎಲ್‌ಸಿ ಕೂಡ ಆಗಿದ್ದ ಡಿ.ಎಂ.ಪುಟ್ಟೇಗೌಡ, ಬೇಗಾನೆ ರಾಮಯ್ಯ, ಕಡೂರು ಶಾಸಕ ಕೆ.ಎಂ. ಕೃಷ್ಣಮೂರ್ತಿ, ಎಂಎಲ್‌ಸಿ ಆಗಿದ್ದ ಎಸ್.ಎಂ. ಮಂಜುನಾಥ್, ಬಿ.ಆರ್ ನೀಲಕಂಠಪ್ಪ, ಹಾಲಿ ಎಂಎಲ್‌ಸಿ ಗಾಯಿತ್ರಿ ಶಾಂತೇಗೌಡ, ಜಿಪಂ ಮಾಜಿಗಳಾದ ಕೆ. ಮಹಮ್ಮದ್, ಎ.ಎನ್. ಮಹೇಶ್, ಟಿ.ಡಿ. ರಾಜೇಗೌಡ, ಕೆ.ಎಂ.ಕೆಂಪರಾಜ್... ಹೀಗೆ ಜಿಲ್ಲೆಯ ತುಂಬ ಕಾಂಗ್ರೆಸ್ ನಾಯಕರಿದ್ದಾರೆ. ಆದರೆ ದುರದೃಷ್ಟವಶಾತ್ ಅವರೆಲ್ಲ ಹಾವು ಮುಂಗುಸಿಗಳಂತೆ ಪರಸ್ಪರ ಕಾಲೆಳೆಯುವ ಕುತಂತ್ರದಲ್ಲೇ ಬ್ಯುಸಿ ಆಗಿರುತ್ತಾರೆ.


ತಾರಾದೇವಿ


ಮೋಟಮ್ಮ

ಇತ್ತೀಚೆಗೆ ನಡೆದ ಜಿಲ್ಲಾ ಸಹಕಾರ ಬ್ಯಾಂಕಿನ ಚುನಾವಣೆಯನ್ನು ಬಿಜೆಪಿ ಶಾಸಕ ಸಿ.ಟಿ.ರವಿ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡ. ಈ ಚುನಾವಣೆಯಲ್ಲಿ ಮಾ[...] ಪ್ರಧಾನಿ ಎಚ್.ಡಿ. ದೇವೇಗೌಡರ ಪರಮಾಪ್ತ ಶಿಷ್ಯ ಮಾ[...] ಮಂತ್ರಿ ದಿವಂಗತ ಲಕ್ಷ್ಮಣಯ್ಯರ ಪುತ್ರರಾ[...] ಜೆಡಿಎಸ್ ಪಕ್ಷದ ಪ್ರಭಾವಿಗಳಾದ ಎಸ್.ಎಲ್[...] ಭೋಜೇಗೌಡ ಮತ್ತು ಎಸ್.ಎಲ್. ಧರ್ಮೇ[...] ಗೌಡರ ಪ್ರಾಬಲ್ಯವನ್ನು ಮೊಟಕುಗೊಳಿಸಲ[...] ರವಿ ಹರಸಾಹಸಪಟ್ಟ. ಬ್ಯಾಂಕನ್ನು ಈ ಹಿಂ[...] ಸರ್ಕಾರ ಸೂಪರ್‌ಸೀಡ್ ಮಾಡುವಲ್ಲಿ ರ[...] ಕಾರಣನಾಗಿದ್ದ. ಆದರೆ ನ್ಯಾಯಾಲಯ[...] ಮೆಟ್ಟಿಲೇರಿದ ಎಸ್.ಎಲ್. ಸಹೋದರರು ಅ[...] ವಿಜಯಿಗಳಾದರು. ರಾಜಕೀಯವಾಗಿ ತ[...] ಕಡುವೈರಿಗಳಾದ ಅವರಿಬ್ಬರನ್ನು ಸೋಲಿಸುವುದ[...] ರವಿಗೆ ಸಾಧ್ಯವಾಗದಿದ್ದರೂ ಕಾಂಗ್ರೆಸ್‌ನ ಜಿಲ್ಲಾಧ್ಯ[...] ಮೂರ್ತಿಯನ್ನು ಸೋಲಿಸುವಲ್ಲಿ ಯಶಸ್ವಿಯಾದ[...] ಇದು ಕಾಂಗ್ರೆಸ್ ಮುಖಂಡರಿಗೆ ನುಂಗಲಾರ[...] ತುತ್ತಾಗಿದೆ.


ಅಂದಹಾಗೆ ಗ್ರಾಮ ಪಂಚಾಯ[...] ಚುನಾವಣೆ ರಂಗಿನಿಂದ ಕೂಡಿದೆ. ಎಲ್ಲೆಡೆ ಹಣ[...] ಹೆಂಡ, ಸೀರೆ, ಪಂಚೆಗಳನ್ನು ಹಂಚಲಾಗುತ್ತಿದ[...] ಹಳ್ಳಿಗಳ ಬಡಜನ ಎಂದೂ ಕಾಣದಂತ[...] ಬಾಡೂಟ ಕಾರ್ಯಗಳೂ ನಡೆದಿವೆ. ಚುನಾವ[...] ಗೆದ್ದ ಬಳಿಕ ಎಲ್ಲಾ ಸಮಸ್ಯೆಗಳನ್ನು ಈಡೇರಿಸು[...] ಭರವಸೆಗಳನ್ನು ಕೊಟ್ಟಾಗಿವೆ. ಮುಂದೆ ಯಾ[...] ಭರವಸೆ ಈಡೇರುತ್ತದೆ ಎಂದು ಈಗಲೇ ಹೇಳಲಾಗುವುದಿಲ್ಲ. ಕೆಲವೆಡೆ ಅಭ್ಯರ್ಥಿಗ[...] ನಡುವೆ, ಗುಂಪುಗಳ ಮಧ್ಯೆ ಮಾರಾಮಾರಿಗಳ[...] ನಡೆದಿವೆ.


ಇಂತಹ ಸಮಯದಲ್ಲಿ ಕಾಂಗ್ರೆ[...] ಮುಖಂಡರು 'ಗ್ರಾಮ ಪಂಚಾಯತಿ ಚುನಾವ[...]ಗಳು ಪಕ್ಷಾತೀತವಾಗಿ ನಡೆಯುತ್ತವೆ, ಅದರಲ್ಲಿ ಪಕ್ಷಕ್ಕೆ ಪಾತ್ರವಿಲ್ಲ'' ಎಂದು ಹೇಳುತ್ತಿರುವುದು[...] ಸೋಗಲಾಡಿತನವಲ್ಲವೇ?

ಕಾಂಗ್ರೆಸ್ ನಾಯಕರಿಗೆ ಬುದ್ಧಿ ಬರುವುದೆಂದು?

• ಅಜೀಜ್ ಕಿರುಗುಂದ[...]

ಪತ್ನಿ ಕೊಂದ ಶ್ರೀನಿವಾಸರೆಡ್ಡಿ ರಕ್ಷಣೆಗೆ ನಿಂತ ಶಾಸಕ ಸತೀಶ್ ರೆಡ್ಡಿ





ಇದೊಂದು ಹೃದಯ ಕಲಕುವ ದುರಂತ ಘಟನೆ.

ಬೆಂಗಳೂರಿನ ಜಿಗಣಿ ಹತ್ತಿರದ ತಿರುಪಾಳ್ಯದ ನಾಗಪ್ಪರೆಡ್ಡಿಯವರ ಮಗಳು ಜಲಜಾಕ್ಷಿಯನ್ನು ಮಾರ್ಚ್ 15ರ ಬೆಳಗ್ಗೆ ಹೊಡೆದು ಕೊಲ್ಲಲಾಯಿತು. ಕೊಂದವನು ಆಕೆಯ ಗಂಡ ಶ್ರೀನಿವಾಸ ರೆಡ್ಡಿಯೇ ಆಗಿದ್ದ. ಈಗ ತನ್ನ ಮಗಳನ್ನು ಕೊಂದ ಅಳಿಯ ಶ್ರೀನಿವಾಸ ರೆಡ್ಡಿ ಹಾಗೂ ಅತ್ತೆ ರತ್ನಮ್ಮಳನ್ನು ಅರೆಸ್ಟ್ ಮಾಡಿ ಶಿಕ್ಷಿಸಿ ಎಂದು ನಾಗಪ್ಪ ರೆಡ್ಡಿ ಮಡಿವಾಳ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಆದರೆ ಪೊಲೀಸರು ಕೇಸ್‌ಅನ್ನು ಹಳ್ಳ ಹಿಡಿಸಲು ಹೊರಟಿದ್ದಾರೆ. ಕೊಲೆಪಾತಕಿ ಶ್ರೀನಿವಾಸ ರೆಡ್ಡಿಯ ರಕ್ಷಣೆಗೆ ಬೊಮ್ಮನಹಳ್ಳಿಯ ಬಿಜೆಪಿ ಶಾಸಕ ಸಾಕ್ಷಾತ್ ಸತೀಶ್ ರೆಡ್ಡಿಯೇ ನಿಂತುಬಿಟ್ಟಿದ್ದಾನೆ. ಪತ್ನಿ ಜಲಜಾಕ್ಷಿಯನ್ನು ಹಣ ಮತ್ತು ಆಸ್ತಿಗೋಸ್ಕರ ಕೊಲೆ ಮಾಡಿರುವ ಶ್ರೀನಿವಾಸ ರೆಡ್ಡಿ ಈಗ ಆರಾಮವಾಗಿ ಓಡಾಡಿಕೊಂಡಿದ್ದಾನೆ.



ಆಸ್ತಿಗಾಗಿ ಕಿರುಕುಳ

ತಿರುಪಾಳ್ಯದ ನಾಗಪ್ಪ ರೆಡ್ಡಿಗೆ ನಾಲ್ವರು ಹೆಣ್ಣುಮಕ್ಕಳು. ಕಮಲಮ್ಮ, ಸುಜಾತ ಹಾಗೂ ಶೋಭಾ ಮದುವೆಯಾಗಿ ನೆಮ್ಮದಿಯಾಗಿದ್ದಾರೆ. ನಾಲ್ಕನೇ ಮಗಳು ಜಲಜಾಕ್ಷಿಯನ್ನು 1998 ರ ಮೇ ತಿಂಗಳಲ್ಲಿ ಶ್ರೀನಿವಾಸ ರೆಡ್ಡಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಬೊಮ್ಮನಹಳ್ಳಿಯ ಬಾನು ನರ್ಸಿಂಗ್ ಹೋಂ ಹತ್ತಿರವಿದ್ದ ಕೃಷ್ಣಾ ರೆಡ್ಡಿಯ ಎರಡನೇ ಮಗನಾಗಿದ್ದ ಶ್ರೀನಿವಾಸ ರೆಡ್ಡಿ ಮದುವೆಯಾಗುವಾಗ ಜಲಜಾಕ್ಷಿಯ ಮನೆಯವರಿಂದ ಯಥೇಚ್ಛ ಹಣ, ಚಿನ್ನ ತೆಗೆದುಕೊಂಡಿದ್ದ.



ಸಾಕಷ್ಟು ಸ್ಥಿತಿವಂತರಾಗಿದ್ದ ನಾಗಪ್ಪ ರೆಡ್ಡಿಯವರಿಗೆ ತಿರುಪಾಳ್ಯದಲ್ಲಿ ಪಿತ್ರಾರ್ಜಿತ ಆಸ್ತಿಯೂ ಇತ್ತು, ಬೆಂಗಳೂರಿನಲ್ಲಿ ಭೂಮಿ ಬೆಲೆ ಜಾಸ್ತಿಯಾಗಿ ನಾಗಪ್ಪ ರೆಡ್ಡಿಯವರೂ ಸ್ವಲ್ಪ ಜಮೀನು ಮಾರಿ ತಮ್ಮ ಎಲ್ಲಾ ಹೆಣ್ಣುಮಕ್ಕಳಿಗೂ ಹಣಕಾಸಿನ ಸಹಾಯ ಮಾಡಿದ್ದರು. ಅದರಂತೆ ಜಲಜಾಕ್ಷಿಯ ಹೆಸರಿನಲ್ಲೂ ತಿರುಪಾಳ್ಯದ ಸರ್ವೆ ನಂ. 10/2 ರಲ್ಲಿ 5 ಗುಂಟೆ ಜಾಗ ನೀಡಿ ತಾನೇ ಹಣ ಖರ್ಚು ಮಾಡಿ 20 ಬಾಡಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದರು. ಇದರ ಬಾಡಿಗೆಯೇ ತಿಂಗಳಿಗೆ 40 ಸಾವಿರದಷ್ಟು ಜಲಜಾಕ್ಷಿಗೆ ಸಿಗುತ್ತಿತ್ತು. ಆಕೆಗೆ ಕೃಷ್ಣವೇಣಿ ಹಾಗೂ ಜ್ಯೋತಿ ಎಂಬ ಹೆಣ್ಣು ಮಕ್ಕಳಿದ್ದಾರೆ.

ಈ ನಡುವೆ ಪೋಲಿ ತಿರುಗುತ್ತಾ, ಬಿಜೆಪಿಗಳ ಜೊತೆ ಓಡಾಡುತ್ತಾ ಹಾಳಾದ ಶ್ರೀನಿವಾಸ ರೆಡ್ಡಿ ತನ್ನ ಹೆಂಡತಿಯ ತವರು ಮನೆಯ ಆಸ್ತಿಯನ್ನೇ ಮಜಾ ಉಡಾಯಿಸುತ್ತಾ ತಿರುಗಲು ಶುರು ಮಾಡಿದ್ದ. ಓಡಾಡಲು ಮಾವ ಕೊಡಿಸಿದ ಸ್ವಿಫ್ಟ್ ಕಾರಿತ್ತು, ಶೋಕಿ ಮಾಡಲು ಕೈತುಂಬಾ ಹಣ ಸಿಗುತ್ತಿತ್ತು, ಶ್ರೀನಿವಾಸ ರೆಡ್ಡಿ ಬೀದಿ ಹೆಂಗುಸರ ಹಿಂದೆ ಬಿದ್ದ. ಹೆಂಡತಿ ಹೆಸರಿನಲ್ಲಿದ್ದ ಎರಡು ಕೋಟಿ ಬೆಲೆಯ ಆಸ್ತಿಯನ್ನು ತನ್ನ ಹೆಸರಿಗೆ ಬರೆದುಕೊಡು ಎಂದು ನಿತ್ಯ ಹಿಂಸೆ ಶುರು ಮಾಡಿದ. ಈ ಶ್ರೀನಿವಾಸ ರೆಡ್ಡಿಯ ತಾಯಿ ರತ್ನಮ್ಮ ಮಹಾ ಕೆಟ್ಟ ಹೆಂಗಸು. ದಾರಿ ತಪ್ಪಿದ ಮಗನನ್ನು ತಿದ್ದುವ ಬದಲಾಗಿ ಆಸ್ತಿಗಾಗಿ ಸೊಸೆ ಜಲಜಾಕ್ಷಿಗೆ ಕಿರುಕುಳ ಕೊಡಲು ಶುರು ಮಾಡಿದಳು.



ಈ ಕಿರುಕುಳ, ಹಿಂಸೆ ಹೆಚ್ಚಾಗುತ್ತಾ ಕೊನೆಗೆ ಕಳೆದ ಮಾರ್ಚ್ 15 ರಂದು ಬೆಳಗ್ಗೆ ಜಲಜಾಕ್ಷಿಗೆ ಸಾವು ಬಂತು. ಶ್ರೀನಿವಾಸ ರೆಡ್ಡಿ ಹಾಗೂ ಅವನ ತಾಯಿ ರತ್ನಮ್ಮ ಸೇರಿಕೊಂಡು ಜಲಜಾಕ್ಷಿಗೆ ಹೊಡೆದು ಪ್ರಾಣ ತೆಗೆದಿದ್ದಾರೆ.

ಜಲಜಾಕ್ಷಿಯ ತಂದೆ ನಾಗಪ್ಪ ರೆಡ್ಡಿ ಮಡಿವಾಳ ಪೊಲೀಸರಿಗೆ ದೂರು ಕೊಟ್ಟರೆ ಕಾನೂನು ಕ್ರಮ ಜರುಗಿಸಲು ಪೊಲೀಸರು 15 ದಿನ ಸತಾಯಿಸಿದ್ದಾರೆ. ಕೊಲೆಪಾತಕ ಶ್ರೀನಿವಾಸ ರೆಡ್ಡಿ ತನ್ನ ಭಂಟನಾಗಿದ್ದ ಕಾರಣ ಶಾಸಕ ಸತೀಶ್ ರೆಡ್ಡಿಯ ರಕ್ಷಣೆ ಅವನಿಗಿತ್ತು. ಈಗ ಪೊಲೀಸರು ನೆಪಮಾತ್ರಕ್ಕೆ ಶ್ರೀನಿವಾಸ ರೆಡ್ಡಿಯನ್ನು ಅರೆಸ್ಟ್ ಮಾಡಿ ಒಂದೇ ಗಳಿಗೆಯಲ್ಲಿ ಬಿಟ್ಟು ಕಳಿಸಿದ್ದಾರೆ. ಈ ಕೇಸಿನಲ್ಲಿ ಸಾಕಷ್ಟು ಹಣ ತಿಂದಿರುವ ಪೊಲೀಸರು ಕೇಸ್ ಹಾಳು ಮಾಡುವುದು ಗ್ಯಾರಂಟಿ ಎಂಬಂತೆ ಕಾಣುತ್ತಿದೆ.

ಇತ್ತ ಕೊಲೆಗಾರ, ಕುಡುಕ, ಲಂಪಟ ಶ್ರೀನಿವಾಸ ರೆಡ್ಡಿ ಇನ್ನೊಂದು ಮದುವೆಗೆ ರೆಡಿಯಾಗುತ್ತಿದ್ದಾನೆ. ಈ ಲೋಫರ್ ಬಗ್ಗೆ ಗೊತ್ತಿರದೆ ಯಾರಾದರೂ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಬಿಟ್ಟಾರೆಂಬ ಕಾರಣಕ್ಕೆ, ಶ್ರೀನಿವಾಸ ರೆಡ್ಡಿ ಹಾಗೂ ಅವನ ರಾಕ್ಷಸಿ ತಾಯಿ ರತ್ನಮ್ಮನ ಫೋಟೋ ಇಲ್ಲಿ ಪ್ರಕಟಿಸಲಾಗಿದೆ.

ಈ ಕೊಲೆ ಪಾತಕಿ ತಾಯಿ-ಮಗನ ಬಗ್ಗೆ ಜನ ಹುಷಾರಾಗಿರಲಿ.

ಅವಿವೇಕಿ ಸರಕಾರದ ವಿರುದ್ಧ ಕಾಂತಾ ಆಮರಣ ಉಪವಾಸ



ಜಟ್ಟಿ ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲ ಎಂದು ವಾದಿಸಿದಂತೆ ವರ್ತಿಸುತ್ತಿರುವ ಸರ್ಕಾರ ಈ ನೌಕರರ ಕಡೆ ದಿವ್ಯ ನಿರ್ಲಕ್ಷ್ಯ ವಹಿಸಿದೆ. ಅಷ್ಟೇ ಅಲ್ಲ, ತನ್ನ ಕಳ್ಳಾಟವನ್ನು ಪೌರ ನೌಕರರೊಂದಿಗೆ ನಡೆಸಿದೆ. ಪೌರ ಕಾರ್ಮಿಕರ ಬಾಕಿ ಇರುವ 9.26 ಕೋಟಿ ರೂಪಾಯಿ ವೇತನವನ್ನು ಸ್ವಸಹಾಯ ಸಂಘಗಳ ಮೂಲಕ ಪಾವತಿ ಮಾಡುವುದಾಗಿ ಸರಕಾರ ಲಿಖಿತ ಭರವಸೆ ನೀಡುತ್ತ, ಪೌರ ಕಾರ್ಮಿಕರನ್ನು ಕಾಯಂಗೊಳಿಸದೆ ಇರುವ ಹುನ್ನಾರದಲ್ಲಿ ತೊಡಗಿದೆ. ಆದರೆ ಮೂರು ವರ್ಷಗಳ ಹಿಂದೆ ಮಹಾನಗರ ಪಾಲಿಕೆಯೆ ಸದರಿ ಕಾರ್ಮಿಕರ ಸಂಬಳವನ್ನು ಕೆಲಸಗಾರರ ಖಾತೆಗೆ ನೇರ ಜಮಾ ಮಾಡುತ್ತಿತ್ತು. 'ಅದರಂತೆ ಈಗಲೂ ಮಾಡಿರಿ, ಒಂದು ವೇಳೆ ಈ ಕಾರ್ಮಿಕರು ಯಾರಾದರೂ ಕಂಟ್ರಾಕ್ಟರ್ ಮೂಲಕ ನೇಮಕಗೊಂಡಿದ್ದರೆ ಅದನ್ನು ತೋರಿಸಿ, ಇಲ್ಲವೆ ನಿಮ್ಮನ್ನು ಈ ಕ್ಷಣವೆ ಕೆಲಸದಿಂದ ತೆಗೆದುಹಾಕಿದ್ದೇವೆ ಎಂದು ಲಿಖಿತವಾಗಿ ಪತ್ರ ನೀಡಿ, ನಾವು ಚಳವಳಿಯನ್ನು ಹಿಂದಕ್ಕೆ ಪಡೆಯುತ್ತೇವೆ' ಎಂಬುದು ಕಾಂತಾ ಅವರ ವಾದವಾಗಿದೆ. ಇದು ಯಾವುದೇ ಅಕ್ಷರ ಗೊತ್ತಿಲ್ಲದ ದನಾಕಾಯುವ ಹುಡುಗನಿಗೂ ಗೊತ್ತಾಗುವ ಸಂಗತಿ. ಆದರೆ ಅಧಿಕಾರದ ಚುಕ್ಕಾಣಿ ಹಿಡಿದಿರುವ ನಾಮರ್ದ ರಾಜಕಾರಣಿಗಳಿಗೆ ಹಾಗೂ ಸೋಂಭೇರಿ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ.



ಪದ್ಮನಯನ



ಮಹಾಂತ ಶಿವಾಚಾರ್ಯ

ಸರಕಾರದ ದುರುದ್ದೇಶವನ್ನು ಸಂಪೂರ್ಣವಾಗಿ ಬಲ್ಲ ಮಾಜಿ ಮಂತ್ರಿ ಎಸ್.ಕೆ. ಕಾಂತಾ ತಮ್ಮ ಎಲ್ಲಾ ಅಸ್ತ್ರಗಳು ಕೊನೆಗೊಂಡಾಗ ಅನಿವಾರ್ಯವಾಗಿ ಸರಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಮೇ 3 ರಂದು ಆಮರಣ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. ಆದರೆ ಹೇಗಾದರೂ ಸೈ ಕಾಂತಾ ಅವರ ಚಳವಳಿಯನ್ನು ಬಗ್ಗು ಬಡಿಯಲೇಬೇಕೆಂದು ಪಣ ತೊಟ್ಟಿರುವ ಜಿಲ್ಲಾಡಳಿತ ಶಾಂತವಾಗಿ ಸತ್ಯಾಗ್ರಹ ಮಾಡು ತ್ತಿದ್ದವರ ಮೇಲೆ, ಅವರನ್ನು ಬೆಂಬಲಿಸಿದ ಸುಲಫಲ ಮಠದ ಮಹಾಂತ ಶಿವಾಚಾರ್ಯರ ಮೇಲೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಮಪ್ರಭು ಪಾಟೀಲ ಮುಂತಾದವರ ಮೇಲೂ ಕೇಸುಗಳನ್ನು ಹಾಕಿ ಜೇಲಿಗೆ ತಳ್ಳಬೇಕೆಂಬ ಹುನ್ನಾರದಲ್ಲಿ ತೊಡಗಿದೆ. ಆದರೆ ಜಿಲ್ಲಾಡಳಿತದ ದುರ್ಬುದ್ಧಿಯನ್ನು ಬಲ್ಲ ಗುಲಬರ್ಗಾದ ಜನತೆ ಮಾತ್ರ ಕಾರ್ಮಿಕರ ಪರವಾದ ಕಾಂತಾ ಅವರ ಹೋರಾಟವನ್ನು ಬೆಂಬಲಿಸಿ ಬೀದಿಗೆ ಇಳಿದಿದ್ದಾರೆ. ದಿನೇ ದಿನೇ ಚಳವಳಿ ತನ್ನ ಕಾವನ್ನು ಉಳಿಸಿ ಕೊಂಡು ವಿಸ್ತೃತಗೊಳ್ಳುತ್ತ ಸಾಗಿದೆ.

ಆದರೆ ಇದನ್ನು ಜನಪ್ರತಿನಿಧಿಗಳಿಗೆ ಸರಿಯಾಗಿ ಮನವರಿಕೆ ಮಾಡಿಕೊಡ ಬೇಕಾದ ಅಧಿಕಾರಿಗಳು ಮುದ್ದಾಂ ತಪ್ಪು ವರದಿಗಳನ್ನು ಕಳಿಸುತ್ತ ಸರಕಾರವನ್ನು ದಿಕ್ಕು ತಪ್ಪಿಸುತ್ತಿದ್ದಾರೆ.

ಜಿಲ್ಲಾಡಳಿತದ ಗೂಂಡಾಗಿರಿಯ ವಿರುದ್ಧ ರೊಚ್ಚಿಗೆದ್ದಿರುವ ಕಾಂತಾ

ಬಹುತೇಕರು ಬಲ್ಲಂತೆ ಮಾಜಿ ಕಾರ್ಮಿಕ ಮಂತ್ರಿ ಎಸ್.ಕೆ. ಕಾಂತಾ ಜನಪರ ದನಿಗೆ ಧ್ವನಿಯಾಗುತ್ತ ಬಂದವರು. ಯಾವುದೇ ಸರಕಾರದ ನೀತಿ ಜನರಿಗೆ ಮುಳುವಾಗುತ್ತದೆ ಎಂದು ಅರಿತಾಗ ಇದ್ದದ್ದನ್ನು ಇದ್ದಂತೆ ಹೇಳಿದವರು. ಅವರು ಯಾವುದೇ ಪಕ್ಷದಲ್ಲಿದ್ದರೂ ಆ ಪಕ್ಷದ ವರ್ತನೆಗಳು ಇರಿಸುಮುರಿಸು ತಂದಾಗಲೂ ಅದನ್ನು ಹೇಳದೆ ಬಿಟ್ಟವರೆ ಅಲ್ಲ. ಹೀಗಾಗಿ ಜನಸಾಮಾನ್ಯರು ಅವರನ್ನು ತುಂಬಾ ಇಷ್ಟಪಡುತ್ತಾರೆ. ಅವರು ಅಧಿಕಾರದಲ್ಲಿ ಇರಲಿ ಬಿಡಲಿ ಯಾವತ್ತೂ ಜನಸಾಮಾನ್ಯರ ನೋವುಗಳೊಂದಿಗೆ ಸ್ಪಂದಿಸುತ್ತಲೆ ಬಂದಿದ್ದಾರೆ.

ರಾಮಕೃಷ್ಣ ಹೆಗಡೆ ಅವರ ಸರಕಾರದಲ್ಲಿ ಕಾಂತಾ ಕಾರ್ಮಿಕ ಸಚಿವರಾಗಿದ್ದಾಗಲೂ ತಮ್ಮ ಸರಳತನವನ್ನು ಬಿಟ್ಟುಕೊಟ್ಟವರೆ ಅಲ್ಲ. ಬಹಳಷ್ಟು ಜನರಿಗೆ ಕೆಂಪುಗೂಟದ ಕಾರಿನಲ್ಲಿ ಕುಳಿತುಕೊಳ್ಳುತ್ತಲೆ ಇಲ್ಲದ ಅಹಂಕಾರ ಬಂದು ಬಿಡುತ್ತದೆ. ಅವರಿಗೆಲ್ಲ ರಸ್ತೆಗಳು, ಆ ರಸ್ತೆಯಲ್ಲಿ ತಿರುಗಾಡುವ ಜನಗಳು ಕಾಣುವುದೇ ಇಲ್ಲ. ಜನರ ಸಮಸ್ಯೆಗಳಂತೂ ಅವರ ಕಣ್ಣಂಚಿನಿಂದ ದೂರವೇ ಉಳಿದುಬಿಡುತ್ತವೆ. ಆದರೆ ಈ ಎಲ್ಲಾ ಮಾತುಗಳಿಂದ ಕಾಂತಾ ಬಹುದೂರ.


ಮಾಜಿ ಮಂತ್ರಿಯಾಗಿದ್ದರೂ ಇಂದಿಗೂ ಇವರು ವಾಸಿಸುವುದು ಬಾಡಿಗೆ ಕಟ್ಟಡದಲ್ಲಿ ಎಂಬುದೆ ಇವರ ಸರಳತೆಗೆ ಒಂದು ದೊಡ್ಡ ಉದಾಹರಣೆ. ತನ್ನನ್ನು ಅರಸಿ ಬಂದ ನೊಂದ ಜೀವಿಗಳಿಗೆ ತನ್ನಿಂದ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡಿ ತೃಪ್ತಿಪಡುವುದೇ ಇವರ ಕೆಲಸ.

ಅಂದಂತೆ ಕಲಬುರ್ಗಿ ಪೌರ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿದ ಕಾಂತಾ ಅವರು ಈಗ ಹೋರಾಟದ ಹಲವಾರು ಮಜಲುಗಳನ್ನು ದಾಟಿ ನಿಂತಿದ್ದಾರೆ. ಭ್ರಷ್ಟಗೊಂಡಿರುವ ಸರಕಾರದ ಜಡತ್ವಕ್ಕೆ ರೋಸಿ ಹೋಗಿದ್ದಾರೆ. ಹತ್ತೆಂಟು ಸಲ ರಸ್ತಾ ರೋಖೋ ಆಯ್ತು. ನಾಲ್ಕಾರು ಸಲ ಗುಲಬರ್ಗಾ ಬಂದ್ ಆಯ್ತು. ಸುಮಾರು ವರ್ಷಗಳಿಂದ ಸರದಿ ಉಪವಾಸ ಸತ್ಯಾಗ್ರಹವೂ ಆಯ್ತು.



ಸರಕಾರದ ಮುಖ್ಯ ಕಾರ್ಯದರ್ಶಿ, ಪೌರಾಡಳಿತ ಸಚಿವರು, ಕೊನೆಗೆ ಮುಖ್ಯಮಂತ್ರಿಯೊಂದಿಗೆ ಸಂವಾದ ನಡೆಸಿದ್ದೂ ಆಯ್ತು. ಆದರೆ ಫಲಿತಾಂಶ ಮಾತ್ರ ಸೊನ್ನೆ.

ಇದೆಲ್ಲದರಿಂದ ರೋಸಿಹೋದ ಕಾಂತಾ ಕೊನೆಯ ಅಸ್ತ್ರವಾಗಿ ಮಾಡು ಇಲ್ಲವೆ ಮಡಿ ಎಂಬ ತತ್ವದಡಿ ಆಮರಣ ಉಪವಾಸ ಕುಳಿತಿದ್ದಾರೆ. ಆದರೆ ಇದನ್ನು ಗಂಭೀರವಾಗಿ ಪರಿಗಣಿಸದ ಜಿಲ್ಲಾಡಳಿತ ಮುದ್ದಾಂ ಆಗಿ ಕಾಂತಾ ಉಂಡುಂಡು ಉಪವಾಸ ಕುಳಿತಿದ್ದಾರೆ ಎಂಬ ವದಂತಿ



ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಕಾಂತಾ

ಹಬ್ಬುವಂತೆ ನೋಡಿಕೊಂಡಿದೆ. ತರುವಾಯ ಕಾಂತಾ ಅವರು ಸರಕಾರದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿದ್ದಾರೆ, ಅವರು ನಗಣ್ಯ ವ್ಯಕ್ತಿ ಎಂಬಂತೆ ಚಿತ್ರಿಸುತ್ತ ನಡೆದಿದೆ. ಹೀಗಾಗಿಯೆ ಗುಲಬರ್ಗಾದ ಕಾರ್ಮಿಕರ ಸ್ಥಿತಿಗತಿಗಳನ್ನು ಸರಕಾರಕ್ಕೆ ನಿಷ್ಪಕ್ಷಪಾತವಾಗಿ ವರದಿ ಮಾಡದೆ ಘನಘೋರವಾದ ತಪ್ಪು ಮಾಡುತ್ತಿದೆ.

ಶಾಂತಿಗೆ ಭಂಗವಾಗದಂತೆ ಆಮರಣ ಉಪವಾಸ ಕುಳಿತಿದ್ದ ಕಾಂತಾ ಅವರನ್ನು ಅವರ ದೇಹಸ್ಥಿತಿಯ ನೆಪವೊಡ್ಡಿ ಯಾರಿಗೂ ಗೊತ್ತಾಗದ ಅಜ್ಞಾತ ಸ್ಥಳವೊಂದಕ್ಕೆ ಈಗ ಸ್ಥಳಾಂತರಿಸಲಾಗಿದೆ. ಜಿಲ್ಲಾಡಳಿತದ ದುಷ್ಟ ಧೋರಣೆಗಳ ಬಗ್ಗೆ ಅನುಮಾನವಿದ್ದ 'ಲಂಕೇಶ್' ಕಾಂತಾ ಅವರ ಮೇಲೆ ಯಾವತ್ತೂ ಹದ್ದಿನ ಕಣ್ಣಿಟ್ಟಿತ್ತು. ಹಾಗಾಗಿ ಕಾಂತಾ ಅವರು ಈಗ ರಾಯಚೂರಿನ ಒಪೆಕ್ ಆಸ್ಪತ್ರೆಯಲ್ಲಿ ದಾಖಲಾಗಿರುವುದು ಎಲ್ಲರಿಗೂ ತಿಳಿಯಿತು.

ಒಪೆಕ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಕಾಂತಾ ಅವರನ್ನು ಕೂಡಿ ಹಾಕಿದ್ದರೂ ಅವರ ಜಂಘಾಬಲ ಉಡುಗಿಹೋಗಿಲ್ಲ. ಅಲ್ಲಿಂದಲೆ ಮತ್ತೆ ಜಿಲ್ಲಾಡಳಿತದ ಗೂಂಡಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ವಿರುದ್ಧ ಗುಡುಗಿದ್ದಾರೆ. ತಮ್ಮ ಆಮರಣ ಉಪವಾಸವನ್ನು ಮುಂದುವರೆಸಿದ್ದಾರೆ.

ಒಂದು ವೇಳೆ ಆಮರಣ ಉಪವಾಸದಿಂದ ಕಾಂತಾ ಅವರ ಜೀವಕ್ಕೆ ಏನಾದರೂ ಅನಾಹುತ ಘಟಿಸಿದ್ದೆ ಆದರೆ ಜಿಲ್ಲಾಡಳಿತ ಮಾತ್ರವಲ್ಲ ಬಿಜೆಪಿ ಸರಕಾರಕವೇ ಬಹು ದೊಡ್ಡ ತಲೆ ತೆರಬೇಕಾಗುತ್ತದೆ.

ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com

ಅವಿವೇಕಿ ಜಿಲ್ಲಾಧಿಕಾರಿ ಡಾ.ಆರ್. ವಿಶಾಲ ಹಾಗೂ ...ರ್ಯಾಧಿಕಾರಿ ಧೋರಣೆಯ ಜಿಲ್ಲಾ ಪೋಲಿಸ್ ವರಿಷ್ಠಾಧಿ...ರಿ ಪದ್ಮನಯನ ಅವರಿಂದ ಇಡೀ ಗುಲಬರ್ಗಾ ಜಿಲ್ಲೆಯಲ್ಲಿ ...ನಾರ್ಕಿ ತಾಂಡವವಾಡುತ್ತಿದೆ. ಜಿಲ್ಲೆಯಲ್ಲಿ ಈಗ ಹಾಡು ...ಗಲೇ ಅಂಗಡಿ ಮುಂಗಟ್ಟುಗಳ ಬಾಗಿಲು ಮುರಿದು ...ವು ಮಾಡುವುದು ಸಾಮಾನ್ಯವಾಗಿವೆ. ಅಲ್ಲಲ್ಲಿ ಕೊಲೆಗಳೂ ...ಡೆಯುತ್ತಿವೆ. ಕೊಲೆಗಾರರನ್ನು ಬಂಧಿಸಿ ಜೈಲಿಗೆ ...ಟ್ಟಬೇಕಾದ ಪೊಲೀಸ್ ವರಿಷ್ಠಾಧಿಕಾರಿ ಪದ್ಮನಯನ ...ಗೂ ಅಡಿಷನಲ್ ಎಸ್ಪಿ ಕಚೇರಿಗಳಲ್ಲಿ ಕೊಲೆಗಡುಕರು ...ಾಯಿಸುತ್ತ ನಿಂತಿರುವ ದೃಶ್ಯ ಬೆಚ್ಚಬೀಳಿಸುತ್ತದೆ.

ವಿಚಿತ್ರವೆಂಥದೆಂದರೆ ಇದೇ ಪೊಲೀಸ್ ವರಿಷ್ಠಾಧಿ...ರಿಯು ಶಾಂತವಾಗಿ ಚಳವಳಿ ನಡೆಸುತ್ತಿರುವವರ ಮೇಲೆ ...ಂಬಿಯ ಕೇಸ್ ಹೆಟ್ಟಿ ಅವರನ್ನು ಜೇಲಿಗೆ ಅಟ್ಟುತ್ತಿದ್ದಾನೆ. ...ವರ ಮೇಲೆ ಹಿಂಗ್ಗಾ ಮುಗ್ಗಾ ಪೊಲೀಸರನ್ನು ಛೂಬಿಟ್ಟು ...ರಿಯ ಪೆಟ್ಟನ್ನು ಕೊಡುತ್ತಿದ್ದಾನೆ. ಚಳವಳಿಗಾರರನ್ನಂತೂ ...ರಾಣ ಮಾಡಲೇಬೇಕೆಂದು ಪಣತೊಟ್ಟಿರುವ ಗುಲ್ಬರ್ಗಾ ...ಾಧಿಕಾರಿ ಆರ್. ವಿಶಾಲ ಅಂತೂ ತನ್ನ ಮೂಗಿನ ...ವಕ್ಕೆ ಯೋಚಿಸುತ್ತ ಸರಕಾರದ ವಿರುದ್ಧ ಚಳವಳಿಗೆ ...ಡಗಿರುವವರು ತನ್ನ ವಿರುದ್ಧವೇ ಚಳವಳಿ ನಡೆಸುತ್ತಿದ್ದಾರೆ ...ಬಷ್ಟು ಎಬಡತನದಿಂದ ವರ್ತಿಸುತ್ತಿದ್ದಾನೆ. ಇಷ್ಟಕ್ಕೂ ...ಮ್ಮನಾಗದೆ ಪೊಲೀಸ್ ಬಲ ಪ್ರಯೋಗಿಸಿ ಅವರ ...ಲೆ ಗೂಂಡಾ ಕೇಸ್ ದಾಖಲು ಮಾಡಿ, ಅವರೆಲ್ಲರಿಗೆ ...ೋಳ ಹಾಕುವ ದಾರ್ಷ್ಟ್ಯವನ್ನು ಪ್ರದರ್ಶಿಸುತ್ತಿದ್ದಾನೆ. ...ಡುಳಿದ ದಲಿತ ಜನಾಂಗದವರಿಗೆ ರಕ್ಷಣೆ ನೀಡಬೇಕಾದ ...ಕಾರ ಅವರನ್ನು ಎಗ್ಗಿಲ್ಲದೆ ಲಾಠಿಯಿಂದ ಹೊಡೆದು, ...ರ್ಜರಿತಗೊಳಿಸಿ, ಬೆಳಗಾಂವ ಜೇಲಿಗೆ ಕಳಿಸಿಬಿಟ್ಟದೆ. ...ಟ್ಟಿನಲ್ಲಿ ಜನರನ್ನು ಹೆದರಿಕೆಯಲ್ಲಿಟ್ಟು ಜಿಲ್ಲಾಡಳಿತ ನಡೆಸ...ಕೆಂದು ಇವರಿಬ್ಬರು ಹೊರಟಿರುವುದು ನಿರ್ಲಜ್ಜೆಯ ...ರಮಾವಧಿಯಾಗಿದೆ.

ಗುಲಬರ್ಗಾ ಮಹಾನಗರ ಪಾಲಿಕೆಯ ಸುಮಾರು ...7 ಜನ ಪೌರ ನೌಕರರು ಕಳೆದ 35 ...ಗಳುಗಳಿಂದ ಸಂಬಳವಿಲ್ಲದೆ ತಮ್ಮ ಕೆಲಸ ...ರ್ವಹಿಸುತ್ತಿದ್ದಾರೆ. ಆದರೆ ಅವರ ದುಡಿತಕ್ಕೆ ...ಕೂಲಿ ಕೊಡಬೇಕಾದ ಸರಕಾರ ಯಾವನೋ ... ಐಎಎಸ್ ಅಧಿಕಾರಿಯ (ಜಾವೇದ ...ರ್) ಮಾತು ಕೇಳಿ ಹಟಕ್ಕೆ ಬಿದ್ದಂತೆ ...ರ್ತಿಸುತ್ತಿದೆ. ಮಹಾನಗರ ಪಾಲಿಕೆಯ ...ಷನರ್ ಜೈನ್ ಮಾತ್ರ ಕಾರ್ಮಿಕರ ದುಡಿತಕ್ಕೆ ...ಸಂಬಳವನ್ನು ಕೊಡಬೇಕು ಎಂದು ಸರಕಾರಕ್ಕೆ ...ಿತವಾಗಿ ವಿನಂತಿಸಿದ್ದರೂ ಅದಕ್ಕೆ ಕವಡೆ ...ನ ಕಿಮ್ಮತ್ತೂ ಸಿಕ್ಕಿಲ್ಲ. ಈ ಕುರಿತು ...ಪಕಾರ್ಮಿಕ ಆಯುಕ್ತರ ನ್ಯಾಯಾಲಯದಲ್ಲಿ ...ಜ್ಯ ಹೂಡಿದ್ದು, ಯಾರನ್ನೂ ಕೆಲಸದಿಂದ ...ದುಹಾಕುವಂತಿಲ್ಲ ಎಂದು ಅದು ಸ್ಪಷ್ಟವಾಗಿ ...ರ್ಪು ನೀಡಿದೆ.


... ಪಾಲಿಕೆಯ ನೌಕರರ ಮುಷ್ಕರ ಇಂದು ... ತಲೆ ಎತ್ತಿದ್ದಲ್ಲ. ಸುಮಾರು ಎರಡುವರೆ ...ರ್ಷಗಳಿಂದಲೂ ಅವರು ನಿರಂತರವಾಗಿ ...ತ್ಯಾಗ್ರಹವನ್ನು ನಡೆಸಿಕೊಂಡು ಬಂದಿದ್ದಾರೆ. ...ವಿನಿಂದ ತಮ್ಮ ಹೊಟ್ಟೆ ಸಾಕಷ್ಟು ...ಮುಳಿಸುತ್ತಿದ್ದರೂ ತಮ್ಮ ಕೈಯ್ಯಲ್ಲಿ ಕಸುವಿಲ್ಲ ...ಬುದನ್ನು ಅರ್ಥಮಾಡಿಕೊಂಡ ಕಾರ್ಮಿಕರು ಶಾಂತವಾಗಿ ... ಚಳವಳಿಯನ್ನು ನಡೆಸಿದ್ದಾರೆ. ತಮ್ಮ ಮಕ್ಕಳು ಶಾಲೆ ...ಯಬೇಕಾದುದು ಬಿಟ್ಟು ಅನಿವಾರ್ಯವಾಗಿ ಬೇರೆಯವರ ...ಗಡಿ ಮುಂಗಟ್ಟುಗಳಲ್ಲಿ ಕೆಲಸ ಮಾಡಿಕೊಂಡು ಸಂಸಾರದ ...ಗ ಹೊತ್ತುಕೊಂಡು ಮುನ್ನಡೆದಿದ್ದಾರೆ ಎಂಬ ...ಕಟವಿದ್ದರೂ ಶಾಂತವಾಗಿ ರಸ್ತಾ ರೋಖೋ ...ರ್ಯಡಿಸಿದ್ದಾರೆ.

... ಆದರೆ ಶಾಂತವಾಗಿ ನಡೆಯುತ್ತಿದ್ದ ಅವರ ಚಳವಳಿಯನ್ನು ...ರ ಕಡೆಗಣಿಸುತ್ತ ಹೊರಟಾಗ ಅನಿವಾರ್ಯವಾಗಿ ...ಪರ ಹೋರಾಟಗಾರ, ಮಾಜಿ ಕಾರ್ಮಿಕ ಸಚಿವ ...ಕೆ. ಕಾಂತಾ ಸರಕಾರದ ನಿರ್ಲಜ್ಜ ಧೋರಣೆಯನ್ನು ...ಡಿಸಿ ಚಳವಳಿಯ ನೇತೃತ್ವವನ್ನು ವಹಿಸಿಕೊಂಡಾರು. ...ಾದರೂ ಸರಕಾರ ಕಣ್ಣು ತೆರೆದಿದ್ದರೆ ಆ ಮಾತು ... ಇತ್ತು. ಆದರೆ ಕಾಂತಾ ಅವರನ್ನು ಕಂಡರೆ ಹಲ್ಲಿ ...ಗಿದಂತಾಡುವ ಪೊಲೀಸ್ ವ(ಅ)ರಿಷ್ಠಾಧಿಕಾರಿ ಪದ್ಮ...ಯನ ಹಾಗೂ ಜಿಲ್ಲಾಧಿಕಾರಿ ವಿಶಾಲ ಸರಕಾರಕ್ಕೆ ತಪ್ಪು ...ಹಿತಿ ನೀಡುತ್ತ ದಿಕ್ಕು ತಪ್ಪಿಸುತ್ತಿದ್ದಾರೆ. ಈ ಭ್ರಷ್ಟ ...ರಿಯ ಮೂಲಕವಾಗಿ ಕಾಂತಾ ಅವರನ್ನು ದಮನಮಾಡಿ ...ರನ್ನು ಮೂಲೆಗೆ ದೂಡಬೇಕೆಂದು ಉದ್ದೇಶಪೂರ್ವಕ ... ಸರ್ಕಾರ ವರ್ತಿಸುತ್ತಿದೆ. ಏಕೆಂದರೆ ಜಿಲ್ಲೆಗೆ ಹತ್ತಾರು ... ಮುಖ್ಯಮಂತ್ರಿ ಯಡಿಯೂರಪ್ಪ ಭೇಟಿ ನೀಡಿದ್ದಾರೆ. ...ಣ ಸವದಿ ಎಂಬ ಉಸ್ತುವಾರಿ ಮಂತ್ರಿಯಂತೂ ...ಗಳು-ಎರಡು ತಿಂಗಳಿಗೊಮ್ಮೆ ಇಲ್ಲಿಗೆ ಭೇಟಿ ನೀಡಿದ್ದಾನೆ. ...ಗಲೂ ಕೂಡ ವಿಷಯದ ಗಂಭೀರತೆಯನ್ನು ...ಬೇಕೆಂದು ಹೊರಟ ಚಳವಳಿಗಾರರನ್ನು ಸುಖಾಸುಮ್ಮನೆ ... ಹಿಡಿದು ಜೈಲಿಗೆ ಕಳುಹಿಸಲಾಗಿತ್ತು. ಸಾರ್ವಜನಿಕ ...ಸ್ವತ್ತಿಗೆ ಭಂಗತಂದ ಆರೋಪದ ಮೇರೆಗೆ ಅವರೆಲ್ಲರ ...ಲೆ ಕೇಸು ಜಡಿದಿದೆ ಯಡ್ಡಿಯ ಚಡ್ಡಿ ಸರ್ಕಾರ.

ನರಸತ್ತ ಜಿಲ್ಲಾ ನಾಯಕರು!

ಎಸ್.ಕೆ.ಕಾಂತಾ ಪೌರಕಾರ್ಮಿಕರಿಗಾಗಿ ಆಮರಣ ಉಪವಾಸ ಸತ್ಯಾಗ್ರಹ ಘೋಷಿಸಿ ಮಹಾನಗರ ಪಾಲಿಕೆಯ ಕಚೇರಿಯ ಮುಂದೆ ಕುಳಿತಾಗ ಅವರೊಂದಿಗೆ ಗುಲ್ಬರ್ಗಾದ ಕೆಲವು ರಾಜಕಾರಣಿಗಳಾದರೂ ಭಾಗವಹಿಸುತ್ತಾರೆ ಎಂಬ ನಂಬಿಕೆ ಇತ್ತು. ಏಕೆಂದರೆ ಕಾಂತಾ ಅವರೊಂದಿಗೆ ಉತ್ತಮ ಸ್ನೇಹ ಇಟ್ಟುಕೊಂಡಿದ್ದ ಸಮಾಜವಾದಿ ಗೆಳೆಯ ಬಿ.ಆರ್.ಪಾಟೀಲ, ವೈಜನಾಥ ಪಾಟೀಲ ತರಹದವರು ಖಂಡಿತ ಸತ್ಯಾಗ್ರಹಕ್ಕೆ ಧುಮುಕುತ್ತಾರೆ ಎಂದೇ ಹಲವರ ಅಭಿಪ್ರಾಯವಾಗಿತ್ತು.

ನಿರಾಶೆಯ ಸಂಗತಿಯೆಂದರೆ ಬಿ.ಆರ್. ಪಾಟೀಲ ಬರೀ ಪತ್ರಿಕೆಯ ಹೇಳಿಕೆ ನೀಡಿ ಗಪ್‌ಚುಪ್ ಕುಳಿತುಕೊಂಡರು. ವೈಜನಾಥ ಪಾಟೀಲ ಎಂಬ ಸ-ಮಾಜವಾದಿಯಂತೂ ಕಾಂತಾರ ಹತ್ತಿರಕ್ಕೂ ಸುಳಿಯಲಿಲ್ಲ. ಆದರೆ ಮಾಜಿ ಮಂತ್ರಿ ಧರ್ಮಸಿಂಗ್ ಆದರೂ ನಾಲ್ಕೆಂಟು ಸಲ ಮುಖ್ಯಮಂತ್ರಿಗಳಿಗೆ ಫೋನ್ ಮಾಡಿ ಪೌರಕಾರ್ಮಿಕರ ಬೇಡಿಕೆಗಳು ನ್ಯಾಯಯುತವಾಗಿವೆ. ಅವನ್ನು ಬೇಗ ನೆರವೇರಿಸಿ ಎಂದು ವಿನಂತಿಸಿದರು.



ರೇವುನಾ...

ಆಶ್ಚರ್ಯದ ಸಂಗತಿಯೆಂದರೆ ಕಾಂತಾ ಅವರು ಎಂದಿನಿಂದಲೂ ಇರುವ ಜೆಡಿಎಸ್ ಮುಖಂಡರಾದ ಮಾಜಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷ ಶಂಕರಣ್ಣ ವಣಿಕಿಹಾಳ ಸತ್ಯಾಗ್ರಹ ಸ್ಥಳಕ್ಕೆ ಬಂದಂತೆ ಮಾಡಿ ಗಾಯಬ್ ಆದದ್ದು.


ಬಿಜೆಪಿಯ ಚೆಡ್ಡಿಗಳಲ್ಲಿ ಕಾಂತಾರ ನಿರಶನ ಮೈಚಳಿ ಉಂಟುಮಾಡಿದ್ದರೂ ತಮ್ಮ ಮುಖ್ಯಮಂತ್ರಿಗಳಿಗೆ ಪೌರಕಾರ್ಮಿಕರ ಸಮಸ್ಯೆಗಳ ಬಗೆಗೆ ಸರಿಯಾಗಿ ಮಾಹಿತಿ ನೀಡಲಿಲ್ಲ. ಬದಲಾಗಿ ಬೆಂಗಳೂರಿನಿಂದ ಪೂಜಾ ಗಾಂಧಿ ಎಂಬ ಚಿತ್ರನಟಿಯನ್ನು ಕರೆಯಿಸಿ ಸಭೆಗಳಲ್ಲಿ ವಿಜೃಂಭಿಸುತ್ತಿದ್ದರು. ರೇವುನಾಯಕ ಬೆಳಮಗಿ ಕಾಂತಾ ಅವರನ್ನು ಭೇಟಿಯಾದರಾದರೂ "ನನಗೇನು ಗೊತ್ತಾಗುತ್ತಿಲ್ಲ. ನಿಮ್ಮೆಲ್ಲರ ಆಶೀರ್ವಾದದಿಂದ ಮಂತ್ರಿಯಾಗಿದ್ದೇನೆ. ನಿಮ್ಮ ಕೃಪೆಯೂ ನನ್ನ ಮೇಲೆ ಇರಲಿ" ಎಂಬ ಎಬಡತನ ತೋರಿಸಿ ಜಾರಿಕೊಂಡರು.

ಶಶೀಲ ನಮೋಶಿ ಎಂಬ ಎಚ್‌ಕೆಡಿಬಿ ಅಧ್ಯಕ್ಷ ಕಾಂತಾ ಹತ್ತಿರ ಸುಳಿಯುತ್ತಲೆ ರೊಚ್ಚಿಗೆದ್ದ ಜನ ಆತನನ್ನು ತರಾಟೆಗೆ ತೆಗೆದುಕೊಂಡರು. "ಪೌರಕಾರ್ಮಿಕರ ಸಂಬಳದ ವಿಷಯದಲ್ಲಿ ಏನೋ ಕಾನೂನು ತೊಡಕಿದೆ" ಎಂದು ಆತ ಹೇಳುತ್ತಿರುವಂತೆ ಅಲ್ಲೆ ಕುಳಿತಿದ್ದ ಯಾರೋ ಒಬ್ಬರು "ನಿಮ್ಮ ಸಿ.ಎಂ. ದಿನನಿತ್ಯ ಮಠಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಘೋಷಿಸಿ ಬರುತ್ತಾನಲ್ಲ?! ಅದಕ್ಕೆ ಯಾವುದೆ ಕಾನೂನು ತೊಡಕಾಗುವುದಿಲ್ಲವೆ?" ಎಂದು ಕೇಳಿದಾಗ ಆತನ ಮುಖ ಊದಿಕೊಂಡಿತ್ತು.

ಗುಲಬರ್ಗಾ ಜಿಲ್ಲೆ ಇಂಥ ಹೇತ್ಲಾಂಡಿ ರಾಜಕಾರಣಿಗಳನ್ನು ಹೊಂದಿರುವುದರಿಂದಲೇ ಅದಿನ್ನೂ ಈ ಪರಿಸ್ಥಿತಿಯಲ್ಲಿದೆ.

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ಆತ್ಮವಿಮರ್ಶೆಯೂ ಬೇಡವೇ?



▶▶ 2

ಹೀಗಾಗಿಯೇ ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡುತ್ತಾ ನಿಂತ ಕಡೆಯೇ ನಿಂತಿದ್ದಾರೆ. ಹೀಗಾಗಿ ಭಾರತೀಯ ಮಾರ್ಕ್ಸ್‌ವಾದಿ ಸಮಾಜವಾದ ಮತ್ತೊಂದು ನಿರ್ದಾಕ್ಷಿಣ್ಯ ಪೋಸ್ಟ್ ಮಾರ್ಟೆಮ್ ಅನ್ನು ಕೇಳುತ್ತಿದೆ. ಈ ಕಾಲ ಮತ್ತು ಸಂದರ್ಭದ ಸವಾಲುಗಳಿಗೆ ಸೃಜನಶೀಲವಾಗಿ ಮಾರ್ಕ್ಸ್‌ವಾದವನ್ನು ಅನ್ವಯಿಸುತ್ತಾ ಬೆಳೆಸಲೇಬೇಕಾದ ಸಂಕ್ರಮಣ ಘಟ್ಟದ ಸವಾಲನ್ನು ಮಾರ್ಕ್ಸ್‌ವಾದಿಗಳು ಎದುರಿಸುತ್ತಿದ್ದಾರೆ.

ಆದರೆ ಇದು ಕೇವಲ ಮಾರ್ಕ್ಸ್‌ವಾದಿ ಸಮಾಜವಾದಿಗಳಿಗೆ ಮಾತ್ರ ಅನ್ವಯಿಸುವ ತಾತ್ಪರ್ಯವೇನಲ್ಲ. ಯಾವುದೇ ಸಾಮಾಜಿಕ ಚಳವಳಿ ನಿರ್ದಾಕ್ಷಿಣ್ಯ ಆತ್ಮವಿಮರ್ಶೆಯನ್ನೂ ಮತ್ತು ವೈಫಲ್ಯಗಳ ಪೋಸ್ಟ್ ಮಾರ್ಟೆಮ್ ಅನ್ನು ಮಾಡಿಕೊಳ್ಳದಿದ್ದರೆ ಎದುರಿಸಲೇಬೇಕಾದದ್ದು ಜಡತೆ. ಸ್ಥಗಿತತೆ. ಅದರ ನಂತರದ ಹಂತ ಕೊಳೆಯುವುದು. ಇದರ ಅಭಿವ್ಯಕ್ತಿ ಆತ್ಮ ವಿಮರ್ಶೆಯ ನಿರಾಕರಣ. ಆತ್ಮ ವೈಭವೀಕರಣ. ಇದನ್ನು ಸ್ಥಾವರಗೊಂಡ ಕಮ್ಯುನಿಸ್ಟರೂ ಮಾಡುತ್ತಾರೆ. ಆಚರಣೆಯೊಪ್ಪದ ಲೋಹಿಯಾವಾದಿಗಳೂ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲೇ ಲೋಹಿಯಾರವರ ಜನ್ಮಶತಮಾನೋತ್ಸವವನ್ನು ಲೋಹಿಯಾವಾದಿಗಳು - ಅದರಲ್ಲೂ ಕರ್ನಾಟಕದ ಲೋಹಿಯಾವಾದಿಗಳು - ಆಚರಿಸುತ್ತಿರುವ ರೀತಿಯನ್ನು ವಿಶ್ಲೇಷಿಸಿದರೆ ನಿರಾಶೆಯುಂಟಾಗುತ್ತಿದೆ. ಲೋಹಿಯಾ ಚಳವಳಿ ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ಏಳನ್ನು ಮತ್ತು ಆಳವಾದ ಬೀಳನ್ನು ಕಂಡಿದೆ. ಕಿಶನ್ ಪಾಟ್ನಾಯಕರಂಥ ಧೀಮಂತ ಸಮಾಜವಾದಿಗಳಿದ್ದಂತೆ ಮಹಾನ್ ತತ್ವ ಭ್ರಷ್ಟ ಅವಕಾಶವಾದಿಗಳು ಸಮಾಜವಾದಿಗಳ ಹೆಸರಲ್ಲಿ ಚಾಲ್ತಿಯಲ್ಲಿದ್ದಾರೆ. ಪಾಟ್ನಾಯಕ್‌ರಂಥ ಸಮಾಜವಾದಿಗಳು ಜೀವನದುದ್ದಕ್ಕೂ ರಾಜಿಯಿಲ್ಲದೇ ಹೋರಾಡಿದ್ದಾರೆ. ಕೆಲವರು ಅವಕಾಶ ಸಿಕ್ಕೊಡನೆ ಬಲಪಂಥೀಯರ ಬಣಕ್ಕೆ ಜಿಗಿದಿದ್ದಾರೆ. ರಾಷ್ಟ್ರಮಟ್ಟದಲ್ಲೂ ಲೋಹಿಯಾವಾದಿಗಳಲ್ಲಿ ಆದಷ್ಟು ಛಿದ್ರೀಕರಣ ಪ್ರಾಯಶಃ ಕಮ್ಯುನಿಸ್ಟ್ ಚಳವಳಿಯಲ್ಲಿ ಮಾತ್ರ ಆಗಿರಬೇಕು. ಆದರೆ ಲೋಹಿಯಾವಾದಿಗಳು ಮಾಡಿದಷ್ಟು ರಾಜಕೀಯ ಮತ್ತು ಸೈದ್ಧಾಂತಿಕ "ರಾಜಿ"ಕಾರಣ ಯಾವಬಗೆಯ ಕಮ್ಯುನಿಸ್ಟರೂ ಮಾಡಿಕೊಳ್ಳಲಿಲ್ಲವೆಂದೇ ಹೇಳಬೇಕು. ಲೋಹಿಯಾವಾದ ಕೆಲವು ನಿರ್ದಿಷ್ಟ ವ್ಯಕ್ತಿಗಳಲ್ಲಿ ವ್ಯಕ್ತಿಗತ ನೈತಿಕತೆಯಲ್ಲಿ ಪ್ರಜ್ವಲಿಸಿದಾದರೂ ಒಂದು ಚಳವಳಿಯಾಗಿ ಬೆಳಗಿದ್ದು ಕಡಿಮೆ. ಒಬ್ಬ ರಾಜಕೀಯ ನೇತಾರನ ನೆನಪು ವಾಸ್ತವವಾಗಿ ಇಂಥಾ ಎಲ್ಲದರ ಮುಕ್ತ ಆತ್ಮವಿಮರ್ಶೆಯ ಸಂದರ್ಭವಾಗಬೇಕು.

ದೇ ನಿರೀಕ್ಷೆಯನ್ನು ಇಟ್ಟುಕೊಂಡು ನಾನು ಕಳೆದ ವರ್ಷದಿಂದ ನಡೆಯುತ್ತಾ ಬಂದಿರುವ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಈ ಸಂದರ್ಭದಲ್ಲಿ ಕರ್ನಾಟಕದ ಪ್ರಮುಖ ಸಮಾಜವಾದಿಗಳು ಮಾಡಿದ ಭಾಷಣಗಳನ್ನು ಕೇಳಿದ್ದೇನೆ ಮತ್ತು ಬರೆದ ಬಹುಪಾಲು ಲೇಖನಗಳನ್ನು ಓದಿದ್ದೇನೆ. ಆದರೆ ವಿಷಾದದ ಸಂಗತಿಯೆಂದರೆ ಮಾರ್ಕ್ಸ್‌ವಾದಿಗಳಿಗೆ ಆತ್ಮವಿಮರ್ಶೆಯಿಲ್ಲವೆಂದು ಹೀಗಳೆಯುವ ಮತ್ತು ಭೂತಕಾಲದಲ್ಲಿ ಮಾತ್ರ ಸಂಭ್ರಮಿಸುತ್ತಾರೆಂದು ಕೆಲವೊಮ್ಮೆ ಸಕಾರಣವಾಗಿ ಟೀಕಿಸುವ ಲೋಹಿಯಾವಾದಿಗಳು ಮಾತ್ರ ಇಲ್ಲೆಲ್ಲೂ ತಮ್ಮನ್ನು ಮತ್ತು ತಮ್ಮ ಸಿದ್ಧಾಂತವನ್ನು ಆತ್ಮವಿಮರ್ಶೆಯ ನಿಕಷಕ್ಕೆ ಒಡ್ಡಿಕೊಳ್ಳಲೇ ಇಲ್ಲ.

"ಸಮಾಜವಾದಕ್ಕೆ 75" ತುಂಬಿದಾಗ ಪ್ರಜಾವಾಣಿಯಲ್ಲಿ ಬಾಪೂ ಹೆದ್ದೂರ ಶೆಟ್ಟಿಯವರು ಒಂದು ಸುದೀರ್ಘ ಲೇಖನ ಬರೆದಿದ್ದರು. ಬೆಂಗಳೂರಿನ ಸೆನೆಟ್ ಹಾಲಿನಲ್ಲಿ ಒಂದಿಡೀ ದಿನದ ವಿಚಾರ ಸಂಕಿರಣವೂ ನಡೆಯಿತು. ಎರಡೂ ಕಡೆ ಇದ್ದದ್ದು ಸಾಧನೆಯ ಭಾವನೆಯೇ ಹೊರತು ಸಾಸಿವೆ ಕಾಳಿನಷ್ಟೂ ಆತ್ಮವಿಮರ್ಶೆಯಿರಲಿಲ್ಲ. ಬಾಪೂ ಹೆದ್ದೂರ ಶೆಟ್ಟಿಯವರ ಲೇಖನದಲ್ಲಂತೂ ಹೆಚ್ಚೂಕಡಿಮೆ ಭಾರತ ಈಗಲೂ ಸಮಾಜವಾದಿ ಪಥದಲ್ಲಿದೆ ಎಂಬ ದಾರ್ಷ್ಟ್ಯದ ವಿಶ್ಲೇಷಣೆಯಿತ್ತು. ಈ ದೇಶ ಜಾಗತೀಕರಣದ ದಾಳಿಗೆ ಸಿಕ್ಕಿ ಗಳಿಸಿದ್ದ ಎಲ್ಲವನ್ನೂ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ 1934ರಲ್ಲಿ ತಾವು ಅರ್ಪಿಸಿದ ಸಮಾಜವಾದಿ ಪ್ರಣಾಳಿಕೆಯನ್ನೇ ನೆಹರೂ ಆಚರಣೆಗೆ ತಂದರೆಂದೂ, ಈಗಲೂ ಭಾರತ ತಲೆ ಎತ್ತಿ ನಿಂತಿರುವುದಕ್ಕೇ ತಾವೇ ಕಾರಣವೆಂಬ ಹುಂಬ ಹೆಗ್ಗಳಿಕೆಯೇ ಆ ಲೇಖನದ ಮತ್ತು ಆ ಸಮಾರಂಭದ ಪ್ರಮುಖ ಧ್ವನಿಯಾಗಿತ್ತು. ಮೊನೆ ಮಾರ್ಚ್ 23ರ ಸಂದರ್ಭದಲ್ಲಿ ಮತ್ತೆ ಗಣಪತಿಯಪ್ಪ ಹಾಗೂ ಡಾ. ನಟರಾಜ್ ಹುಳಿಯಾರ್‌ರವರು ಪ್ರಜಾವಾಣಿಯಲ್ಲಿ ಒಂದಿಡೀ ಪುಟದಷ್ಟು ಲೇಖನವನ್ನು ಬರೆದರು. ಇದರಲ್ಲೂ ಚರಿತ್ರೆಯ ಸಂಭ್ರಮದ ನೆನಪುಗಳು ಮತ್ತು ಲೋಹಿಯಾವಾದದ ಪ್ರಸ್ತುತತೆಗಳೇ ಪ್ರಮುಖವಾಗಿತ್ತೇ ವಿನಃ ಪ್ರಸ್ತುತ ಸಮಾಜವಾದಿ ಚಳವಳಿಯ ವೈಫಲ್ಯವನ್ನು ಗುರುತಿಸುವ ಸಾಹಸವನ್ನೇ ಈ ಚಿಂತಕರು ಮಾಡಿರಲಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಕಳೆದ ಮೇ 2ರಂದು ನಡೆದ ಲೋಹಿಯಾ ಜನ್ಮಶತಮಾನೋತ್ಸವದ ಅದ್ದೂರಿ ಸಮಾರಂಭದಲ್ಲಿ ಭಾಗವಹಿಸಿದ್ದ ಈ ನಾಡಿನ ಅತ್ಯಂತ ಪ್ರಮುಖ ಸಮಾಜವಾದಿಗಳಾದ ಯು.ಆರ್. ಅನಂತಮೂರ್ತಿ, ರವಿವರ್ಮ ಕುಮಾರ್, ನಟರಾಜ್ ಹುಳಿಯಾರ್‌ರಂತವರು ಒಕ್ಕೊರಲಿಂದ ನೀಡಿದ ಘೋಷಣೆಯೇನೆಂದರೆ "ಸಮಾಜವಾದದ ವೈಫಲ್ಯದ ಪೋಸ್ಟ್ ಮಾರ್ಟೆಮ್ ಅಗತ್ಯವಿಲ್ಲ"!

ಹೀಗೆ ಆತ್ಮವಿಮರ್ಶೆಯನ್ನೇ ಸೈದ್ಧಾಂತಿಕವಾಗಿ ನಿರಾಕರಿಸಿದಮೇಲೆ ಅಂಥಾ ಸಿದ್ಧಾಂತ ಒಂದು ಚಳವಳಿಯಾಗುವುದು ಹೇಗೆ ಸಾಧ್ಯ? ಹಿಂದುತ್ವ ಮತ್ತು ಜಾಗತೀಕರಣದ ಜಂಟಿ ಆಕ್ರಮಣಗಳು ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಸಾರಭೂತವಾದ ವ್ಯತ್ಯಾಸಗಳನ್ನು ಕಡಿಮೆ ಮಾಡುತ್ತಿರುವ ಈ ಹೊತ್ತಿನಲ್ಲಿ ಈ ಲೋಹಿಯಾವಾದಿ ಮುಖಂಡರು ಸಮಾಜವಾದವನ್ನು ಬೆಳೆಸಲು ಹಾಕಿಕೊಂಡ ಕಾರ್ಯಕ್ರಮವಾದರೂ ಏನು? ಪ್ರತ್ಯೇಕ ಸಮಾಜವಾದಿ ಚಳವಳಿ ಕಟ್ಟುವುದು ಅಸಾಧ್ಯ ಮತ್ತು ಅನಗತ್ಯ. ಹೀಗಾಗಿ ಬಿಜೆಪಿಯೇತರ ವಿರೋಧ ಪಕ್ಷಗಳಲ್ಲಿ ಒಂದು ಸಮಾಜವಾದಿ ಬ್ಲಾಕ್ ಅನ್ನು ಕಟ್ಟಲು ಪ್ರಯತ್ನಿಸುವುದು! ಇದು ತೋರಿಕೆಗೇ ಕಾಣುವಂತೆ ಒಂದು ಡಿಫೀಟಿಸ್ಟ್ ಅಜೆಂಡಾ!

ಅಂದಿನ ಎಲ್ಲರ ಭಾಷಣಗಳಲ್ಲೂ ಇತರ ಸಿದ್ಧಾಂತಗಳ ಅನುಚಿತ ವಿಮರ್ಶೆಗಳು ರಾರಾಜಿಸುತ್ತಿದ್ದವು. ಅದೇರೀತಿ ಚಳವಳಿಗಳು ಮಾಡಿರುವ ಎಲ್ಲಾ ಸಾಧನೆಗಳು ಕೇವಲ ಲೋಹಿಯಾವಾದಿಗಳ ಪ್ರಯತ್ನದಿಂದಲೇ ಸಂಭವಿಸಿತೆಂಬ ಅಪ್ರಾಮಾಣಿಕ ಹೆಗ್ಗಳಿಕೆಗಳು ಇಣುಕುತ್ತಿದ್ದವು. ಉದಾಹರಣೆಗೆ ಈ ದೇಶದಲ್ಲಿ ಭೂ ಸುಧಾರಣಾ ನೀತಿಗಳು ಜಾರಿಗೆ ಬರಲು ಕಮ್ಯುನಿಸ್ಟ್ ಚಳವಳಿಗಳದ್ದೂ ಪ್ರಮುಖ ಪಾತ್ರವಿದೆ. ಅದೇ ರೀತಿ ಕರ್ನಾಟಕದಲ್ಲಿ ದೇವರಾಜ್ ಅರಸ್ ತಂದ ಭೂ ಸುಧಾರಣೆ ನೀತಿಯು ಅದು ಜಾರಿಯಾದ ರೂಪದಲ್ಲಿ ಬರಲು ಕಾರಣವಾದದ್ದು ಕಮ್ಯುನಿಸ್ಟ್ ಕಕ್ಕಿಲ್ಲಾಯ ನೇತೃತ್ವದ ಸದನ ಸಮಿತಿ ಎಂಬುದನ್ನು ಯಾರೂ ಜ್ಞಾಪಿಸಿಕೊಳ್ಳಲಿಲ್ಲ. ಹಾಗೆಯೇ ಆಂಧ್ರ, ಪ. ಬಂಗಾಳ, ಕೇರಳ, ಇನ್ನಿತ್ಯಾದಿ ಕಡೆಗಳಲ್ಲಿ ಭೂಸುಧಾರಣೆ ನೀತಿಗಳು ಅನುಷ್ಠಾನಕ್ಕೆ ಬಂದದ್ದೇ ಕಮ್ಯುನಿಸ್ಟ್ ಚಳವಳಿಗಳಿಂದ ಎಂಬುದನ್ನು ಕೇರಳವನ್ನೂ ಚೆನ್ನಾಗಿ ಬಲ್ಲ ಅನಂತಮೂರ್ತಿಗಳೂ ಒಮ್ಮೆಯೂ ನೆನಪು ಮಾಡಿಕೊಳ್ಳಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇಂದು ಛಿದ್ರಛಿದ್ರವಾಗಿರುವ ಸಮಾಜವಾದಿ ಚಳವಳಿ ಮತ್ತು ಶತ್ರುಗಳೊಂದಿಗೆ ರಾಜಿಯಾದ ಚಳವಳಿಯ ನಾಯಕರ ಬಗ್ಗೆ ವಿಮರ್ಶೆಯಿರಲಿ ಅಂದು ಅವರೇ ಸಮಾರಂಭದ ಕೇಂದ್ರಬಿಂದುವಾಗಿದ್ದದ್ದು ಅಶ್ಲೀಲವೇ ಆಗಿತ್ತು.

ಅನಂತಮೂರ್ತಿಗಳಂತೂ ಚಳವಳಿಯಾಗಿ ನಾವು ಸಾಧನೆ ಮಾಡದಿದ್ದರೂ ಇಂದು ನಾಡಿನಲ್ಲಿ ನಡೆಯುತ್ತಿರುವ ಎಲ್ಲಾ ಚಳವಳಿಗಳ ಹಿಂದೆ ಲೋಹಿಯಾ ಸ್ಫೂರ್ತಿ ಪಡೆದ ವ್ಯಕ್ತಿಗಳಿದ್ದಾರೆ ಎಂಬುದೇ ಲೋಹಿಯಾವಾದದ ಯಶಸ್ಸಿಗೆ ದ್ಯೋತಕ ಎಂದು ಘೋಷಿಸಿಬಿಟ್ಟರು! ಕರ್ನಾಟಕದಲ್ಲಿ ನಡೆದ ಭಾಷಾ ಚಳವಳಿ, ರೈತ ಚಳವಳಿ, ದಲಿತ ಚಳವಳಿಯ ನಾಯಕರೆಲ್ಲರೂ ಲೋಹಿಯಾವಾದಿಗಳೇ ಎಂದು ಭೂತಕಾಲದ ಸಾಧನೆಗಳಲ್ಲಿ ಸಂಭ್ರಮಪಟ್ಟ ಈ ನಾಯಕರು ಇಂದು ಆ ಎಲ್ಲಾ ಚಳವಳಿಗಳು ಛಿದ್ರವಾಗುವುದಕ್ಕೂ ಲೋಹಿಯಾವಾದದ ಪಾಲೆಷ್ಟು ಮತ್ತು ಲೋಹಿಯಾವಾದಿಗಳ ಪಾಲೆಷ್ಟು ಎಂಬ ಸಣ್ಣ ಪ್ರಶ್ನೆಯನ್ನೂ ಹಾಕಿಕೊಳ್ಳಲಿಲ್ಲ. ಕಮ್ಯುನಿಸ್ಟ್ ಚಳವಳಿಯ ವಿಮರ್ಶೆಗೆ ಬಳಸುವ ಯಾವ ಹತಾರವನ್ನು ಈ ನಾಯಕರು ಲೋಹಿಯಾವಾದಿ ಚಳವಳಿಯ ವಿಮರ್ಶೆಗೆ ಬಳಸದೇ ಇದ್ದದ್ದು ರಾಜಕೀಯ ಭ್ರಷ್ಟತನ ಮಾತ್ರವಲ್ಲ, ತತ್ವಭ್ರಷ್ಟತನವೂ ಹೌದಲ್ಲವೇ? ಸಾರಾಂಶದಲ್ಲಿ ಇದು ಲೋಹಿಯಾವಾದಕ್ಕೆ ಇಂದಿನ ಕಾಲ ಮತ್ತು ಸಂದರ್ಭಕ್ಕೆ ತಕ್ಕಂತೆ ಮರುಹುಟ್ಟನ್ನು ಕೊಡುವ ಅಜೆಂಡಾವೆ ಕರ್ನಾಟಕದ ಲೋಹಿಯಾವಾದಿಗಳಿಗಿಲ್ಲವೇನೋ ಎಂಬ ಅನುಮಾನವನ್ನೂ ಮೂಡಿಸುತ್ತಿತ್ತು.

ಎಲ್ಲಕ್ಕಿಂತ ಹೆಚ್ಚಾಗಿ ಗತದ ಸಂಭ್ರಮವು ವರ್ತಮಾನದಲ್ಲಿ ಹುಟ್ಟುಹಾಕುವ ವೈರುಧ್ಯವನ್ನು ಅರ್ಥಮಾಡಿಕೊಳ್ಳದಷ್ಟರ ಮಟ್ಟಿಗೆ ಈ ಮಹಾನ್ ಲೋಹಿಯಾವಾದಿಗಳನ್ನು ಕುರುಡರನ್ನಾಗಿ ಮಾಡಿತ್ತು ಎಂಬುದಕ್ಕೆ ಈ ಕೆಲವು ಉದಾಹರಣೆಗಳೇ ಸಾಕು.

ಮೊದಲನೆಯದಾಗಿ ಲೋಹಿಯಾವಾದವು ಪರ್ಯಾಯ ನಾಗರಿಕ ದರ್ಶನವನ್ನು ನೀಡಿತು. ನೆಹರೂವಾದಿ ಮತ್ತು ಕಮ್ಯುನಿಸ್ಟ್ ಯೋಜನೆಗಳೆರಡೂ ಆಧುನಿಕತೆಯೆಡೆಗೇ ಮುಖಮಾಡಿದ ಸಿದ್ಧಾಂತವಾದ್ದರಿಂದ ನಿಜವಾದ ಪರ್ಯಾಯ ಗಾಂಧಿವಾದದ ಸ್ಪರ್ಶವಿದ್ದ ಲೋಹಿಯಾವಾದವೇ ಹೊರತು ಕಮ್ಯುನಿಸಮ್ಮಲ್ಲ ಎಂದು ಅನಂತಮೂರ್ತಿಗಳಾದಿಯಾಗಿ ದೇಶದ ಎಲ್ಲಾ ಲೋಹಿಯಾವಾದಿಗಳು ಹೇಳಿಕೊಳ್ಳುತ್ತಾರೆ ಹಾಗೂ ಸ್ವಾತಂತ್ರ್ಯಾನಂತರ ಗಾಂಧಿ-ಲೋಹಿಯಾ ಮಾದರಿ ಅಭಿವೃದ್ಧಿಯನ್ನು ನಿರಾಕರಿಸಿ ನೆಹರು ಮಾದರಿ ಬಂಡವಾಳಶಾಹಿ ಅಧುನಿಕತೆಯನ್ನು ಅಪ್ಪಿಕೊಂಡಿದ್ದೇ ಭಾರತದ ಇಂದಿನ ಎಲ್ಲಾ ದುರಂತಗಳಿಗೂ ಕಾರಣವೆಂದು ವಿಶ್ಲೇಷಿಸುತ್ತಾರೆ. ಆದರೆ ಅದೇ ಉಸಿರಿನಲ್ಲಿ ಭಾರತ 1934ರಲ್ಲಿ ಸಮಾಜವಾದಿಗಳು ಹಾಕಿಕೊಟ್ಟ ಮಾರ್ಗಸೂಚಿಯಂತೆ ನಡೆದುಕೊಂಡಿದ್ದರಿಂದಲೇ ಇಂದು ತಲೆ ಎತ್ತಿ ನಿಂತಿದೆ ಎಂದೂ ವಾದಿಸುತ್ತಾರೆ!! ಎರಡು ತದ್ವಿರುದ್ಧ ಸಂಗತಿಗಳು ಏಕಕಾಲದಲ್ಲಿ ಹೇಗೆ ಸಂಭವಿಸಲು ಸಾಧ್ಯ?


ಕಮ್ಯುನಿಸಮ್ಮನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ವಚನ ಮಾಡುವ ಅನಂತಮೂರ್ತಿಗಳಂಥ ಲೋಹಿಯಾವಾದಿಗಳು ಕಮ್ಯುನಿಸಮ್ಮಿನ ಆಚರಣೆಯಲ್ಲಿ ಸ್ಟಾಲಿನ್‌ನ ರಷ್ಯಾಗೂ ಮಾವೋನ ಚೀನಾಗೂ ಅಜಗಜಾಂತರ ವ್ಯತ್ಯಾಸವಿದ್ದದ್ದನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುತ್ತಾರೆ. ಎಲ್ಲಾ ಕಮ್ಯುನಿಸ್ಟರು ಬಂಡವಾಳಶಾಹಿ ಆಧುನಿಕತೆಯ ಪ್ರತಿಪಾದಕರೆಂದೇ ವಾದಿಸುತ್ತಾರೆ. ಆದರೆ ಲೋಹಿಯಾಗಿಂತ ಎಷ್ಟೋ ಮೊದಲು ಚೀನಾದಲ್ಲಿ ಮಾವೋ ನೇತೃತ್ವದಲ್ಲಿ ಪರ್ಯಾಯ ನಾಗರಿಕತೆಯ ಮತ್ತು ಹೊಸ ಮನುಷ್ಯನ ಹುಟ್ಟಿಗೆ ನಡೆದ ಮಹಾನ್ ಪ್ರಯತ್ನವನ್ನು ಬಹಳ ಸುಲಭವಾಗಿ ಹೀಯಾಳಿಸುತ್ತಾರೆ. ಅದು ಮಹಾನ್ ವೈಫಲ್ಯವನ್ನು ಕಂಡಿದ್ದು ನಿಜ. ಆದರೆ ಗಾಂಧೀ ಮತ್ತು ನೆಹರೂರವರ ಅಭಿವೃದ್ಧಿ ಮೀಮಾಂಸೆಯಲ್ಲಿ ಭಿನ್ನತೆಯನ್ನು ಕಾಣಬಲ್ಲ ಈ ಬುದ್ಧಿಜೀವಿಗಳು ಮಾವೋನ ಅಭಿವೃದ್ಧಿ ಮೀಮಾಂಸೆಗೂ ಮತ್ತು ಇಂದಿನ ಬಂಡವಾಳಶಾಹಿ ಚೀನಾದ ಜನಕ ಡೆಂಗ್-ಶೋ-ಪೆಂಗ್‌ನ ಅಭಿವೃದ್ಧಿ ಮೀಮಾಂಸೆಗೂ ಇದ್ದ ವ್ಯತ್ಯಾಸಗಳನ್ನು ಉದ್ದೇಶಪೂರ್ವಕ ವಾಗಿ ಏಕೆ ಮುಚ್ಚಿಡುತ್ತಾರೆ?

ಅಂದಿನ ಸಮಾರಂಭದಲ್ಲಿ ಮತ್ತೊಬ್ಬ ಲೋಹಿಯಾವಾದಿ ಚಿಂತಕ ರವಿವರ್ಮ ಕುಮಾರ್‌ರವರು ಲೋಹಿಯಾವಾದಿಗಳು ವಿರೋಧಪಕ್ಷವಾಗಿ ಮಾತ್ರ ಸಮರ್ಥರು, ಆಳುವಪಕ್ಷವಾಗಿ ಅಲ್ಲ ಎನ್ನುವುದು ಸುಳ್ಳು. ಬಿಹಾರದ ನಿತೀಶ್ ಕುಮಾರ್‌ರನ್ನು ನೋಡಿ ಅವರು ಬಿಹಾರವನ್ನು ಹೇಗೆ ಬದಲಾಯಿಸಿಬಿಟ್ಟದ್ದಾರೆ. ಇಂದು ಬಿಹಾರದ ಅಭಿವೃದ್ಧಿ ದರ ಶೇ.ಶಿರಷ್ಟಿದೆ. ಯಡಿಯೂರಪ್ಪನವರು ಅನುಸರಿಸುವುದಿದ್ದರೆ ನಿತೀಶ್ ಕುಮಾರ್‌ರನ್ನು ಅನುಸರಿಸಬೇಕು ಎಂದು ಕರೆ ನೀಡಿದರು. ಲೋಹಿಯಾವಾದಿಗಳ ವರ್ಚಸ್ಸನ್ನು ಹೊಗಳುವ ಭರದಲ್ಲಿ ಅವರು ನಿತೀಶ್ ಕುಮಾರರ ಎನ್.ಡಿ.ಎ ಸಖ್ಯವನ್ನೂ ಅದರ ಹಿಂದಿರುವ ಸೈದ್ಧಾಂತಿಕ ರಾಜಿಕೋರತನವನ್ನೂ ಕಿಂಚಿತ್ತೂ ವಿಮರ್ಶಿಸಲಿಲ್ಲ. ಅದೇರೀತಿ ಈ ಅಭಿವೃದ್ಧಿ ಮಾದರಿಗೂ ಕೇಂದ್ರದ ಅಭಿವೃದ್ಧಿ ಮಾದರಿಗೂ ಯಾವ ವ್ಯತ್ಯಾಸವೂ ಇಲ್ಲವೆಂಬ ವೈರುಧ್ಯ ಅವರ ಗಮನಕ್ಕೇ ಬರಲಿಲ್ಲ. ನಿತೀಶ್‌ಕುಮಾರ್ ಅಭಿವೃದ್ಧಿ ಮಾದರಿಗೂ ಲೋಹಿಯಾ ಪ್ರತಿಪಾದಿಸಿದರೆಂದು ಅನಂತಮೂರ್ತಿಯವರು ಹೇಳುವ ಆಧುನಿಕ ನಾಗರಿಕತೆ ವಿರೋಧೀ ಮಾರ್ಗಕ್ಕೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆಯನ್ನೂ ಅವರು ಹಾಕಿಕೊಳ್ಳಲಿಲ್ಲ. ಚೀನಾದಲ್ಲಿ ಮತ್ತು ಪ.ಬಂಗಾಳದಲ್ಲಿ ಕಮ್ಯುನಿಸಮ್ಮಿನ ಮುಸುಕಿನಲ್ಲಿರುವ ಅಭಿವೃದ್ಧಿ ಮಾದರಿಯೂ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯೇ. ಬಿಹಾರದಲ್ಲಿ ಲೋಹಿಯಾವಾದಿ ಸಮಾಜವಾದಿ ಮುಸುಕಿನಲ್ಲಿರುವ ಅಭಿವೃದ್ಧಿ ಮಾದರಿಯೂ ಅಮೆರಿಕನ್ ಪ್ರಣೀತ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯೇ. ಹಾಗಿದ್ದಲ್ಲಿ ಚೀನಾದ ವಿಶ್ಲೇಷಣೆಗೆ ಬಳಸುವ ಹತಾರವನ್ನು ಬಿಹಾರದ ವಿಶ್ಲೇಷಣೆಗೆ ಬಳಸಲು ವಿಫಲಾಗುವ ಚಿಂತನೆಯ ನೈತಿಕತೆಯೇನು?

ಇವೆಲ್ಲವೂ ತಪ್ಪನ್ನು ಹುಡುಕಲೆಂದು ಆಡುತ್ತಿರುವ ಮಾತುಗಳಲ್ಲ. ಇಂದು ಚಳವಳಿಗಳೆಲ್ಲಾ ವಿಘಟನೆಯಾಗುತ್ತಿರುವ ಕಾಲ. 60ರ ದಶಕದಲ್ಲಿ ಸಾಮಾಜಿಕ ಕಳಕಳಿ ಸ್ವಲ್ಪ ಕಾವನ್ನು ಪಡೆದರೂ ತಾನಾಗಿಯೇ ಚಳವಳಿ ಆಗುತ್ತಿತ್ತು. ಆದರೆ ಇಂದು ಜಾಗತೀಕರಣ ಪರಮ ಸ್ವಾರ್ಥವನ್ನೂ, ಅಭಿವೃದ್ಧಿಯ ಭ್ರಾಂತಿಯನ್ನು ಬಿತ್ತಿದೆ. ಅದು ನರಭಕ್ಷಕ ಬ್ರಾಹ್ಮಣವಾದದೊಂದಿಗೆ ಮೈತ್ರಿ ಮಾಡಿಕೊಂಡಿದೆ. ಇವೆರಡರ ಜಂಟೀ ಕಾರ್ಯಾಚರಣೆ ಸಾಮಾಜಿಕ ಚಳವಳಿಗಳಿಗೆ ಹೊಸ ಸವಾಲನ್ನು ಹಾಕಿದೆ. 67ರ ಕಾಲ ಸಂದರ್ಭವೂ ಬದಲಾಗಿದೆ. ಸಿದ್ಧಾಂತ ಮತ್ತು ಕಾರ್ಯಾಚರಣೆಗಳೂ ಏಕಕಾಲದಲ್ಲಿ ಇನ್ನಷ್ಟು ಕ್ರಾಂತಿಕಾರಿಯೂ ಮತ್ತು ಪ್ರಜಾತಾಂತ್ರಿಕವೂ ಆಗದೆ ಪರ್ಯಾಯ ನಾಗರಿಕತೆಯನ್ನಿರಲಿ ಚಳವಳಿಯನ್ನೇ ಕಟ್ಟಲು ಸಾಧ್ಯವಿಲ್ಲ.

ಇಂಥಾ ಸಂಕ್ರಮಣ ಕಾಲಘಟ್ಟದಲ್ಲಿ ಮೊದಲಿಗೇ ಹೇಳಿದಂತೆ ಹಳೆಯ ವಿವೇಕದ ಕಂಟನ್ನುಟಿಯ ಜೊತೆಗೆ ಹೊಸ ಸಂದರ್ಭವು ಕೇಳುತ್ತಿರುವ ಬದಲಾವಣೆಯನ್ನೂ ಮೈಗೂಡಿಸಿಕೊಳ್ಳಬೇಕಿದೆ. ಅದಕ್ಕೆ ಪೂರ್ವಭಾವಿಯಾಗಿ ಅಗತ್ಯವಿರುವುದು ನಮ್ಮ ವೈಫಲ್ಯಗಳ ನಿರ್ದಾಕ್ಷಿಣ್ಯ ಪೋಸ್ಟ್ ಮಾರ್ಟೆಮ್. ನಿರ್ದಾಕ್ಷಿಣ್ಯ ಆತ್ಮವಿಮರ್ಶೆ. ಇಲ್ಲದಿದ್ದರೆ ಅಲ್ಪತೃಪ್ತಿ ನಿಧಾನಕ್ಕೆ ಆತ್ಮವಂಚನೆಗೆ ದಾರಿಮಾಡಿಕೊಡುತ್ತದೆ. ●

ಕಮ್ಯುನಿಸಮ್ಮನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ವಚನ ಮಾಡುವ ಅನಂತಮೂರ್ತಿಗಳಂಥ ಲೋಹಿಯಾವಾದಿಗಳು ಕಮ್ಯುನಿಸಮ್ಮಿನ ಆಚರಣೆಯಲ್ಲಿ ಸ್ಟಾಲಿನ್‌ನ ರಷ್ಯಾಗೂ ಮಾವೋನ ಚೀನಾಗೂ ಅಜಗಜಾಂತರ ವ್ಯತ್ಯಾಸವಿದ್ದದ್ದನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುತ್ತಾರೆ. ಎಲ್ಲಾ ಕಮ್ಯುನಿಸ್ಟರು ಬಂಡವಾಳಶಾಹಿ ಆಧುನಿಕತೆಯ ಪ್ರತಿಪಾದಕರೆಂದೇ ವಾದಿಸುತ್ತಾರೆ. ಆದರೆ ಲೋಹಿಯಾಗಿಂತ ಎಷ್ಟೋ ಮೊದಲು ಚೀನಾದಲ್ಲಿ ಮಾವೋ ನೇತೃತ್ವದಲ್ಲಿ ಪರ್ಯಾಯ ನಾಗರಿಕತೆಯ ಮತ್ತು ಹೊಸ ಮನುಷ್ಯನ ಹುಟ್ಟಿಗೆ ನಡೆದ ಮಹಾನ್ ಪ್ರಯತ್ನವನ್ನು ಬಹಳ ಸುಲಭವಾಗಿ ಹೀಯಾಳಿಸುತ್ತಾರೆ. ಅದು ಮಹಾನ್ ವೈಫಲ್ಯವನ್ನು ಕಂಡಿದ್ದು ನಿಜ. ಆದರೆ ಗಾಂಧೀ ಮತ್ತು ನೆಹರೂರವರ ಅಭಿವೃದ್ಧಿ ಮೀಮಾಂಸೆಯಲ್ಲಿ ಭಿನ್ನತೆಯನ್ನು ಕಾಣಬಲ್ಲ ಈ ಬುದ್ಧಿಜೀವಿಗಳು ಮಾವೋನ ಅಭಿವೃದ್ಧಿ ಮೀಮಾಂಸೆಗೂ ಮತ್ತು ಇಂದಿನ ಬಂಡವಾಳಶಾಹಿ ಚೀನಾದ ಜನಕ ಡೆಂಗ್-ಶೋ-ಪೆಂಗ್‌ನ ಅಭಿವೃದ್ಧಿ ಮೀಮಾಂಸೆಗೂ ಇದ್ದ ವ್ಯತ್ಯಾಸಗಳನ್ನು ಉದ್ದೇಶಪೂರ್ವಕವಾಗಿ ಏಕೆ ಮುಚ್ಚಿಡುತ್ತಾರೆ?



…ಹೆಚ್ಚಬೇಕಾಗಿರುವ …ಎನ್.ಜಿ.ಓ.ಗಳ ವಿರೋಧ

…ಈಚೆಗೆ ಹೆಗ್ಗಡದೇವನ ಕೋಟೆಯ ಹತ್ತಿರ ಕಬಿನಿ …ಪಕ್ಕದಲ್ಲಿ ಭಾರತೀಯ ಭಾಷಾ ಸಂಸ್ಥಾನದ ದಕ್ಷಿಣ …ಶಿಕ ಭಾಷೆಗಳ ಕೇಂದ್ರದಿಂದ ಬುಡಕಟ್ಟು ಭಾಷೆಗಳ …ನ ಸಮಸ್ಯೆ ಮತ್ತು ಅದರ ನಿರ್ವಹಣೆ ಕುರಿತು … ದಿನಗಳ ಉಪನ್ಯಾಸವನ್ನು ಸಂಯೋಜಕರಾದ ಡಾ. …ಪಯ್ಯ ಅವರು ನಡೆಸಿದರು. ರಾಜ್ಯದ ಬೇರೆ ಬೇರೆ …ಂದ ಬುಡಕಟ್ಟುಗಳ ಬಗ್ಗೆ ಕೆಲಸ ಮಾಡಿದ ವಿದ್ವಾಂಸರು …ದ್ದರು. ಬುಡಕಟ್ಟು ಭಾಷೆಗಳ ಉಳಿವಿನ ಸಮಸ್ಯೆ … ಆದರ ನಿರ್ವಹಣೆ ಬಗ್ಗೆ ಭಿನ್ನವಾದ ಉಪನ್ಯಾಸಗಳು …ವು. ಈ ಆಲೋಚನೆಗಳು ಕಾರ್ಯರೂಪಕ್ಕೆ …ಬಂದರೆ ಇದೊಂದು ಮಹತ್ವದ ಕೆಲಸ ಆಗುವುದರಲ್ಲಿ …ಷವಿಲ್ಲ.

…ಲ್ಲಿ ಗಮನಿಸಬಹುದಾದ ಒಂದು ಪರಿಣಾಮ …. ಅದೇನೆಂದರೆ ಬುಡಕಟ್ಟು ಜನರೇ ವಿದ್ವಾಂಸರಿಗಿಂತ … ತಮ್ಮ ತಮ್ಮ ಭಾಷೆಗಳ ಬಗ್ಗೆ ಮಾತನಾಡಿದರು. …ಜನರಲ್ಲಿ ಪ್ರಶ್ನಿಸುವ ಮನೋಭಾವ ಮತ್ತು …ನೆಯನ್ನು ಕಿತ್ತೆಸೆದು ಸ್ವಾಭಿಮಾನ ಪ್ರಕಟವಾದದ್ದು … ಬೆಳವಣಿಗೆ. ಅದಕ್ಕಿಂತ ಮುಖ್ಯವಾಗಿ ಬುಡಕಟ್ಟು … ಕೆಲವು ಎನ್‌ಜಿಓ(ನಾನ್ ಗವರ್ನಮೆಂಟ್ …ನೈಜೇಷನ್ಸ್) ಗಳ ಬಗ್ಗೆ ತುಂಬಾ ತೀವ್ರವಾಗಿ ವಿರೋಧ …ಸಿದರು. ಅವರು ನಮ್ಮನ್ನು ಬಳಸಿಕೊಂಡು ದುಡ್ಡು …ತ್ತಿವೆ ಎಂದೂ, ನಮ್ಮ ಕಷ್ಟಕಾರ್ಪಣ್ಯಗಳೇ ಅವರಿಗೆ …ಬಾಳವಾಗಿವೆಯೆಂದೂ, ಅಂತಹ ಗೋಸುಂಬೆ ಮುಖದ ಕೆಲವು ಎನ್‌ಜಿಓಗಳನ್ನು ನಾವೇ ಒದ್ದೋಡಿಸುತ್ತೇವೆಂದೂ ಮಾತನಾಡುತ್ತಾ ಭಾಷೆಯ ಕುರಿತ ಉಪನ್ಯಾಸ ಕಾರ್ಯಕ್ರಮವನ್ನೂ ಕೆಲವರು ವಿರೋಧಿಸಿದರು. ಆ ವಿರೋಧ ಎನ್‌ಜಿಓಗಳ ಮೇಲಿನ ಸಿಟ್ಟಿನಿಂದಲೂ ಬಂದದ್ದಾಗಿತ್ತು. ಕಾರಣ ಈ ಭಾಗದಲ್ಲಿ ಒಂದೆರಡು ಎನ್‌ಜಿಓಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿರುವುದನ್ನು ಬಿಟ್ಟರೆ, ಕೆಲವು ಎನ್‌ಜಿಓಗಳು ಬುಡಕಟ್ಟುಗಳನ್ನು ಅಭಿವೃದ್ಧಿಪಡಿಸುವ ನೆಪದಲ್ಲಿ ಹಣವನ್ನು ಕೊಳ್ಳೆಹೊಡೆಯಲಾಗಿದೆ ಎಂದು ಅಲ್ಲಿನ ಬುಡಕಟ್ಟಿನ ನಾಯಕ ಕೃಷ್ಣಪ್ಪ ಎಂಬುವವರು ಮಾಹಿತಿ ನೀಡಿದರು.

ಬುಡಕಟ್ಟುಗಳೇ ಹೆಚ್ಚಾಗಿರುವ ಈ ಭಾಗದಲ್ಲಿನ ಜನರ ವಿರೋಧದಲ್ಲಿ ವ್ಯವಸ್ಥೆಯ ದಾರುಣ ಚಿತ್ರ ಪ್ರಕಟವಾಗುತ್ತಿತ್ತು. ಈಗ ಭಾರತದಲ್ಲಿ ಕೆಲಸ ನಿರ್ವಹಿಸುತ್ತಿರುವ ಬಹುಪಾಲು ಎನ್‌ಜಿಓಗಳು ವಿದೇಶಿ ಹಣವನ್ನು ಸರ್ಕಾರಿ ಫಂಡುಗಳನ್ನು ಕಬಳಿಸುವುದನ್ನೇ ಕಾಯಕವನ್ನಾಗಿಸಿಕೊಂಡಿವೆ. ಬೆರಳೆಣಿಕೆಯ ಕೆಲವು ಸಂಸ್ಥೆಗಳು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿರಬಹುದು. ಆದರೆ ಬಹುಪಾಲು ಸಂಸ್ಥೆಗಳು ನೋವನ್ನು, ಕಷ್ಟವನ್ನು, ದಾರಿದ್ರ್ಯವನ್ನು, ಕೊನೆಗೆ ಕಣ್ಣೀರನ್ನೂ ವಿದೇಶಗಳಿಗೆ ಮಾರಿಕೊಳ್ಳುವ ಅಥವಾ ಬಂಡವಾಳವನ್ನಾಗಿ ಮಾಡಿಕೊಳ್ಳುವ ಕೆಲಸದಲ್ಲಿ ನಿರತವಾಗಿವೆ. ಈ ಬೆಳವಣಿಗೆ ಜಾಗತೀಕರಣದ ಉಪ ಉತ್ಪನ್ನಗಳಲ್ಲಿ ಒಂದಾಗಿದೆ. ದೇಶದ ಆಂತರಿಕ ಮಾಹಿತಿಗಳನ್ನು ವಿದೇಶಗಳಿಗೆ ರವಾನಿಸುವ ಮೂಲಕ ದೇಶದ ವಿರುದ್ಧ ಜನರನ್ನು ಎತ್ತಿಕಟ್ಟಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಸೂಕ್ಷ್ಮವಾದ ಅಜೆಂಡಾವನ್ನು ಬಹುಪಾಲು ಎನ್‌ಜಿಓಗಳು ಒಳಗೊಂಡಿವೆ. ಕೆಲವು ಬಹುರಾಷ್ಟ್ರೀಯ ಕಂಪನಿಗಳು ಎನ್‌ಜಿಓಗಳ ವರದಿಯನ್ನು ಆಧರಿಸಿ ತಮ್ಮ ಮಾರುಕಟ್ಟೆಯನ್ನೂ ವಿಸ್ತರಿಸಿಕೊಳ್ಳುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಇದು ಅಕ್ಷಮ್ಯ ಅಪರಾಧವೂ ಹೌದು. ಇಂತವರನ್ನು ಜನರೇ ವಿರೋಧಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಇದು ಇನ್ನೂ ಹೆಚ್ಚಾಗಬೇಕು. ಇದರಿಂದಾಗಿ ಇಂದು ಪ್ರಾಮಾಣಿಕವಾಗಿ ಸಮುದಾಯಗಳನ್ನು ಅಧ್ಯಯನ ಮಾಡಲು ಕ್ಷೇತ್ರಕಾರ್ಯಕ್ಕೆ ಹೋಗುವ ಅಧ್ಯಯನಕಾರರಿಗೂ ಸಂಶೋಧನ ವಿದ್ಯಾರ್ಥಿಗಳಿಗೂ ದೊಡ್ಡ ತೊಡಕು ಎದುರಾಗಿದೆ. ಜನರು ತಮ್ಮನ್ನು ಅಧ್ಯಯನ ಮಾಡುವುದರಿಂದ ನಿಮಗೇನು ಲಾಭ? ಎನ್ನುವಂತಹ ಲಾಭ ನಷ್ಟದ ಪರಿಭಾಷೆಯಲ್ಲಿ ಮಾತಾಡತೊಡಗಿದ್ದಾರೆ.

ನಿಂಗಪ್ಪ ಹೊಸಹಳ್ಳಿ ಎಂಬ ನನ್ನ ಗೆಳೆಯ ಈ ಹಿಂದೆ ಎನ್‌ಜಿಓ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಆತ ಕ್ಷೇತ್ರ ಕಾರ್ಯಕ್ಕೆಂದು ಹಳ್ಳಿಗಳಿಗೆ ಹೋದಾಗ ಜನರು ಆತನನ್ನು ಅವಮಾನಿಸಿ ಕಳಿಸಿದರು. ಕಾರಣ ನೀವು ದುಡ್ಡು ಮಾಡಿಕೊಳ್ಳುವುದಕ್ಕೆ ನಮ್ಮನ್ನೇಕೆ ಬಳಸಿಕೊಳ್ಳುತ್ತಿದ್ದೀರಿ, ನೀವು ಪಿಹೆಚ್.ಡಿ ಮಾಡುತ್ತಿದ್ದೇನೆ ಎನ್ನುತ್ತೀರಿ, ಮೊದಲು ಇದರಿಂದ



ಹೊರಬನ್ನಿ ಎನ್ನುವ ಸಲಹೆಗಳನ್ನು ನೀಡಿದರಂತೆ. ಇಂತಹ ಮುಖಭಂಗವನ್ನು ಅನುಭವಿಸಿದ ಆತ ಕೊನೆಗೆ ಇನ್ನೆಂದೂ ಎನ್‌ಜಿಓಗಳಲ್ಲಿ ದುಡಿಯುವುದಿಲ್ಲ ಎಂದು ಕೆಲಸ ತ್ಯಜಿಸಿ ಹೊರಬಂದನು. ಇಂತಹ ಕಹಿ ಅನುಭವಗಳು ಅನೇಕರಿಗೆ ಆಗಿವೆ. ನಾನು ಒಮ್ಮೆ ಎನ್‌ಜಿಓ ಒಂದರ ಮೂಲಕ ಭೂಪಾಲ್‌ಗೆ ಹೋಗಿದ್ದೆ. ಅಲ್ಲಿ ಅನಿಲ ದುರಂತದಿಂದಾದ ಪರಿಣಾಮಗಳನ್ನು ಕುರಿತು ಒಂದು ಎನ್‌ಜಿಓ ಹತ್ತು ವರ್ಷಗಳ ಕಾಲ ಸಂಶೋಧನೆ ನಡೆಸಿದ ವರದಿಯನ್ನು ಮಂಡಿಸಿತು. ಅದಕ್ಕೆ ಹಣ ಹೂಡಿದ್ದು ಅನಿಲ ದುರಂತಕ್ಕೆ ಕಾರಣವಾದ ದೇಶವೇ ಎನ್ನುವುದು ವಿಪರ್ಯಾಸ. ಅನಿಲ ದುರಂತಕ್ಕೆ ಬಲಿಯಾದವರ ಪರವಾಗಿ ಪ್ರಾಮಾಣಿಕವಾಗಿ ಹೋರಾಟ ಮಾಡುತ್ತಿದ್ದ ಸತ್ಯು ಅನ್ನುವವರು ಮಾತನಾಡಿ ಇಂತಹ ಎನ್‌ಜಿಓಗಳ ಅಧ್ಯಯನ ಈ ಸಮಸ್ಯೆಗಿರುವ ಗಂಭೀರತೆಯನ್ನು ಲಘುವಾಗಿಸುತ್ತದೆ. ಈ ವರದಿ ಜನರ ಪರ ಇದ್ದಂತೆಯೇ ಅಂತರಾಳದಲ್ಲಿ ಜನವಿರೋಧಿಯಾಗಿದೆ ಎಂದು ಮಾತನಾಡಿದ್ದರು. ಅದನ್ನು ಅಲ್ಲಿನ ಎನ್‌ಜಿಓ ಉದ್ಯೋಗಿಗಳು ವಿರೋಧಿಸಿದ್ದರೂ ಕೂಡ. ಅನಿಲ ದುರಂತದಲ್ಲಿ ಸಿಕ್ಕು ತಮ್ಮವರನ್ನೆಲ್ಲಾ ಕಳೆದುಕೊಂಡು ಅದರೆಲ್ಲಾ ಅಪಾಯಗಳನ್ನು ನಿತ್ಯವೂ ಅನುಭವಿಸುವ ಕೆಲವರನ್ನು ಮಾತನಾಡಿಸಿದಾಗ ಅವರು ಇಂತಹ ಎನ್‌ಜಿಓಗಳ ಕಾರ್ಯಕ್ರಮಕ್ಕೆ ನಾವು ಬರುವುದು ಮೂರ್ನಾಲ್ಕು ದಿವಸ ಒಳ್ಳೆಯ ಊಟ ಸಿಗುತ್ತದೆಯೆಂದೇ ಹೊರತು ನಮಗೆ ಶಾಶ್ವತ ಪರಿಹಾರ ದೊರಕುತ್ತದೆ ಎಂದಲ್ಲ ಎನ್ನುವ ಕಟು ವಾಸ್ತವವನ್ನು ತೆರೆದಿಟ್ಟಿದ್ದರು.

ಈ ಹಿಂದೆ ಕೋಲಾರ ಜಿಲ್ಲೆಯೊಂದರಲ್ಲೇ ಅರವತ್ತಕ್ಕೂ ಹೆಚ್ಚು ಎನ್‌ಜಿಓಗಳನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿದ ವರದಿ ಬಂದಿತ್ತು. ಇದಕ್ಕೆ ಕಾರಣ ಕೇವಲ ಹಣವನ್ನು ಕಬಳಿಸಿ ತಪ್ಪು ಲೆಕ್ಕಪತ್ರಗಳನ್ನು ಕೊಟ್ಟಿದ್ದು ಎಂದು ವರದಿಯಲ್ಲಿ ಪ್ರಕಟವಾಗಿತ್ತು. ಈಚೆಗೆ ಉಲ್ಲಾಸ ಕಾರಂತರು ಹುಲಿಗಳ ಸಂರಕ್ಷಣೆಗೆ ವಿದೇಶಗಳಿಂದ ಹಣ ಪಡೆದು ಹೇಗೆ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನುವ ವರದಿ ಪ್ರಜಾವಾಣಿಯಲ್ಲಿ ಪ್ರಕಟವಾಗಿತ್ತು. ಬಳ್ಳಾರಿಯಲ್ಲಿ ಏಡ್ಸ್ ರೋಗಿಗಳ ಸಂಖ್ಯೆ ರಾಜ್ಯದಲ್ಲಿಯೇ ಮೊದಲ ಸ್ಥಾನವನ್ನು ಪಡೆದಿದೆ ಎಂದು ಎನ್‌ಜಿಓ ಒಂದು ವರದಿಯನ್ನು ಪ್ರಕಟಿಸಿತು. ಇಲ್ಲಿನ ಕೆಲವು ವೈದ್ಯರುಗಳನ್ನು ವಿಚಾರಿಸಿದಾಗ ಈ ವರದಿ ಸತ್ಯಕ್ಕೆ ದೂರವಿದೆ, ವರದಿ ಪ್ರಕಟಿಸಿದ ಎನ್‌ಜಿಓ ಇನ್ನಷ್ಟು ಫಂಡ್ ಪಡೆಯಲು ಹೀಗೆ ಮಾಡಿರಬೇಕು ಎಂದಿದ್ದರು. ಇಂದು ಅನೇಕ ನಿರುದ್ಯೋಗಿ ಯುವಕರು ಅನಿವಾರ್ಯವಾಗಿ ಎನ್‌ಜಿಓಗಳಲ್ಲಿ ದುಡಿಯುತ್ತಿದ್ದಾರೆ. ಇವರ ನಿರುದ್ಯೋಗದ ಸ್ಥಿತಿಯನ್ನೇ ಎನ್‌ಜಿಓಗಳು ದುರುಪಯೋಗಪಡಿಸಿಕೊಳ್ಳುತ್ತಿವೆ. ಕೆಲವು ಬುದ್ಧಿಜೀವಿಗಳೂ ಎನ್‌ಜಿಓಗಳಲ್ಲಿ ಕೆಲಸ ಮಾಡುತ್ತಿರುವುದು ಮತ್ತು ಎನ್‌ಜಿಓ ಪ್ರಣೀತ ಸೆಮಿನಾರು ಮುಂತಾದವುಗಳಲ್ಲಿ ಭಾಗವಹಿಸಿ ಸಂತೃಪ್ತ ಟಿಎಡಿಎ ಪಡೆದು ಸಾಮಾಜಿಕ ಜವಾಬ್ದಾರಿಯ ಭಾಷಣ ಬಿಗಿಯುತ್ತಿರುವುದು ವಿಪರ್ಯಾಸವೇ ಸರಿ.

ಯಾರ ನೋವು, ಕಷ್ಟ, ದುಃಖ, ದುಮ್ಮಾನಗಳು ಎನ್‌ಜಿಓಗಳ ಹುಸಿ ಕಾಳಜಿಯ ವಿಷಯಗಳಾಗುತ್ತಿವೆಯೋ ಅಂತವರ ಒಡಲೊಳಗಿಂದಲೇ ಎನ್‌ಜಿಓಗಳನ್ನು ವಿರೋಧಿಸುವ ಗುಣ ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕಿದೆ. ಮೊದಲು ಪ್ರಸ್ತಾಪಿಸಿದ ಎಚ್.ಡಿ ಕೋಟೆಯ ಪ್ರಸಂಗವನ್ನು ನೋಡಿದರೆ ಅದು ಈಗ ಆಗುತ್ತಿದೆ ಕೂಡ. ಹಲವು ಎನ್‌ಜಿಓಗಳು ಸುಳ್ಳು ಮಾಹಿತಿಯನ್ನು ನೀಡಿ ದೇಶದ ನಿಜದ ವಾಸ್ತವವನ್ನೇ ಮರೆಮಾಚುತ್ತಿವೆ. ಸರಕಾರವೂ ತನ್ನ ಕೆಲವು ಕೆಲಸಗಳನ್ನು ಎನ್‌ಜಿಓಗಳಿಗೆ ನೀಡಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಹಾಗಾಗಿ ಸರಕಾರ ಎನ್‌ಜಿಓಗಳಿಗೆ ನೀಡುವ ಕೆಲಸವನ್ನು ತಡೆಯುವ ಅಗತ್ಯವಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ವಿಸ್ತರಿಸಿಕೊಳ್ಳುತ್ತಿರುವ ಎನ್‌ಜಿಓಗಳ ಒಟ್ಟು ನಡೆಯನ್ನು ತಡೆಯುವ ಅಗತ್ಯ ಈಗ ಹೆಚ್ಚಾಗಿದೆ. ಮಾಧ್ಯಮಗಳೂ ಎನ್‌ಜಿಓಗಳ ಕೆಲಸದ ಮೇಲೆ ನಿಗಾ ಇಟ್ಟು ಅವುಗಳ ಕೆಲಸದ ಸ್ವರೂಪವನ್ನು ಜನರಿಗೆ ಮನವರಿಕೆ ಮಾಡಬೇಕಿದೆ. ಈ ಮೇಲಿನ ವಿವರಕ್ಕೆ ಅಪವಾದವೆನ್ನುವಂತೆ ಕೆಲವು ಎನ್‌ಜಿಓಗಳು ಪ್ರಾಮಾಣಿಕ ಕೆಲಸ ನಿರ್ವಹಿಸುತ್ತಿರಬಹುದು. ಆದರೆ ಅಂತಹವುಗಳ ಸಂಖ್ಯೆ ತೀರಾ ಕಡಿಮೆ ಎನ್ನುವುದನ್ನು ಮರೆಯುವಂತಿಲ್ಲ.

• ಡಾ. ಅರುಣ್ ಜೋಳದಕೂಡ್ಲಿಗಿ

ಎನ್ಕೆ ಹನುಮಂತಯ್ಯ

…ಸಿರ್ಬಿಡಿದ್ದಿಡಿದು ತೊಳಲಾಡುವಾಗ ನೀನು
… ನೆಲದಲ್ಲಿ ಗೊತ್ತಿಲ್ಲದೆ ನಾವು ಪದ್ಯ ಓದುತ್ತಿದ್ದೆವು
…ವರು ನಾಟಕ ನೋಡುತ್ತಿದ್ದರು ಬಿಸಿಲನಗರಿಯಲ್ಲಿ
…ವಿ ಮಾತ್ರ ಆರವರ ಸಂತೆಯಲಿ
…ದೊಂದಿಗೆ ದಂಗೆ ಹೂಡಿದ್ದೆ
…ರಿಸಂಗಡಿಯಲಿ ಕೂಡಲಾರೆನೆಂದು
… ತೊಟ್ಟವನಂತೆ ವಿಲವಿಲನೆ ಒದ್ದಾಡುತ್ತಿದ್ದೆ

…ಮಾ ನಿನಗೇನಾಗಿತ್ತು ಕಣೋ
…ಗುವ ಯೋಚನೆ ನಿನಗ್ಯೇಗೆ ಬಂತೋ
…ಜರದ ಹಕ್ಕಿಗೆ ಬಿಡುಗಡೆಯ ಹಾದಿ ತೋರಿಸಿದವ
…ಟ್ಟವರ ಕಣ್ಣೀರಿಗೆ ಕನಲಿ ನೀರಾದವ
…ಜದ ಸವಕಳಿಯನು ಕಂಡು ಬೆರಗುಗೊಂಡವ
… ಪಾರಾಗುವ ದಾರಿಯಲಿ ಕುಸಿದು ಬಿದ್ದೆ
…ದ್ದು ಕುಣಿದಂತೆ ರೂಪಕಗಳನು ಸೃಷ್ಟಿಸಿ
…ಭಿಮಾನಿಕ ಪ್ರಭುತ್ವದ ಗೊರಕೆಗೆ ಗಿಡುಗನಾಗಿ ಬಡಿವೆನೆಂದವ
…ಹಿಂಗ ಮಾಡಿದ್ಯೊ ನೀನು?

…ಸು ಮಾಡಿ ಪಸೊ ಮಾಡದವರಂತೆ
…ಮಾಡುತ್ತಾಗಿಲ್ಲ, ಶುದ್ಧ ಅಶುದ್ಧದ ಮಾತು ಬೇರೆ
…ಸುಗಳನು ಕಲೆಕಲೆಸಿ ಉಂಡವ ನೀನು
…ಥ ನಿನಗೆ ಹೇಳುವಂಥಾದ್ದು ಏನಿತ್ತು ಇವರಲ್ಲಿ

ಬಾಯ್ತುಂಬ ನಿನ್ನ ಹೆಸರ್ಹೇಳಿ ನಡೆದಾಡುವವರಲ್ಲಿ
ಕೊನೆಗಾಲದಲಿ ಯಾರಿದ್ದರು ಗೆಳೆಯಾ ನಿನ್ನೊಂದಿಗೆ?

ಕರಿಬೆನ್ನಿನ ಬಾಸುಂಡೆಯನು
ತೋರಿಸದೆ ನೀ ಹೋದಿ
ಮನದ ಮುಲುಕಾಟವನು ಹೇಳದೆ ಹಾಗೆ ನಿಂತಿ
ಮಾಡಬಾರದ 'ಮಹಾಪಾಪ'ವನು ಮಾಡೇಬಿಟ್ಟಿ
ಅಂತೆಕಂತೆಗಳ ಗಂಟು ಬಿಚ್ಚಲಾರೆನಯ್ಯಾ
ಹಿಮದ ಹೆಜ್ಜೆಯನು ತೋರಿಸಿ
ಇರುವ ಒಂದೇ ಕಾಪಿಯನು ಕೈಗಿತ್ತು ಹೋದಿ
ವಿಳಾಸವನು ಕಳಿಸು ಕಳಿಸುತ್ತೇನೆಂದರೆ ಕಳುಹಿಸಲೇ ಇಲ್ಲ
ಪುಸ್ತಕ ಇದ್ದಲ್ಲೆ ಕಣ್ಣೀರಾಗಿ ಕರಗುತ್ತಿದೆ
ಅಕ್ಷರಗಳನೆತ್ತಿಕೊಂಡು ಹೂತು ಬಿಡಲೇ ನೆಲದಲ್ಲಿ
ನೀರಾಗಿ ಹರಿದು ತಂಪಾದರು ಮಾಡಲದು ನಿನ್ನನ್ನು
ಎಲ್ಲೆಲ್ಲೂ ನಿನ್ನದೇ ಮಾತು ಮಿತ್ರಾ
'ಸತ್ತವರು ಬದುಕಿದವರನ್ನು ಪ್ರೀತಿಸಲು
ಒಂದು ಸಣ್ಣ ಕಾರಣ ಸಾಕು
ನಾವಿನ್ನು ಸಾವಿನ ಕಾರಣಗಳಿಂದ
ದೂರವಾಗಬೇಕು'



• ಶಿವರಾಜ ಬೆಟ್ಟದೂರು

ಮಠದ ಗೂಳಿಯ ಮರಣ ದಂಡನೆ ಪ್ರಸಂಗ

ಕೆಲ ವರ್ಷಗಳ ಹಿಂದಿನ ಪ್ರಸಂಗ ಇದು. ಈಗ ಗೋಹತ್ಯೆ ನಿಷೇಧವಾಗಬೇಕೆಂದು ಹಾಲಿ ಬಿಜೆಪಿ ಸರ್ಕಾರ ಹಾಗೂ ಕೆಲವು ಮಠಾಧೀಶರೂ ಹೇಳುತ್ತಿರುವುದನ್ನು ನೋಡಿ ನನಗೆ ಈ 'ಮಠದ ಗೂಳಿಯ ಮರಣದಂಡನೆ ಪ್ರಸಂಗ' ನೆನಪಾಗುತ್ತಿದೆ.

ಶೃಂಗೇರಿ ಮಠದವರು ತಮ್ಮ ಗೋಶಾಲೆಯಲ್ಲಿ ಮಿಶ್ರ ತಳಿಯ ಆಕರ್ಷಕ ಗೂಳಿಯೊಂದನ್ನು ಸಾಕಿದ್ದರು. ಕಪ್ಪುಬಿಳಿ ಬಣ್ಣದ ಮದಬೂತಾದ ಸೈಜಿನ ಆ ಗೂಳಿ ಆರು ಅಡಿ ಎತ್ತರವಿತ್ತು. ಮಠದವರು ತಮ್ಮ ಗೋಶಾಲೆಯ ದನಗಳಲ್ಲದೆ ಊರಿನ ದನಗಳೂ ಬೆದೆಗೆ ಬಂದಾಗ ತಕ್ಕಷ್ಟು ಕಾಣಿಕೆ ಪಡೆದು ಗೂಳಿ ಹಾರಿಸುತ್ತಿದ್ದರು. ಸರ್ವಸಂಗ ಪರಿತ್ಯಾಗಿಗಳ ಜೊತೆ ಬದುಕಿದ್ದರೂ ಆ ಗೂಳಿ ನಿತ್ಯ ಮೂರ್ನಾಲ್ಕು ದನಗಳ ಮೇಲೆ ಹಾರುತ್ತಾ ಒಳ್ಳೆಯ ಮೇವು-ಹಿಂಡಿ ತಿಂದುಕೊಂಡು ನೆಮ್ಮದಿಯಾಗಿತ್ತು. ದನ ಹಾರುವಾಗ ಕಾಣಿಕೆಯ ಗಳಿಕೆಯೂ ಆಗುತ್ತಿತ್ತಾದ್ದರಿಂದ ಆ ಗೂಳಿ ಒಂದು ರೀತಿ ಸ್ವಾವಲಂಬಿಯಾಗಿತ್ತೆಂದೇ ಹೇಳಬಹುದು. ಹೀಗಿರುವಾಗ ಒಂದು ಸಾರಿ ಯಾವುದೋ ರೋಗವಿರುವ ದನಕ್ಕೆ ಹಾರಿ ಗೂಳಿಗೂ ಆ ರೋಗ ಬಂತು. ಅಲ್ಲಿಂದಾಚೆಗೆ ಗೂಳಿ ಹಾರಿದ ದನಗಳು ಗಬ್ಬ ಆಗಲಿಲ್ಲ. ಪಶುವೈದ್ಯರು ಬಂದು ಗೂಳಿಯನ್ನು ಚೆಕ್‌ಅಪ್ ಮಾಡಿದರು. ಇನ್ನು ಮೇಲೆ ಬೆದೆಗೆ ಹಾರಿಸಲು ಈ ಗೂಳಿ ಲಾಯಕ್ಕಲ್ಲ ಎಂದುಬಿಟ್ಟರು.

ನಿಷ್ಪಾಪಿ ಗೂಳಿಯ ದುರ್ದೆಶೆ ಅವತ್ತೇ ಆರಂಭವಾಯಿತು.


ಉಪಯೋಗಕ್ಕೆ ಬಾರದ ಗೂಳಿಯನ್ನು ಏನು ಮಾಡುವುದೆಂದು ಮಠದವರಿಗೆ ಚಿಂತೆಯಾಯಿತು. ಇರಲಿ, ಮಠದಲ್ಲಿರುವ ನೂರಾರು ಜಾನುವಾರುಗಳಲ್ಲಿ ಇದೂ ಒಂದು ಅಂತ ಅಲ್ಪಸ್ವಲ್ಪ ಆಹಾರ ಕೊಟ್ಟು ಕೆಲದಿನ ನೋಡಿಕೊಂಡರು. ಆದರೆ ಉಪಯೋಗವಿಲ್ಲದ ಜಾನುವಾರು ಸಾಕುವ ಕಷ್ಟ ಏನೂಂತ ಸಾಕುವವರಿಗೆ ಮಾತ್ರ ಗೊತ್ತಿರುತ್ತೆ. ದಿನಕ್ಕೆ 20 ಕಟ್ಟು ಹುಲ್ಲು, ಹಿಂಡಿ, ನೀರು ಕೇಳುತ್ತಿದ್ದ ಆ ಗೂಳಿ ಸಲುಹಲು ಪ್ರತಿದಿನ ನೂರಾರು ರೂಪಾಯಿ ಖರ್ಚಾಗುತ್ತಿತ್ತು. ಆ ಗೂಳಿಯೋ ತನ್ನ ಆಹಾರದ ಕೋಟಾದಲ್ಲಿ ಸ್ವಲ್ಪ ಕಡಿಮೆಯಾದರೂ ಕೂಗಲು ಶುರು ಮಾಡುತ್ತಿತ್ತು. ಅಲ್ಲದೆ ದಿನಕ್ಕೆ ಮೂರ್ನಾಲ್ಕು ಬಾರಿಯಾದರೂ ದನಗಳ ಮೇಲೆ ಹಾರುತ್ತಿದ್ದ ಗೂಳಿಗೆ ಆ ಸೌಲಭ್ಯವೂ ತಪ್ಪಿಹೋಗಿ ಉಪವಾಸವಾಗಿತ್ತು. ಅಪ್ಪ ಗೂಳಿಯ ಬದಲಾಗಿ ಈಗ ಮಗ ಗೂಳಿ ಪಟ್ಟಕ್ಕೆ ಬಂದಿದ್ದ.

ಅಪ್ಪ ಗೂಳಿ ಎಷ್ಟು ಸೂಕ್ಷ್ಮಗ್ರಾಹಿಯೆಂದರೆ ಬೆದೆಗೆ ಬಂದ ದನಗಳು ಒಂದು ಫರ್ಲಾಂಗ್ ದೂರದಲ್ಲಿ ಬರುತ್ತಿರುವಾಗಲೇ ಅದು ಹೇಗೊ ಪತ್ತೆಹಚ್ಚಿ ಕೂಗಲು ಶುರು ಮಾಡುತ್ತಿತ್ತು. ಬೃಹದಾಕಾರದ ಆ ಗೂಳಿ ಕಿರುಚಿದರೆ ಭೂಮಿಯೇ ನಡುಗಿದಂತಾಗುತ್ತಿತ್ತು. ಒಂಥರಾ ಡೈನೋಸಾರ್ ಘೀಳಿಟ್ಟಂತೆ. ಈ ಸಮಸ್ಯೆ ದಿನ ಕಳೆದಂತೆ ಜಾಸ್ತಿಯೇ ಆಗತೊಡಗಿತು. ಗೂಳಿ ರಾತ್ರಿ ವೇಳೆಯಲ್ಲೂ ಗುಟುರು ಹಾಕತೊಡಗಿತು. ಅದರ ಇಡೀ ದಿನದ ಈ ಗಲಾಟೆಯಿಂದ ಗುರುಗಳಿಗೆ ಹಗಲಲ್ಲಿ ತಪೋಭಂಗ ರಾತ್ರಿಯಲ್ಲಿ ನಿದ್ರಾಭಂಗವಾಗಲು ಶುರುವಾಯಿತು. ಆದರೇನು, ಗೂಳಿಯ ಈ ಪ್ರತಿಭಟನೆಗಳಿಗೆ ಕಾರಣವಿತ್ತಲ್ಲ! ಸೂಕ್ತ ಕಾರಣವಿಲ್ಲದೆ, ಶೋಕಾಸ್ ನೋಟಿಸ್ ಕೂಡ ನೀಡದೆ ಏಕಾಏಕಿ ತನ್ನನ್ನು ಹಾರುವ ಗೂಳಿ ಪಟ್ಟದಿಂದ ಕೆಳಗಿಳಿಸಿದ್ದು ಆ ಗೂಳಿಗೆ ಸಹಿಸಿಕೊಳ್ಳಲು ಆಗಿರಲಿಲ್ಲ. ಕೊನೆಗೆ ಈ ಗೂಳಿಯ ಪ್ರತಿಭಟನೆ ಇನ್ನೂ ಜಾಸ್ತಿಯಾಗಿ ಗುರುಗಳ ಗಮನಕ್ಕೂ ಹೋಯಿತು. ಏಕೆಂದರೆ ಗೂಳಿ ಒಮ್ಮೆ ಕೂಗಲು ಶುರು ಮಾಡಿದ ತಕ್ಷಣ ಮಠದ ಇತರೆ ದನಗಳೂ ಕೋರಸ್ ನೀಡುವಂತೆ ಅರಚಲು ಶುರು ಮಾಡುತ್ತಿದ್ದವು. ಗುರುಗಳ ವಾಸಸ್ಥಾನವಾಗಿರುವ ನರಸಿಂಹವನವೂ ಇದರಿಂದ ಪ್ರಕ್ಷುಬ್ಧಗೊಳ್ಳುತ್ತಿತ್ತು. ಕೊನೆಗೂ ಗುರುಗಳಿಗೆ ಒಂದು ದಿನ ಗೂಳಿಯ ಮೇಲೆ ಕೋಪ ಬಂದೇಬಂತು. ಮಠದ ಮೇಸ್ತ್ರಿಗೆ ಪೀಕಲಾಟ ಬಂದದ್ದು ಆಗಲೆ.

ಈ ಮೇಸ್ತ್ರಿ ಗೂಳಿಯ ವಿಚಾರವನ್ನು ದನಗಳ ದಲ್ಲಾಳಿಯಾಗಿದ್ದ ಕೃಷ್ಣಭಟ್ಟ ಎಂಬುವನಿಗೆ ತಿಳಿಸಿದ. ಆ ಕೃಷ್ಣಭಟ್ಟ ತನಗಿಷ್ಟು ಕಮಿಷನ್ ಮಾತನಾಡಿಕೊಂಡು ಮಂಗಳೂರಿನಿಂದ ಮುಸ್ಲಿಂ ದನದ ವ್ಯಾಪಾರಿಯೊಬ್ಬನನ್ನು ಕರೆದುಕೊಂಡು ಬಂದ. ಗೂಳಿ ನೋಡಿದ ಆ ವ್ಯಾಪಾರಿ ಏನು ರೇಟಿಗೆ ಗೂಳಿ ತಗೋಬಹುದು ಎಂದು ಯೋಚಿಸುತ್ತಿದ್ದ. 'ಕಳ್ಳನಿಗೆ ಕೊಟ್ಟರೂ 2-3 ಸಾವಿರ ಕೊಡುತ್ತಾನೆ ಅಂತಾ ಗೂಳಿ ಇದು' ಎಂದು ದನದ ವ್ಯಾಪಾರಿ ತರ್ಕಿಸುತ್ತಿರುವಾಗಲೇ ಮಠದ ಮೇಸ್ತ್ರಿ "ಮಠಕ್ಕೆ ಒಂದು ಸಾವಿರ ರೂಪಾಯಿ ಕಾಣಿಕೆ ಹಾಕಿ ಗೂಳಿ ತಗೊಂಡು ಹೋಗು" ಅಂದುಬಿಟ್ಟ. ಆ ಸಾಬಣ್ಣನಿಗೆ ಸಮಾಧಾನವಾದರೂ ತೋರಿಸಿಕೊಳ್ಳದೆ "ಬ್ಯಾಡಾ ಸ್ವಾಮಿ. ಇದು ಮಠದ್ದು ದೇವರ ಜಾನ್‌ವಾರ್, ನಾನು ಸಾವಿರದಿ ನ್ನೂರು ಕೊಡ್‌ತೀನಿ" ಅಂದು ಅಷ್ಟು ಕಾಣಿಕೆ ಕೊಟ್ಟು ರಸೀದಿ ಪಡೆದುಕೊಂಡ. ದಲ್ಲಾಳಿ ಕೃಷ್ಣಭಟ್ಟ ಕೂಡಲೇ ಮಠದ ಮೇಸ್ತ್ರಿಯಿಂದ ತನ್ನ ಪಾಲಿನ ಕಮಿಷನ್ ತಗೊಂಡ. ಅಷ್ಟಕ್ಕೆ ಸುಮ್ಮನಿರದ ಕೃಷ್ಣಭಟ್ಟ ಸಾಬಣ್ಣನಿಗೂ ಕಾಸು ಕೊಡುವಂತೆ ಗಂಟುಬಿದ್ದ.

ಇತ್ತ ಆ ಗೂಳಿ ತನ್ನ ದೇಹದ ಸುತ್ತ ನಡೆಯುತ್ತಿದ್ದ ಈ ಮಠದ ಮನುಷ್ಯರ ಲೌಕಿಕ ವ್ಯಾಪಾರ ಅರ್ಥವಾಗದೆ ಆಗೊಮ್ಮೆ ಈಗೊಮ್ಮೆ ಗುಟುರು ಹಾಕುತ್ತಾ ಸುಮ್ಮನೆ ನಿಂತಿತ್ತು. ಗೂಳಿ ಕೊಂಡ ಸಾಬಣ್ಣ ಕೃಷ್ಣಭಟ್ಟನ ಕಮಿಷನ್ ಬೇಡಿಕೆ ಬಗ್ಗೆ ವೇಗವಾಗಿ ಯೋಚಿಸುತ್ತಿದ್ದ. ಹೇಗೂ ಮಂಗಳೂರಿನಲ್ಲಿ ಗೂಳಿ ಕಡಿದರೆ 5-6 ಸಾವಿರ ಸಿಕ್ಕೇಸಿಗುತ್ತದೆ ಅಲ್ಲದೆ ಗೂಳಿ ಸಾಗಿಸುವಾಗ ಜೊತೆಗೆ ಜನ ಇದ್ದ ಹಾಗೂ ಆಯಿತು ಎಂದುಕೊಂಡು ಭಟ್ಟನಿಗೆ "ಮಂಗಳೂರಿಗೆ ನನ್ನ ಜೊತೆ ಬಾ. ಅಲ್ಲಿ ಒಂದು ಸಾವಿರ ಕೊಡುತ್ತೇನೆ" ಅಂದ. ಭಟ್ಟ ಒಪ್ಪಿಕೊಂಡ.

ಆ ಒಪ್ಪಂದದ ಮೇಲೆ ಭಟ್ಟ ಹಾಗೂ ಮುಸ್ಲಿಂ ವ್ಯಾಪಾರಿ ಇಬ್ಬರೂ ಮಾರನೇ ದಿನ ಬೆಳಗಿನ ಜಾವ ಗೂಳಿ ಹೊಡೆದುಕೊಂಡು ಆಗುಂಬೆ ಮೂಲಕ ಹೆಬ್ರಿ ತಲುಪಿದರು. ಅಷ್ಟರಲ್ಲಿ ಮಧ್ಯಾಹ್ನ 12 ಗಂಟೆ ಆಗಿ ಊಟ ಮಾಡಲು ಹೆಬ್ರಿಯ ಕಾಮತರ ಹೋಟೆಲ್ ಎದುರಿಗೆ ಗೂಳಿ ಕಟ್ಟಿಹಾಕಿ ಒಳಗೆ ಹೋಗಿ ಊಟಕ್ಕೆ ಕುಳಿತರು. ಹೋಟೆಲ್‌ನವ ಗೂಳಿಯನ್ನು ಗಮನಿಸಿ ಅದರ ಪೂರ್ವಾಪರ ವಿಚಾರಿಸಿದಾಗ ಇವರಿಬ್ಬರೂ ಒಂದೊಂದು ಅಸ್ಪಷ್ಟವಾಗಿ ಬೆಲೆ ಹೇಳಿದ್ದಾರೆ. ಹೆಸರು, ಊರು ಕೇಳಿದಾಗ ಒಬ್ಬ ಬ್ರಾಹ್ಮಣ, ಇನ್ನೊಬ್ಬ ಮುಸ್ಲಿಂ!



ಹೋಟೆಲ್ ಪೈಗೆ ಅನುಮಾನ ಬಂತು. ಆ ಪೈ ಹೆಬ್ರಿಯ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಬೇರೆ. ಅಷ್ಟು ಹೊತ್ತಿಗೆ ಮಧ್ಯಾಹ್ನದ ಊಟಕ್ಕೆ ಶಾಲೆಯಿಂದ ಹೊರಬಂದ ಹುಡುಗರು ಮತ್ತು ಅಲ್ಲಲ್ಲಿ ಓಡಾಡುತ್ತಿದ್ದ ಊರಿನ ಒಂದೈವತ್ತು ಜನ ಗೂಳಿಯ ವೈಭವದ ಆಕಾರ ನೋಡಲು ಅಲ್ಲಿ ಗುಂಪು ಸೇರಿದರು. ಅನುಮಾನ ಹೆಚ್ಚಾದ ಪೈ ಇವರಿಬ್ಬರ ಬಗ್ಗೆ ವಿಚಾರಿಸುವಂತೆ ಜನರನ್ನು ಪುಸಲಾಯಿಸಿದ. ಅಷ್ಟರಲ್ಲಿ ಈ ಕೃಷ್ಣಭಟ್ಟ ತಾನೇನೊ ಭಾರಿ ಗೂಳಿಯನ್ನೇ ಗೆದ್ದವನಂತೆ, ಗೂಳಿ ತನ್ನದೇ ಎನ್ನುವಂತೆ ಜನರ ಎದುರಿಗೆ ಪೋಸು ಕೊಡುತ್ತಾ ಪೈ ಹೋಟೆಲಿನಿಂದ ಬಕೆಟ್ ತೆಗೆದುಕೊಂಡು ನೀರು ತಂದು ಗೂಳಿಗೆ ಸುರಿದ. ಭಟ್ಟ ಈ ರೀತಿ ಗೋಸೇವೆ ಮಾಡುತ್ತಿದ್ದಾಗ ಜನ ಮುಸ್ಲಿಂ ವ್ಯಾಪಾರಿಯನ್ನು ಮಾತಿಗೆಳೆದು ಆ ಗೂಳಿ ಶೃಂಗೇರಿ ಮಠದ್ದು ಎಂದು ತಿಳಿದುಕೊಂಡರು. ಆ ವ್ಯಾಪಾರಿ ಮುಗ್ಧನಾಗಿ "ನಾವು ಮಠಕ್ಕೆ ದುಡ್ಡು ಕೊಟ್ಟು ಗೂಳಿ ತಂದಿದ್ದೇವೆ. ರಸೀದಿನೂ ಇದೆ" ಎಂದರೂ ನಂಬದೆ ಇವನು ಕಳ್ಳ ಎಂದುಕೊಂಡರು ಆ ಜನ. ಇಷ್ಟು ದೊಡ್ಡ ಗೂಳಿಗೆ ಜುಜುಬಿ ಸಾವಿರದಿನ್ನೂರು ರೂಪಾಯಿ ಬೆಲೆ ಅಂದಾಗ ಸಹಜವಾಗಿಯೇ ಅವರು ನಂಬಲಿಲ್ಲ, ಅಷ್ಟರಲ್ಲಿ ಹೋಟೆಲ್ ಪೈ ತನ್ನ ಭಾವ ಶೃಂಗೇರಿಯ ವಿಶ್ವ ಹಿಂದೂ ಪರಿಷತ್ ನಾಯಕನಿಗೆ ಫೋನ್ ಮಾಡಿದ.

ಆ ಹಿಂದೂವೀರನು ಮಠದಲ್ಲಿ ಏನೊಂದೂ ವಿಚಾರಿಸದೆ ಹೆಬ್ರಿಯ ನೆಂಟನ ಕರೆಗೆ ಅತಿಯಾಗಿ ಸ್ಪಂದಿಸಿಬಿಟ್ಟ. ತನ್ನ ಸಂಘದ ಗೆಳೆಯರಿಗೆ, ಶೃಂಗೇರಿಯ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷನಿಗೆ ಈ ಬ್ರೇಕಿಂಗ್ ನ್ಯೂಸ್ ಪ್ರಸಾರ ಮಾಡಿಬಿಟ್ಟ. ಅದಾದ ಒಂದು ಗಂಟೆಯೊಳಗಾಗಿ ಶೃಂಗೇರಿಯಲ್ಲಿ ಗುಲ್ಲೋಗುಲ್ಲು. ಮಠದ ಗೂಳಿಯನ್ನು ಯಾರೋ ಕದ್ದುಕೊಂಡು ಹೋಗುತ್ತಿದ್ದರಂತೆ. ವಿಶ್ವ ಹಿಂದೂ ಪರಿಷತ್‌ನವರು ಹಿಡಿದಿದ್ದಾರಂತೆ... ಹಾಗಂತೆ... ಹೀಗಂತೆ... ಹೀಗೆ!

ಅತ್ತ ಹೆಬ್ರಿಯಲ್ಲಿ ಜನ ಸಾಬಣ್ಣನನ್ನು ಕಳ್ಳ ಅಂತ ತೀರ್ಮಾನಿಸಿ ಆತನನ್ನು ತಳ್ಳಿ ನೂಕಿ ಗಲಾಟೆ ಮಾಡುವಾಗ ದನಗಳ ದಲ್ಲಾಳಿ ಕೃಷ್ಣಭಟ್ಟ 'ಪಣಂದೆ ಪದ್ರಾಡ' (ಹೇಳದೆ ಕೇಳದೆ ಪರಾರಿ)!

ಯಾವಾಗ ಭಟ್ಟ ಕ್ಷಣಾರ್ಧದಲ್ಲೇ ಕೃಷ್ಣ ಪರಮಾತ್ಮನಂತೆ ಸ್ಥಳದಿಂದ ಅದೃಶ್ಯನಾದನೋ ವ್ಯಾಪಾರಿ ಏಕಾಂಗಿಯಾದ. ಜನ ಅವನ ಹತ್ತಿರವಿದ್ದ ಮಠದ ರಸೀದಿ ನೋಡಿ ಸಾಬಣ್ಣನಿಗೆ ಹೊಡೆಯದೆ ಗೂಳಿಯನ್ನು ಕಿತ್ತುಕೊಂಡು "ನಿನಗೆ ಮಠದವರಿಂದಲೇ ದುಡ್ಡು ವಾಪಸ್ ಕೊಡಿಸುತ್ತೇವೆ" ಎಂದರು.

ಇತ್ತ ಶೃಂಗೇರಿಯಲ್ಲಿ ಎಮರ್ಜೆನ್ಸಿ ಬೈಠಕ್ ನಡೆಸಿದ ವಿಶ್ವ ಹಿಂದೂ ಪರಿಷತ್‌ನವರು ಗೂಳಿಯನ್ನು ಶೃಂಗೇರಿಗೆ ವಾಪಸ್ ತರಿಸುವ ತೀರ್ಮಾನ ಮಾಡಿದರು. ಸಂಜೆಯ ಹೊತ್ತಿಗೆ ಗೂಳಿ ಹೆಬ್ರಿಯಿಂದ ಬಂತು.

ಮಠದವರಿಂದಲೇ ಗಡೀಪಾರಾಗಿ, ಒಬ್ಬ ಬ್ರಾಹ್ಮಣ ದಲ್ಲಾಳಿಯ ಮೂಲಕ ಬಿರಿಯಾನಿ ಪಾತ್ರೆ ತಲುಪಬೇಕಿದ್ದ ಗೂಳಿ ಹೀಗೆ ಮರಣದಂಡನೆಯಿಂದ ಪಾರಾಯಿತು. ಶೃಂಗೇರಿಯಲ್ಲಿ ಆ ಗೂಳಿಯನ್ನು ಹೂವಿನ ಹಾರ ಹಾಕಿ ಮೆರವಣಿಗೆ ಮಾಡಿದರು. ಅನೇಕ ಮುತ್ತೈದೆಯರು ಆ ಗೊಡ್ಡು ಗೂಳಿಗೆ ಕುಂಕುಮ ಅರಿಶಿಣ ಹಚ್ಚಿ ತಮ್ಮ ಮಾಂಗಲ್ಯಕ್ಕೂ ಹಚ್ಚಿಕೊಂಡು ಆರತಿ ಬೆಳಗಿದರು. ಮಠದ ಅಧಿಕಾರಿಗಳ ವಿರುದ್ಧ ಜನ ಕೆಂಡಾಮಂಡಲವಾದರು. ಈ ಸುದ್ದಿ ಮಠಕ್ಕೂ ತಲುಪಿತು.

ಮಠದ ವಿರುದ್ಧ, ಮಠದ ಅಧಿಕಾರಿಗಳ ವಿರುದ್ಧ ಹೀಗೆ ಸಿಕ್ಕ ಅವಕಾಶವನ್ನು ಜನ ಚೆನ್ನಾಗಿ ಬಳಸಿಕೊಂಡರು. ಗುರುಗಳ ಗಮನಕ್ಕೆ ಬಾರದೆ ಮಠದ ಅಧಿಕಾರಿಗಳು ಏನೇನು ವ್ಯವಹಾರ ಮಾಡುತ್ತಿದ್ದಾರೆಂದು ದೂರಲು ಕಾದರು. ಮಠದ ಮರ್ಯಾದೆ ಮೂರು ಕಾಸಾಯಿತು. ಎಂದೂ ಜಾನುವಾರು ಕಟ್ಟದೆ, ಕೇವಲ ಹಿಂಡಿ ಮಾರಿ ಹಾಲು ಕೊಳ್ಳುತ್ತಿದ್ದ ಪೇಟೆಯ ಅಂಗಡಿಯವರು ಕೇಜಿಗಟ್ಟಲೆ ಹಿಂಡಿ ತಂದು ಗೂಳಿಗೆ ತಿನ್ನಿಸಿದರು. ಹೀಗೆ ಗೂಳಿಗೆ ಪುನಃ ರಾಜೋಪಚಾರ ಶುರುವಾಯಿತು. ಗುಣಗಾನ ಮಾಡಲಾಯಿತು. ಅಷ್ಟು ಚೆಂದ ಇಷ್ಟು ಚೆಂದ, ಇಂತಾ ಗೂಳಿಯನ್ನು ಕಟುಕರಿಗೆ ಕೊಟ್ಟ ಮಠದವರೇ ಕಟುಕರು ಅಂತಲೂ ಬೈಯಲಾಯಿತು. ಎಲ್ಲರೂ ಗೂಳಿಯನ್ನು ಮುಟ್ಟಿ ಮುಟ್ಟಿ ಕಣ್ಣಿಗೊತ್ತಿಕೊಂಡರು. ಅಷ್ಟು ವರ್ಷ ಮಠಕ್ಕೆ ಹೋಗಿ ಬರುತ್ತಿದ್ದರೂ ಅವರ್‍ಯಾರೂ ಆ ಗೂಳಿಯನ್ನು ನೋಡಿರಲೇ ಇಲ್ಲ. ಒಬ್ಬ 'ನೋಡಿ, ಎಷ್ಟು ಸಾಧು ಈ ಗೂಳಿ, ಕಾಲಡಿ ನುಗ್ಗಿದರೂ ಏನು ಮಾಡಲ್ಲ' ಎನ್ನುತ್ತಾ ಅದರಡಿ ನುಗ್ಗಿ ಸಾಹಸ ಪ್ರದರ್ಶಿಸಿದ.

ಇದಾದನಂತರ ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಮಠಕ್ಕೆ ನಿಯೋಗ ಹೋಯಿತು. ಆದರೆ ಮಠದ ಅಧಿಕಾರಿಗಳು ಗೂಳಿಯನ್ನು ವಾಪಸ್ ಪಡೆಯಲು ನಿರಾಕರಿಸಿಬಿಟ್ಟರು. ಗುರುಗಳು ಮಠದಲ್ಲಿರಲಿಲ್ಲ. ದಿನ ಕಳೆದುಬರುತ್ತಾರೆ ಅಂತಾ ಗೊತ್ತಾಯಿತು. ಅಷ್ಟರಲ್ಲಿ ಮೂರು ದಿನ ಆಗಿತ್ತು, ಗೂಳಿ ವಿಹಿಂಪ ಅಧ್ಯಕ್ಷನ ಮನೆಯಲ್ಲೇ ಇತ್ತು.

ಮಾರನೇ ದಿನ ಗುರುಗಳು ಬಂದಿರುವ ಸುದ್ದಿ ಬಂತು. ನಿಯೋಗ ಮತ್ತೆ ಮಠಕ್ಕೆ ಹೋಯಿತು. ಗುರುಗಳು ಇಂತ ಪುಣ್ಯದ ಕೆಲಸ ಮಾಡಿದ್ದಕ್ಕೆ ತಮ್ಮನ್ನು ಬಹಳವಾಗಿ ಹರಸುತ್ತಾರೆಂದು ಅತೀ ಉತ್ಸಾಹದಲ್ಲಿ ಹಾರಪ್ರೋತರನ್ನೆಲ್ಲಾ ಗುಂಪು ಕಟ್ಟಿಕೊಂಡು ಆ ನಿಯೋಗ ಹೋಗಿತ್ತು. ಅವರೆಲ್ಲಾ ಕಾತರದಿಂದ ಕಾದು ದರ್ಶನ ಸಿಕ್ಕಾಗ ಗುರುಗಳು "ಏನು ಸಮಾಚಾರ ಭಟ್ಟರೆ, ತುಂಬಾ ಜನ ಬಂದಿದ್ದೀರಿ?" ಎಂದರು.

"ಸ್ವಾಮಿ, ಮಠದ ಗೂಳಿಯನ್ನು ಯಾರೋ ಕದ್ದು ಕಟುಕರಿಗೆ ಕೊಟ್ಟು, ಅವರು ತಗೊಂಡು ಹೋಗುವಾಗ ರಕ್ಷಿಸಿ ತಂದಿದ್ದೀವಿ. ಗೂಳಿಯನ್ನು ತಾವು ಗೋಶಾಲೆಗೆ ಒಪ್ಪಿಸಿಕೊಳ್ಳಬೇಕು" ಎಂದು ಆಲಾಪಿಸಿದರು ನಿಯೋಗದ ಭಟ್ಟರು. "ನೋಡಿ ಭಟ್ಟರೆ, ನೀವು ಇದನ್ನೆಲ್ಲಾ ಯಾಕೆ ಮಾಡ್ಲಾ ಹೋಗ್ತೀರಿ? ಗೂಳಿ ನಮಗೆ ಉಪಯೋಗವಿಲ್ಲ, ಯಾರೋ ಉಪಯೋಗಿಸಿಕೊಳ್ಳುವರಿಗೆ ಕೊಟ್ಟಿದ್ದೇವೆ" ಎಂದರು ಗುರುಗಳು.

"ಇಲ್ಲಾ ಸ್ವಾಮಿ, ಅವರು ಕಟುಕರು."

"ನೋಡಿ ಅದು ನಮಗೆ ಸಂಬಂಧವಿಲ್ಲ, ಮಠದ ಆವರಣದಿಂದ ಹೊರಗೆ ಹಾಕಿದ ಮೇಲೆ ಅದನ್ನು ಯಾರು ಯಾವುದಕ್ಕೆ ಬಳಸುತ್ತಾರೆ, ಅದಕ್ಕೂ ನಮಗೆ ಸಂಬಂಧವಿಲ್ಲ."

-ಗುರುಗಳು ಕೊನೆಯ ಮಾತಾಡಿಬಿಟ್ಟರು.

ಇನ್ನು ಮಠದ ಕಾರ್ಯದರ್ಶಿಯೋ ಜನ 'ಗೂಳಿ' ಅನ್ನುತ್ತಿದ್ದಂತೆ ಎದ್ದು ಹೊರಟುಹೋದರು.

ಆಗ ಗೋಸೇವಕರ ನಿಜವಾದ ಸಮಸ್ಯೆ ಉಲ್ಬಣವಾಯಿತು. ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿಯ ಮನೆಯಲ್ಲಿ ಗೂಳಿಯ ವಾಸ್ತವ್ಯವಾಗಿ ಮೂರು ದಿನ ಆಗಿತ್ತು, ಯಾರ್‍ಯಾರೋ ತಂದು ಸುರಿದ ಹಿಂಡಿ ತಿಂದು, ದಿನಕ್ಕೆ ಹತ್ತು ಕೊಡ ನೀರು ಕುಡಿದ ಮೇಲೂ ಗೂಳಿ 'ಇನ್ನೇನಿದೆ' ಎನ್ನುವಂತೆ ಅವರ ಕಡೆ ನೋಡುತ್ತಿತ್ತು. ಗುರುಗಳು ಗೂಳಿಯನ್ನು ಮರಳಿ ಗೋಶಾಲೆಗೆ ಕರೆದುಕೊಳ್ಳುತ್ತಾರೆಂದು ನಂಬಿಕೊಂಡಿದ್ದವರಿಗೆ ನಿರಾಶೆಯಾಗಿತ್ತು.

ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿಯ ಹೆಂಡ ಮೊದಲ ದಿನ ಗೂಳಿಗೆ ಆರತಿ ಬೆಳಗಿ ಆನಂದ ಕಣ್ಣೀರು ಸುರಿಸಿ ಧನ್ಯಳಾಗಿ ಮಾಂಗಲ್ಯಕ್ಕೆ ಕುಂಕುಮ ಹಚ್ಚಿಕೊಂಡಿದ್ದಾಕೆಗೆ ಮೂರೇ ದಿನಕ್ಕೆ ಗೋಸೇವೆ ಸಾಕಾಗಿ ಹೋಗಿತ್ತು. ಬೀದಿ ತಿರುಗುವ ಜಾನುವಾರುಗಳಿಗೆ ಹಳಸಿದ್ದು ಹಳಸಿದ್ದು ಕೊಟ್ಟು, ಕುಂಕುಮ ಹಚ್ಚಿ ನಮಸ್ಕಾರ ಹಾ ಪುಣ್ಯ ಸಂಪಾದಿಸುವುದು ಸಲೀಸಾದ ಕೆಲ ಅನ್ನಿಸತೊಡಗಿತು ಆಕೆಗೆ. ಗೂಳಿ ಮಠಕ್ಕೆ ಹೋಗುತ್ತ ಎಂದು ನಂಬಿದ್ದ ಆಕೆಗೆ ಗುರುಗಳ ಕಠೋರ ತೀರ್ಮಾನ ಕೇಳಿ ಶಾಕ್ ಆಗಿತ್ತು. ಇನ್ನೆರಡು ದಿನ ಈ ರಾಕ್ಷ ಗೂಳಿ ಮನೆಯಲ್ಲೇ ಇದ್ದರೆ ಅದಕ್ಕೆ ನೀರು ಸೇದಿ ಸೇದಿ ತನ್ನ ಸೊಂಟ-ಬೆನ್ನು ಉಳಿಯುವುದಿಲ್ಲ ಎಂದ ಗಂಡನೊಂದಿಗೆ ರಗಳೆ ಶುರು ಮಾಡಿದಳು.

"ಗೂಳಿ ನಮ್ಮನೆಲಿ ಯಾಕೆ ಕಟ್ಟಬೇಕು? ಊರಲ್ಲೆಲ್ಲ ಜಾಗ ಇಲ್ಲವಾ? ಅಧ್ಯಕ್ಷರ ಮನೇಲಿ ಕಟ್ಟಲಿ" ಅಂತ ಜಗಳ ಮಾಡಿದಳು. ಹೆಂಡತಿಯ ಗಲಾಟೆ ತಾಳಲಾಗದ ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿ ಅಧ್ಯಕ್ಷರ ಮನೆ ಹೋದ.

"ಗೂಳಿ ನಮ್ಮೇನೇಲಿ ಕಟ್ಟಲು ಆಗಲ್ಲ ನನ್ನೆಂಡ್ತಿ ಊರಿಗೆ ಹೋಗ್ತಾಳಂತೆ, ನಾನ ಇರಲ್ಲ, ಗೂಳಿಗೆ ಬೇರೆ ಕಡೆ ವ್ಯವ ಮಾಡಿ" ಅಂದ ಅಧ್ಯಕ್ಷ.

ಮತ್ತೆ ತುರ್ತು ಬೈಠಕ್ ನಡೆಯಿತು ಸರದಿಯ ಮೇಲೆ ಒಬ್ಬೊಬ್ಬರು ಗೂ ಕಟ್ಟಿಕೊಳ್ಳುವುದು ಅಂತಾ ತೀರ್ಮಾ ವಾಯಿತು. ಅದರಂತೆ ಗೂಳಿ ಮೊದಲ ಅಧ್ಯಕ್ಷರ ಮನೆಗೆ ಹೋಯಿತು. ಗೂ ಶೃಂಗೇರಿಗೆ ವಾಪಸ್ ಬಂದ ದಿನ ಹಾಕಿ ಹೂವಿನ ಹಾರ ಅಷ್ಟು ಹೊತ್ತಿ ಗೋರಕ್ಷಕ ಕಾರ್ಯಕರ್ತ ಉತ್ಸಾಹದಂತೆಯೇ ಬಾಡಿಹೋಗಿತ್ತು.

ಅಧ್ಯಕ್ಷರ ಮನೆಯು ಒಂದೇ ವಾರ ರಣರಂಗವಾಯಿತು. ಗೂಳಿ ನೋಡಲಿಕ್ಕೆ ಬರುವ ಜ ಈಗ ಅತ್ತ ಸುಳಿಯುತ್ತಿರಲಿಲ್ಲ. ಅದರ ಹೊಟ್ಟೆ ತುಂಬಿಸುವುದೇ ದೊಡ್ಡ ಸಮಸ್ಯೆ ಆಗಿತ್ತು. ಕಲೆಕ್ಷನ್ ಮಾಡಿದ್ದ ದುಡ್ಡು ಕೂಡ ಕರಗುತ್ತಾ ಬಂದಿತ್ತು, ಹೆಬ್ರಿಯ ಗೂಳಿ ಬಿಡಿಸಿಕೊಂಡಾಗ ಸಾಬಣ್ಣನಿಗೆ ಕೊಟ್ಟ ಸಾವಿರದಿನ್ನೂರು ಮತ್ತು ಶೃಂಗೇರಿಗೆ ಗೂಳಿ ಸಾಗಿಸ ನೂರು ರೂಪಾಯಿ ಸೇರಿ ಒಟ್ಟು ಸಾವಿರದ ಮುನ್ನೂ ಆಗಲೇ ಖರ್ಚಾಗಿತ್ತು. ಈಗ ನೋಡಿದರೆ ಹಾದಿಬೀದಿ ದನಗಳೆಲ್ಲಾ ಗೂಳಿಯನ್ನು ಮೂಸಿಕೊಂಡು ಅಧ್ಯಕ್ಷ ಮನೆಯತ್ತ ಬರಲಾರಂಭಿಸಿದ್ದವು. ಅವನ್ನು ನೋಡಿ ಈ ಗೂಳಿ ಡೈನೋಸಾರ್ ತರಾ ಕೂಗುತ್ತಿತ್ತು... ಹೀಗೆ ಗೂ ರಕ್ಷಣೆಗೆ ನಿಂತವರಿಗೆ ಎದುರಾಗಿದ್ದು ಒಂದಾ ಎರಡಾ ಸಮಸ್ಯೆಗಳು.....! ವಿಶ್ವ ಹಿಂದೂ ಪರಿಷತ್ ಅಧ್ಯಕ್ಷರಿ ಬೆಣೆ ಕೀಳಲು ಹೋಗಿ ಬಾಲ ಸಿಕ್ಕಿಕೊಂಡಂತೆ ಆಗಿತ್ತು ಎಷ್ಟು ಬೈಠಕ್ ಮಾಡಿದರೂ ಸಮಸ್ಯೆ ದೊಡ್ಡದೇ ಆಗುತ್ತಿತ್ತು ದಿನೇದಿನೇ ಸಗಣಿ ರಾಶಿಯೂ ದೊಡ್ಡದಾಯಿತ ಹಾಗೂಹೀಗೂ 15 ದಿನ ಆಯಿತು. ಊರಿನ ಜ ಗೂಳಿಯನ್ನು ಮರೆತೇಬಿಟ್ಟರು. ಅಧ್ಯಕ್ಷರ ಪಾಡು ನಾಯಿ ಪಾಡಾಯಿತು. ಸಗಣಿ, ವಾಸನೆ, ಗಂಜಲ, ದಿನಕ್ಕೆ 2 ಕಟ್ಟು ಹುಲ್ಲಿನ ರಾಶಿ, ಹಿಂಡಿ, ಕೊಡಗಟ್ಟಲೆ ನೀರು.

ಯೋಚಿಸಿ ಯೋಚಿಸಿ ಕೊನೆಗೆ ಅಧ್ಯಕ್ಷರಿಗೆ ವಿ ಹಿಂದೂ ಪರಿಷತ್‌ನ ಅವತ್ತಿನ ಆವೇಶ ಕರಗಿಹೋಗಿತ ಅವರೀಗ ಮಾಮೂಲಿ ಮನುಷ್ಯರಂತೆ ಯೋಚಿಸಲ ಶುರು ಮಾಡಿ ದ್ದರು.

ಕೊನೆಗಾದದ್ದು ಇಷ್ಟೆ.

ಅಧ್ಯಕ್ಷರು ಒಂದು ರಾತ್ರಿ ಹಗ್ಗ ಬಿಚ್ಚಿ ಗೂಳಿಯನ ಓಡಿಸಿದರು. ಇನ್ನೊಂದು ಗುಸುಗುಸು ಪ್ರಕಾರ ಯಾರಿ ಶೃಂಗೇರಿಯಲ್ಲಿ ಗೂಳಿಯನ್ನು ಎರಡು ಸಾವಿರಕ್ಕೆ ರಹಸ್ಯವಾ ಮಾರಿದರಂತೆ. ಗೂಳಿ ಮಂಗಳೂರು ರಸ್ತೇಲಿ ಯಾರಿಗೊ ಕಾಣಿಸಿತಂತೆ ಇತ್ಯಾದಿ.....

ಗೋಹತ್ಯೆ ನಿಷೇಧದ ಬಗ್ಗೆ ವಿಪರೀತವಾ ಮಾತನಾಡುವ ಜನರನ್ನು ನೋಡುತ್ತಾ ನನಗೆ ಈ ಘಟ ನೆನಪಾಗಿ ಇಲ್ಲಿ ಹೇಳಿದ್ದೇನೆ.

ಇನ್ನೊಂದು ಕಡೆ ಉಡುಪಿ ಮಠದಲ್ಲೂ ತುಂಬ ಜಾನುವಾರುಗಳಿವೆ. ಅಲ್ಲಿ ವಯಸ್ಸಾದ ದನ, ಗೂಳಿಗಳನ್ನ ಏನು ಮಾಡುತ್ತಾರೆ? ಮಠದ ಸ್ವಾಮಿಗಳ ಆ ವಲಯದಲ್ಲಿರುವ ಉಪಾಧ್ಯರು ಹೇಳುವ ಪ್ರಕಾರ ಅ ಸಮುದ್ರದ ಮಧ್ಯೆ ಕುದ್ರು ಅಂತ ಸಣ್ಣಸಣ್ಣ ದ್ವೀಪಗಳಿ ಅಲ್ಲಿ ಬಿಟ್ಟುಬಿಡುತ್ತಾರಂತೆ.

ಅಲ್ಲಿ ಗೋವುಗಳ ಗತಿ?

ಹುಲ್ಲು ನೀರಿಲ್ಲದೆ ಸಾಯುತ್ತವೆ ಅಷ್ಟೆ!

ಗೋ ರಕ್ಷಕರ ಅಸಲಿ ಮುಖ ಇದು.

● ಕಲ್ಕುಳಿ ವಿಠಲ ಹೆಗ

ರೇಪ್ ಮಾಡಿದೋನೆ ಆಸುಪತ್ರಿಗೋದ್ನಂತೆ ನೋಡಿದ್ಯಂಗದೆ!

ಜುಮ್ಮಿಯ ಎದುರಾಳಿಗಳು ಅನುಮಾನ ಹುಟ್ಟಿಸಿದ ...ಾರರಿಗೆ ಹಣ ಕೊಡುತ್ತಿದ್ದಾರೆ ಎಂಬ ಸುದ್ದಿ ತಲುಪಿತು. ... ಪ್ರತಿಯಾಗಿ ಏನು ಮಾಡಬೇಕೆಂದು ಯೋಚಿಸಿದ ... "ನಾವು ಹಣ ಕೊಡುವುದು ಬೇಡ"ವೆಂದು ಯೋಚಿಸಿ ... ತರಿಸಿ ಹಂಚಿದ. ಹಂಚಿದ್ದು ಅಂದರೆ ಬಾಗಿಲು ...ಸಿ ಮನೆಯೊಳಕ್ಕೆ ಕೋಳಿ ಎಸೆಯುತ್ತಿದ್ದ.

ಯ ಲು ಸೀ ಮ
ಕಟ್ಟೆಪುರಾಣ
ಬಿ. ಚಂದ್ರೇಗೌಡ

...ಮೊಳಗಿದ್ದವರು ಅನುಭವಿ ನರಿಗಳಂತೆ ಗಬಕ್ಕನೆ ...ನು ಕಾರ ಅರೆಯಲು ರೆಡಿಯಾಗುತ್ತಿದ್ದರು. ಇದನ್ನು ...ತ್ತಾಗಿ ಹೇಳುತ್ತಿದ್ದಾಗ ಕಾಳಮಾವನಿಗೆ ಹಣ ...ುವುದಕ್ಕಿಂತ ಕೋಳಿಕೊಟ್ಟಿದ್ದು ಸರಿಯೆ ಎಂದು ...ದಲಗೊಂಡು ಯೋಚಿಸುತ್ತಿದ್ದಾಗ, ವಾಟಿಸ್ಸೆ ಬಂದು,

"ಅಂತೂ ಯಲಕ್ಷನ್ ಮುಗಿತು ದ್ವಡಪ್ಪ. ಇನ್ನೇನಿದ್ರು ...ದೇಳನೆ ತಾರೀಖಿನ ಮ್ಯಾಲೆ ಮಾತಾಡಬವುದು" ...

"ಅಂಗರೆ ಮುಂದಿನ ಸ್ವಾಮಾರ ಕೌಂಟಿಂಗೆ" ಎಂದ ...

"ಊ ಕಣೊ ಉಗ್ರಿ. ಬೂತಿನ್ವಳಿಕೆ ಸಿಕ್ಕಂಡಿರೋರು ...ಗೆ ಬರದು ಮಂಡೆಯೆ."

"ಆದ್ರು ಇವುನ್ಯಲ್ಲ ಚುನಾವಣೆ ಅನ್ನಕ್ಕಾದತ್ಲ?" ಎಂದ ...ಮಾವ.

"ಇಲ್ಲ ದ್ವಡಪ್ಪ, ಇದು ಚುನಾವಣೆನೂ ಅಲ್ಲ ...ಾಕ್ರಸೀನೂ ಅಲ್ಲ. ಟೋಟಳಿ ಈ ವ್ಯವಸ್ಥೆ ರದ್ದು ...ದದು ಒಳ್ಳೆದು" ಎಂದ ವಾಟಿಸ್ಸೆ.

"ಅದ್ಯಾಕ್ಲ ಅಂಗಂತೀ?"

"ನೋಡಕ್ಕ, ಹಿರೀಸೇವೆ ಅತ್ರ ಒಂದು ಪಂಚಾತಿಲಿ ...ವಳೊ ಒಬ್ಬಳು ಅಧ್ಯಕ್ಷೆ ಆಗ್ಯವುಳೆ. ಅವುಳಿಗೂ ಈ ...ರಸಾಬಿ ತಂದ ಮಂಡಲ ಪಂಚಾತಿಗೂ ಯಾವ ...ಧನೂ ಇಲ್ಲ ಆ ತರದೋಳು."

"ಜುಮ್ಮಿನೂ ಮದ್ಲು ಅಂಗೆ ಅಲವೆ ಇದ್ದಿದ್ದು?"

"ಇದ್ರೂ ಅಕ್ಕನಿಗೆ ಗೈಡ್ ಮಾಡಕ್ಕೆ ನಾವ್ಯಲ್ಲ ಇದ್ವೊ. ...ಸು ತಪ್ಪು ಮಾಡದಂಗೆ ಬುದ್ದಿ ಹೇಳೋಕೆ ನಮ್ಮ ... ಇದ್ದ. ಆದ್ರೆ ಆ ಹೆಂಗಸಿಗೆ ಗಂಡ ಬುಟ್ರೆ ...ಸೂ ಇರಲಿಲ್ಲ. ಆ ಪುಣ್ಯಾತ್ಮ ಹೆಡತಿಗೆ ಏನೇಳಿದ್ದ ... ನೀನು ಯಾವುದಕ್ಕೆ ಸಯಿನು ಮಾಡಬೇಕಾದ್ರು ...ುಪಾಯಿ ಇಲ್ದೆ ಸಯಿನು ಮಾಡಬ್ಯಾಡ ಅಂತ ಹೇಳಿದ್ದ. ...ತರ ಪಂಚಾತಿಲಿ ಯಾವುದೇ ಅರ್ಜಿ ಇದುದ್ರು ... ಇನ್ನೂರು ಕೇಳತಿದ್ಲು."

"ಅವುಳು ವಳ್ಳೆ ಇವುಳೆಯ ಬುಡು" ಎಂದು ಸೀರ ...

ಪಾಪ ಅವುಳು ಅದನ್ನಲ್ಲ ಯೋಚನೆ ಮಾಡಿರಲಿಲ್ಲ ಚಿಗಪ್ಪ. ಗಂಡ ಹೇಳಿದಂಗೆ ಕೇಳತಿದ್ಲು. ನೀನು ಓಟು ಮಾಡಿದ ವ್ಯಕ್ತಿ ನಿನ್ನ ಹೊಲದತ್ರ ಸಿಗಬೇಕು. ಅವುನಿಂದ ನಿಮ್ಮ ಪ್ರಾಬ್ಲಂ ಸಾಲು ಆಗಬೇಕೆ ಹೊರತು ನೀನು ಮಂಡ್ಯಕ್ಕೊ ಇಲ್ಲ ಬೆಂಗಳೂರಿಗೊ ಬರದು ಬೇಡ ಅಂತ ನಜೀರ್ ಸಾಬ್ರು ಹೇಳಿದ್ರು. ಅದೇ ತರ ಈ ಮಹಿಳೆ ಒಂದು ದಿನ ಹೊಲದತ್ರ ಇದ್ಲು, ಹೆಲ್ತ ಡಿಪಾರ್ಟ್‌ಮೆಂಟಿನ ಸಿಬ್ಬಂದಿ ಒಂದು ಮೀಟಿಂಗ್ ಅದೆ ಬಾರವ್ವ ಅಂತ ಕರಿಯಕ್ಕೆ ಬಂದ."

"ಅಲ್ಲಾ, ಪಂಚಾತಿ ಅಧ್ಯಕ್ಷೆ ಕ್ಯಳಗೆ ಸರಕಾರಿ ದಾಗಂಟ್ರು ಕ್ಯಲಸ ಮಾಡಂಗಾಗ್ಯದಲ್ಲಾ ಅದಕ್ಕಿಂತ ಇನ್ನೇನು ಬೇಕು" ಎಂದ ಉಗ್ರಿ.

"ಇರೊ ಉಗ್ರಿ ನಂದ ಮುಗುಸ್ತಿನಿ. ಹೆಲ್ತ ಡಿಪಾರ್ಟಮೆಂಟಿನ ಹುಡುಗ ಅರ್ಜಿ ಹಿಡಿದು ಮೀಟಿಂಗಿಗೆ ನಾನು ಬತ್ತಿನಿ ಅನ್ನೊ ಅರ್ಜಿಗೆ ಸಯಿನು ಮಾಡು ಅಂತ ಎಷ್ಟು ಗೋಗರದ್ರೂ ಸಯಿನು ಮಾಡದೆ ನೂರುಪಾಯಿ ಕೇಳಕ್ಕೆ ಶುರು ಮಾಡಿದ್ಲು. ಕಡಿಗೆ ಅವುಳಗಂಡನೂ ವಲ್ತಕ್ಯೋ ಬಂದ. ಅವುನೂ ಅಂಗೆ ಅಂದ. ಆಗ ಆ ಹುಡುಗ ಡಿ.ಎಚ್.ಓ. ಆಫೀಸರ್‌ಗೆ ಫೋನ್ ಮಾಡಿ 'ಆವಮ್ಮ ಸಯಿನು ಮಾಡಕ್ಕೆ ನೂರುಪಾಯಿ ಕೇಳ್ತ ಅವುಳೆ ಸಾರ್' ಅಂದ. ಅದಕ್ಕೆ ಡಿಎಚ್‌ಓ ಏನಂದಾ ಅಂದ್ರೇ 'ನೋಡಪ್ಪಾ ಆಯಮ್ಮನ ಸಯಿನು ಬೇಕೇ ಬೇಕು. ಇಲ್ಲ ಅಂದ್ರೆ ಪೋಲಿಯೋ ಕಾರ್ಯಕ್ರಮಕ್ಕೆ ನನ್ನ ಕರಿಲಿಲ್ಲ ಅಂತ ತಕರಾರು ತಗಿತಳೆ. ಆಗ ನಿನಿಗೆ ಮೆಮೊ ಕೊಡ್ತಿನಿ' ಅಂದ.

"ತಗಳಪ್ಪ, ತಿನ್ನಲಿಲ್ಲ ಉಣ್ಣಲಿಲ್ಲ ಆದೇನೊ ಬಂದು ತಲೆ ತಿವಿತು ಅನ್ನಂಗಾಯ್ತು."

"ಅಂಗೇ ಆಯ್ತು ಕಣೊ ಉಗ್ರಿ. ಪಾಪ ಆ ಹುಡುಗ ನೂರುಪಾಯಿ ತಗುದು ಆ ಬೇವರ್ಸಿ ಮುಂದೆ ಕೈಗೆ ಮಡಗಿದೇಟಿಗೆ ಏನನ್ನಬೇಕವುಳು? 'ಅಲ್ಲಾ ಕಣೊ ಹುಡುಗ, ಅವುರು ಕೋಟಿಗಳಿಸಿರೊ ದುಡ್ನ ಜೇಬಲ್ಲಿ ಮಡಿಕಂಡು ನಮ್ನೆ ಆಟ ಆಡುಸ್ತಿಯಲ್ಲ, ನೀನಿನ್ನಂಥೋನು' ಅಂದ್ಲು. ಇವುನು ಏಟಿಲ್ಲ ಆರಿತ ನಂಬಲೇಯಿಲ್ಲ ಅವುಳು. ಬಹುಶಃ ಇಡೀ ಕರ್ನಾಟಕದ ನಾನಾ ಕಡೆ ಇಂಥ ಧೀಮಂತ ಮಹಿಳೆಯರು ಅಧಿಕಾರದಲ್ಲಿದ್ರು, ಅಂತೂ ತೊಲಗಿದ್ರು ಅಂತ ಸಮಾಧಾನದ ನಿಟ್ಟುಸಿರು ಬುಡಂಗಿಲ್ಲ ದ್ವಡಪ್ಪ. ಈಗಾಗ್ಲೆ ಇಂಥೋರು ಚುನಾವಣೆಗೆ ನಿಂತು ಮೂರು ಲಕ್ಷ ಖರ್ಚು ಮಾಡಿ ರಿಜಲ್ಟಿಗಾಗಿ ಕಾಯ್ತಾ ಅವುರೆ" ಎಂದ ವಾಟಿಸ್ಸೆ."

"ಅಂತೂ ಗ್ರಾಂಪಂಚಾತಿ ಚುನಾವಣೆಗೂ ಗಬ್ಬೆದ್ದು ಹೋದೊ ಅನ್ನು."

"ಊ ದ್ವಡಪ್ಪ, ಕೋಳಿ, ಡ್ರಿಂಕ್ಸು, ರವುಕೆ ಕಣ, ಸೀರೆ, ಮೂಗುಬೊಟ್ಟು ಕೊಟ್ಟು ಗೆದ್ದು ಬರೊ ಜನಗಳತ್ರ ಅಧಿಕಾರ ವಿಕೇಂದ್ರಿಕರಣದ ಚರ್ಚೆನೂ ಇಲ್ಲ, ನಜೀರಸಾಬಿ ಕನಸೂ ಇಲ್ಲ, ಪಂಚಾತಿಗೆ ದುಡ್ಡು ಬರ್ತದಂತೆ, ಕಮೀಷನ್ ಸಿಗತದಂತೆ, ಇಷ್ಟೇ ನೋಡು ದ್ವಡಪ್ಪ" ಎಂದು ವಾಟಿಸ್ಸೆ ಹೇಳುವಾಗ ಅದನ್ನ ಕೇಳಿಸಿಕೊಳ್ಳಲು ಇಷ್ಟಪಡದ ಜುಮ್ಮಿ,

"ಅದು ಇದ್ದಿದ್ದೆಯಾ. ಹರತಾಳು ಹಾಲಪ್ಪಂದು ಎಲ್ಲಿಗೆ ಬತ್ಲ?" ಎಂದಳು.


"ಅವುನು ಅರೆಸ್ಟಾದೇಟಿಗೆ ಆಸುಪತ್ರಿಗೆ ಅಡಮಿಟ್ಟಾದ ಕಣಕ್ಕ."

"ನೋಡಿದ್ಯಂಗದೆ, ರೇಪು ಮಾಡಿದೋನೆ ಆಸುಪತ್ರಿಗೋದ ಅಂದ್ರೆ ಅವುನಿಗೇನಾಗಿತ್ತೊ ಅಂತ?" ಎಂದ ಸೀರ.

"ಏ, ರೇಪಾಗಿ ಆಗ್ಲೆ ಆರು ತಿಂಗಳಾಗಿತ್ತಂತೆ ಚಿಗಪ್ಪ. ಅದು ಔಟಾಗಿದ್ದು ಈಗ. ಕೆಲವು ಮ್ಯಾಟ್ರು ಕೂಡ್ಲೆ ಗೊತ್ತಾಯ್ತದೆ, ಕೆಲವು ಟೈಂ ತಗತವೆ. ಈ ಮ್ಯಾಟ್ರು ಅಂಗೇಯ ಆರು ತಿಂಗಳು ಲೇಟಾಯ್ತು."

"ಅದ್ಯಾಕ್ ಲೇಟಾಯ್ತು?"

"ಅದ ಹೇಳಕ್ಕೆ ಬರದಿಲ್ಲ ಕಣಕ್ಕ. ಕೇಸು ಆಗ್ಲೆ ಪೊಲೀಸ್‌ನೋರ ಕೈಲಿ ಇರದ್ರಿಂದ ಇವತ್ತು ನಾನೇನಾರ ಹೇಳಿದ್ರೆ ಪೊಲೀಸ್‌ನೋರು ನನ್ನನ್ನೂ ಸಾಕ್ಷಿಗೆ ಹಿಡಕತ್ತರೆ. ಈಗ ಪೊಲೀಸ್ನೋರು ಯಂಗಾಗ್ಯವುರಪ್ಪ ಅಂದ್ರೆ ಕಳ್ಳನ್ನ ಹಿಡಿರಪ್ಪ ಅಂದ್ರೆ 'ಕಳ್ಳ ನಿನಿಗೇನಾರ ಗೊತ್ತಾ, ಹೇಳ್ತಿಯೋ ಇಲ್ವೊ' ಅಂತ ಹೇಳಿದೋನಿಗೆ ನೋಟೀಸ್ ಕೊಡ್ತರೆ ಗೊತ್ತೆ?"



"ಅಲ್ಲಾ ಕಂಡ್ಯ, ಇಲ್ಲಿ ನೀನೇಳಿದ್ರೆ ಪೊಲೀಸ್‌ನೋರಿಗೆ ಯಂಗೆ ಗೊತ್ತಾದತ್ಲ?"

"ಯಂಗೆ ಅಂದ್ರೆ ಇದೇ ನಮ್ಮ ಸೀರ ಚಿಗಪ್ಪ ಸಂತೆಲ್ಯಲ್ಲ ಮಾತಾಡಿಬುಡ್ತನೆ. ಪೊಲೀಸ್‌ನೋರು ಸುದ್ದಿ ಮೂಲ ಕೆದಕಿ ಯರಡು ಬುಟ್ಟಾಗ ನನ್ನೆಸರ ಹೇಳ್ತನೆ. ಆಗ ಪೊಲೀಸ್‌ನೋರು ಬಂದು ನನ್ನ ತಗಂಡೋಗಿ ವರ್ಕ್ ಮಾಡ್ತರೆ."

"ಅಂಗೇನು ಆಗದಿಲ್ಲ ಹೇಳ್ಳ."

"ಓಹೊ, ನಮ್ಮಕ್ಕನಿಗೆ ಯಲಕ್ಷನ್ನು ರಿಜಲ್ಟಿನ ವಿಷಯ ಬ್ಯಾಡವಾಗ್ಯದೆ. ಅದ್ಕೆ ಹಿಂಗೆ ಪುಸಲಾಯಿಸ್ತಾ ಅವುಳೆ. ಅಲವೇನಕ್ಕ?"

"ಅಂಗೇನುಯಿಲ್ಲ, ಹೇಳ್ಳ."

"ನೋಡಕ್ಕ, ಈ ಹರತಾಳು ಹಾಲಪ್ಪ ಮಡಿಕಂಡಿರೊ ಕಾಯಿಲೆ ನೋಡಿದ್ರೆ ಇವುನಿಗ್ಯಾಕ್ ಬೇಕಿತ್ತು ರೇಪು ಅಂತ ಥಿಂಕ್ ಮಾಡಂಗಾಯ್ತದೆ. ನೋಡಕ್ಕೆ ಮಾತ್ರ ಚನ್ನಾಗೇ ಕಾಣ್ತನೆ. ಆದ್ರೆ ಅವುನತ್ರ ಇರೋ ಕಾಯಿಲೆ ಕಾರಣಕ್ಕೆ ಜೈಲಿಂದ ತಪ್ಪಿಸಿಗಂಡು ಆಸುಪತ್ರೆಲಿರಂಗಾಯ್ತು."

"ಮದಿವಾಗಿಲ್ಲವೇನ್ಲ ಅವುನಿಗೆ?"

"ಇದೇನಕ್ಕ ಹಿಂಕೇಳ್ತಿ? ಸಾಮಾನ್ಯವಾಗಿ ಇಂಥ ವ್ಯಭಿಚಾರಿಗಳು ಮದಿವಾಗಿರ್ತರೆ. ಬಂಗಾರಪ್ಪನೇ ಮುಂದೆ ನಿಂತು ಅವುನೆದ್ದಿ ಅಕ್ಕನ ಮಗಳ ಹಾಲಪ್ಪನಿಗೆ ಕೊಟ್ಟು ಮದುವೆ ಮಾಡಿದ್ದನಂತೆ. ಆದ್ರು ಹಾಲಪ್ಪ ಅರ್ಧ ರಾತ್ರಿಲಿ ಸಿಗಾಯ್ಕಂಡ" ಎಂದು ವಾಟಿಸ್ಸೆ ಹೇಳುತ್ತಿದ್ದಾಗ ಇದ್ದಕ್ಕಿದ್ದಂತೆ ಸಿಟ್ಟಾದ ಕಾಳಮಾವ,

"ಆ ಬೋಳಿಮಗನ ಸುದ್ದಿಯ ಇಲ್ಲಿ ಮಾತಾಡಬ್ಯಾಡಿ ಕಂಡ್ರಿಲಾ" ಎಂದ.

"ಇನ್ಯಾವ ಮ್ಯಾಟ್ರು ಮಾತಾಡ್ಬಿ ದೊಡ್ಡಪ್ಪ? ಪಂಚಾತಿ ಚುನಾವಣೆ ಮಾತಾಡನ ಅಂದ್ರೆ ಜುಮ್ಮಕ್ಕನಿಗೆ ಬೇಜಾರು. ಹಾಲಪ್ಪನ ಮ್ಯಾಟ್ರು ತಗದ್ರೇ ನಿನಿಗಾಗದಿಲ್ಲ, ಎಡೂರಪ್ಪನ ಸುದ್ದಿ ತಗದ್ರೆ ಯಾರಿಗೂ ಆಗದಿಲ್ಲ, ಮಳೆಬೆಳೆ ವಿಸಿಯ ಮಾತಾಡಂಗಿದ್ದತೇ? ಸಾಯಿತ್ಯ ಮಾತಾಡನ ಅಂದ್ರೇ ಸಾಯಿತಿಗಳ್ಯಲ್ಲ ದಿವಂಗತರಾದ್ರು. ಸಿನುಮಾ ಸುದ್ದಿ ತಗಿಯಂಗೇಯಿಲ್ಲ. ನೀನೇ ಹೇಳು ದ್ವಡಪ್ಪ ಯಾವ ಸುದ್ದಿ ಮಾತಾಡನ ಅಂತ" ಎಂದು ವಾಟಿಸ್ಸೆ ಹೇಳಿದಾಗ ಕಾಳಮಾವ ಬಾಯಿಬಿಡಲಿಲ್ಲ, ಆಗ ಜುಮ್ಮಿ,

"ದ್ವಡ್ಡೇಗೌಡನ ಮಮ್ಮಗಳ ಮದುವಿಗೊಕ್ಕುಲವೇನ್ಲ?" ಎಂದಳು.

"ಮದುವೆಗಳು ಯಾಕೋ ಬೋರಾಗ್ಯವೆ ಕಣಕ್ಕ. ದ್ವಡ್ಡೇಗೌಡ ಬಂದು ಇನ್ವಿಟೇಶನ್ ಕೊಟ್ಟ. ಆದ್ರೆ ಮಂಡ್ಯದಿಂದ ಬರಕ್ಕೆ ಹೋಗಕ್ಕೆ ಬಸ್‌ಚಾರ್ಜು ಎಷ್ಟಾಯ್ತದಕ್ಕ? ಮದಿವಿಗೆ ಕರಿಯೋರು ಬಸ್ ಚಾರ್ಜನೂ ಕೊಟ್ರೆ ಎಲ್ಲಿಗಾರ ಹೋಗಿ ಬರಬವುದು, ಎಷ್ಟು ಮದಿವಿಗಾರ ಹೋಗಬುವುದು."


"ದ್ವಡ್ಡೇಗೌಡನಿಗೆ ಆಗ್ಲೆ ಮಮ್ಮಗಳಿದ್ದಳೇ?" ಎಂದ ಕಾಳಮಾವ.

"ಊ ಕಣಮಾವ. ನಾಕಜನ ಗಂಡು ಮಕ್ಕಳವುನಿಗೆ. ಬೇಕಾದೋಟು ಮಮ್ಮಕ್ಕಳವೆ. ಮದುಲ್ನೆ ಮಗನ ಮಗಳಿಗೆ ಮದಿವಂತೆ."

"ಮದುವೆ ಸರಿಯವ್ವ. ಸಿಟಿ ಸೇರಿಕಂಡೆ ಅಂತ ಊರತ್ರದ ಜಮೀನ ಮಾರಿಕಂಡೋದ. ತಮ್ಮನಿಗಾರ ಬುಡಬವುದಿತ್ತು, ಏನು ಬ್ಯಾಡ ಇಪ್ಪತ್ತೈದು ತೆಂಗಿನಮರ ಬುಟ್ಟಿದ್ರೆ ಅವುನು ಯೋಗ್ಯ ಅನ್ನಬವುದಿತ್ತು, ಯಲ್ಲಾನು ಮಾರಿಕಂಡು ಸಿಟಿ ಸೇರಿಕಂಡು ಲಗ್ನಪತ್ರಿಕೆ ಕೊಡಕ್ಕೆ ಬಂದಿದ್ನಲ್ಲಾ, ಆಗ ಸತ್ತಿದ್ರೆ ಅವುನ್ನ ಎಲ್ಲಿ ಧಪನ್ ಮಾಡಬೇಕಾಗಿತ್ತು ಹೇಳು?" ಎಂದು ಕಾಳಮಾವ ಭೂಮಿ ಇದ್ದವನು, ತನ್ನ ಸಂಸ್ಕಾರಕ್ಕಾದರೂ ಒಂದಿಷ್ಟು ಭೂಮಿ ಇಟ್ಟುಕೊಳ್ಳಬೇಕು ಎಂಬಂತೆ ಮಾತನಾಡುತ್ತ ತನಗೇ ತಾನು ಹೇಳಿಕೊಂಡಂತೆ ಸುಮ್ಮನಾದ.

●

ನಂಬಿದವರನ್ನು ವಂಚಿಸಕೂಡದು




...ಇದೆಲ್ಲ ಶುದ್ಧ ದಡ್ಡತನ. ನಾನು ಸಿಗರೇಟ್ ಸೇದಿದರೆಷ್ಟು, ...ದೆಷ್ಟು-ಅದೊಂದು ಅತ್ಯಂತ ಸಣ್ಣ ವಿಷಯವಾಗಬೇಕು. ನಾನು ಅವೊತ್ತು ...ಬಗ್ಗೆ ಬರೆಯಬಾರದೆಂದಿದ್ದೆ, ನನ್ನ ನಿರ್ಧಾರ ಅಚಲವಾಗಲಿ ಎಂಬ ...ಕ್ಕೆ ನಮ್ಮ ಹುಡುಗರು ನನ್ನಿಂದ ಬರೆಸಿದರು. ಕಳೆದ ಎರಡು ...ದಿಂದ ಆ ಬಗ್ಗೆಯೇ ಕಾಗದಗಳು. ನನ್ನ ತೀರ್ಮಾನ ಐತಿಹಾಸಿಕ ...ವುದರಿಂದ ಹಿಡಿದು ನಿಕೋಟಿನ್ ಮಹಾ ಖಳ ಎನ್ನುವವರೆಗೆ. ಅದೆಲ್ಲ ತಪ್ಪು, ಒಂದು ನಾಗರಿಕತೆಯ ...ವಾಗಿ ಅವೆಲ್ಲ ಬೆಳೆದಿರುತ್ತವೆ. ಹಣ್ಣುಹಂಪಲು ತಿಂದು ಬದುಕುತ್ತಿದ್ದ ಗುಹೆಯ ಮಾನವನಿಂದ ಭಿನ್ನವಾಗಿ ...ಗೆ ಮಾಡತೊಡಗಿ ಅದನ್ನು ಕಲೆಯ ಮಟ್ಟಕ್ಕೆ ತೆಗೆದುಕೊಂಡುಹೋಗಿರುವ ಮಾನವ ಅಡಿಗೆಯ ಇನ್ನೊಂದು ...ಬವಾಗಿ. ಮದ್ಯ ತಯಾರಿಸಿದ; ಸಾವಿರಾರು ವರ್ಷದಿಂದ ಎಲೆಗಳನ್ನು ಔಷಧಿ, ತರಕಾರಿ ರೂಪದಲ್ಲಿ ...ದವನೇ ಗಾಂಜಾ, ಸಿಗರೇಟ್, ಅಫೀಮುಗಳನ್ನೂ ಮಾಡಿಕೊಂಡ. ಇದೆಲ್ಲದರ ಬಗ್ಗೆ ಬಾಲಿಶವಾಗಿ ಶಪಥ ...ಡಬಾರದು.

...ಈ ಬಗ್ಗೆ ನಾನು ಅನೇಕರಿಗೆ ಹೇಳಿದ್ದೇನೆ- ಒಬ್ಬ ಶಾಸಕ ಮಾತುಮಾತಿಗೆ ಪ್ರತಿಜ್ಞೆ ಮಾಡಿ ಭಿಕ್ಷೆ ಬೇಡುತ್ತಿದ್ದ. ...ಗೆಳೆಯ ಇಂದಿರಾ ಗಾಂಧಿ ಅಧಿಕಾರಕ್ಕೆ ಬಂದ ವರ್ಷ "ಆಕೆ ಅಧಿಕಾರದಿಂದ ತೊಲಗುವವರೆಗೆ ಭಾರತಕ್ಕೆ ...ವುದಿಲ್ಲ" ಎಂದು ಭಾರತ ಬಿಟ್ಟು ಸುಮಾರು ಹದಿನೆಂಟು ವರ್ಷ ಭಾರತಕ್ಕೆ ಬರಲಾಗಲಿಲ್ಲ. ಒಬ್ಬ ...ಜಿ, "ಈ ಸ್ವಾಮೀಜಿಯ ಚಳವಳಿ ನಾಲ್ಕು ದಿನದ್ದು- ಮಠಕ್ಕೆ ಹೋದರೆ ಮತ್ತೆ ಈ ಕಡೆ ಬರುವುದಿಲ್ಲ" ಎಂದು ಯಾರೋ ಬೇಜವಾಬ್ದಾರಿಯಿಂದ ಹೇಳಿದ್ದಕ್ಕೆ "ಇಡೀ ಜಿಲ್ಲೆಯಲ್ಲಿ ನೀರಾವರಿ ಆಗುವವರೆಗೆ ಮಠಕ್ಕೆ ಕಾಲಿಡುವುದಿಲ್ಲ" ಎಂದು ಹೇಳಿ ಮಠಕ್ಕೆ ಹೋಗಲಿಲ್ಲ, ನಾನು ಈ ಸ್ವಾಮೀಜಿಯ ಅವಿವೇಕವನ್ನು ವಿವರಿಸಿ "ನೀನು ಕೂಡಲೆ ಈ ಬಗ್ಗೆ ಮರುಹೇಳಿಕೆ ನೀಡಿ ಮಠಕ್ಕೆ ಹೋಗು" ಎಂದು ಹೇಳಿದೆ. "ಭಾರತ ಕನಿಷ್ಠ ದಕ್ಷಿಣ ಆಫ್ರಿಕಾದ ಶ್ರೀಮಂತಿಕೆಗೆ ಹತ್ತಿರವಾಗುವವರೆಗೆ ಸ್ನಾನ ಮಾಡುವುದಿಲ್ಲ" ಎಂದು ಹೇಳಬಲ್ಲವನು ಕೊಳಕು ಮನುಷ್ಯ. ನಾನು ಯಾವ ಬಗ್ಗೆಯೂ ಪ್ರತಿಜ್ಞೆ ಮಾಡುವುದಿಲ್ಲ, ಏನನ್ನಾದರೂ ಮಾಡಬೇಕಿದ್ದರೆ ಪ್ರತಿಜ್ಞೆ ಇಲ್ಲದೆ ಸುಮ್ಮನೆ ಮಾಡಲು ಯತ್ನಿಸುತ್ತೇನೆ- ನನ್ನೆಲ್ಲ ಶಕ್ತಿ ಬಳಸಿ.

ಈ ಧೂಮಪಾನವೂ ಅಷ್ಟೆ. ನಾನು ಧೂಮಪಾನ ಮಾಡದಿದ್ದರೆ ಶತಮಾನ ಗಟ್ಟಲೆ ಬದುಕಬಹುದೆಂದು ಭ್ರಮಿಸುವವರು, ಈ ಕೆಟ್ಟ ಚಟ ಬಿಟ್ಟರೆ ನಾನು ಆದರ್ಶ ಪುರುಷನಾಗಬಹುದೆಂದು ಆಶಿಸುವವರು ಮಹಾ ದಡ್ಡರು. ನಾನು ನನ್ನನ್ನು ನಂಬಿದವರಿಗೆ ಎಂದೂ ಮೋಸ ಮಾಡಿಲ್ಲ, ನನ್ನ ಅಭ್ಯಾಸಗಳಿಗೂ ಅಷ್ಟೆ. ಟೀಕೆ-ಟಿಪ್ಪಣಿಯಲ್ಲಿ ಬರೆದಿರುವ ಜಿಮ್ ಕಾರ್ಬೆಟ್ ಎಂಬ ಅದ್ಭುತ ಮನುಷ್ಯ 80ನೇ ವಯಸ್ಸಿನಲ್ಲಿ ತೀರಿಕೊಂಡ; ಕೊನೇ ದಿನದವರೆಗೂ ಆತ ಸಿಗರೇಟ್ ಸೇದುತ್ತಿದ್ದ. ಚೈನಾದ ಏಕಮಾತ್ರ ವಿವೇಕಿ ಮತ್ತು ನಾಯಕ ಡೆಂಗ್ ತನ್ನ 92ನೇ ವಯಸ್ಸಿನಲ್ಲಿ ಸಿಗರೇಟ್ ಪ್ರಿಯ. ನನ್ನ ಅತ್ಯಂತ ಆತ್ಮೀಯರಾದ ಮುದೀ ಗೆಳೆಯರು ಸಿಗರೇಟ್ ಆರಾಧಕರು. ಶಿವರಾಮ ಕಾರಂತರು ಮೊನ್ನೆಮೊನ್ನೆಯವರೆಗೆ (ಕೆಲವು ಸಲ ವೇದಿಕೆ ಮೇಲೆ ಕೂತೇ) ಸಿಗರೇಟ್ ಎಳೆಯುತ್ತಿದ್ದರು. ಅವರು ಕೆಟ್ಟವರಾಗಲಿ ಒಳ್ಳೆಯವರಾಗಲಿ ಈ ಸಿಗರೇಟಿನಿಂದ ಆಗುವುದಿಲ್ಲ.

ಹಾಗೆಂದು ಸಿಗರೇಟ್ ಹಿಡಿದು ಇದನ್ನು ಬರೆಯುತ್ತಿದ್ದೇನೆಂದು ತಿಳಿಯಬೇಡಿ. ಮೌನವಾಗಿರಬೇಕಾಗಿದ್ದ ನನ್ನ ಇಷ್ಟ ಗದ್ದಲವೆಬ್ಬಿಸಿದ್ದರಿಂದ ಮಾತ್ರ ಬರೆದಿದ್ದೇನೆ. ನಾನು ಅವಧೂತನೂ ಅಲ್ಲ, ರಾಕ್ಷಸನೂ ಅಲ್ಲ, ಎಲ್ಲರಂತೆ ಸಾಮಾನ್ಯ ಸಾಮಾನ್ಯ. ಮಾವಿನಮಿಡಿ ಉಪ್ಪಿನಕಾಯಿಗಾಗಿ ದಕ್ಷಿಣ ಕನ್ನಡದ ಗೆಳೆಯರಿಗೆ ಕಾಗದ ಬರೆದು ತರಿಸಿಕೊಳ್ಳುವ ನಾನು ಅವಧೂತನಾಗಿರಲು ಹೇಗೆ ಸಾಧ್ಯ?

-ಸೆಪ್ಟೆಂಬರ್ 29, 1993




ಧೀರೋದಾತ್ತ ಜೇನ್ಸ್ ಅವೆ

ರಾಮಾಯಣ ಬೇಕಿಲ್ಲ
ಗ್ರಾಮಾಯಣವೂ ಬೇಕಿಲ್ಲ
ಮತ್ತೇನು ಬೇಕು?
ಹಾಲಪ್ಪಾಯಣಬೇಕು!

ಪಾಪ ಹಳ್ಳಿ ಹೈದ ಹಾಲಪ್ಪ. ಅಲ್ಲಿ ಇಲ್ಲಿ 'ಎಲೆ ಅಡಿಕೆ' ಹಾಕಿಕೊಂಡು ಅಭ್ಯಾಸ. ಸ್ನೇಹಿತನ ಮನೆಯಲ್ಲೂ ಅದನ್ನೇ ಬಯಸಿರಬೇಕು. ಸನ್ನಿವೇಶವೇ ಹಾಗಿತ್ತು. ರಾತ್ರಿ ಮೇಜುವಾನಿ ಬಲೇ ಪಸಂದದಾಗಿತ್ತು. 'ಎಲೆ ಅಡಿಕೆ' ಹಾಕಿಕೊ ಅಂತ ಅಂತರಂಗದ ಒತ್ತಡ ಬಲವಾಯಿತು. 'ಎಲೆ ಅಡಿಕೆ' ಸವಿದನೋ ಇಲ್ಲವೋ ಆ ಶಿವನೇ ಬಲ್ಲ.

ಅಣಕ



ಎಚ್.ಎಲ್. ಕೇಶವಮೂರ್ತಿ

ಜನರ ಬಾಯಿಗೆ ಎಲೆ ಅಡಿಕೆ ಆದದ್ದಂತೂ ಸೈ.

ಜನರೇನು ದಡ್ಡರಲ್ಲ. ಅವರಿಗೂ ತಿಳದದೆ ಈ ಕಾಮದೇವ ಅನ್ನೋನು ಯಾರ್ನೂ ಬುಡೋಲ್ಲ ಅಂತಾವ. ಇಂತಹವನ್ನೆಲ್ಲ ಬ್ಯಾಡ ಅನ್ನಾಕಿಲ್ಲ. ಮುಚ್ಚು ಮರೇಲಿ, ಕಂಡೂ ಕಾಣದಂಗೆ ನಡೆಸಿಕೊಳ್ಳಲು ಈ ವ್ಯವಹಾರವ ಅಂತಾನೇ ಅಂತಾರೆ.

ಈ ಭಾವನೆ ತಿಳಿದಾಗ ಸಂಬಂಧಿಕರೊಬ್ಬರು ಹೇಳಿದ ಮಾತು ನೆನಪಾಯಿತು. ಅವರು ಮಿಲಿಟರಿಯಲ್ಲಿ ಮೇಜರ್ ಆಗಿದ್ದವರು. ಪ್ರತಿ ಭಾನುವಾರ ಮಧ್ಯಾಹ್ನ ಮನೆಯ ಮುಂದಿನ ಮಾವಿನ ಮರದ ಕೆಳಗೆ ಕುಳಿತು ಒಂದು ಬಿಯರ್ ಕುಡಿಯುವುದು ಅವರ ಅಭ್ಯಾಸ. ಒಂದು ಬಿಯರ್ ಅಷ್ಟೆ. ಅದರ ಮೇಲೂ ಇಲ್ಲ, ಕೆಳಗೂ ಇಲ್ಲ, ಅಂತಹ ಶಿಸ್ತಿನ ಮನುಷ್ಯ ಅವರು. ನಾನೊಮ್ಮೆ ಅವರ ಜೊತೆ ಸೇರಬೇಕಾದ ಪ್ರಮೇಯ ಬಂತು. ಹಿರಿಯರು ಎಂಬ ಗೌರವದಿಂದ ಅವರ ಜೊತೆ ಕುಡಿಯಲು ಹಿಂಜರಿದೆ. 'ನೀನು ಕುಡೀತೀಯಾ ಅಂತ ಗೊತ್ತು. ಕುಡಿ' ಅಂದರು. ನಾನು ಅಳುಕುತ್ತಲೇ ಇದ್ದೆ. 'ಯಾವುದರಲ್ಲೂ ಮುಚ್ಚುಮರೆ ಇರಬಾರದು. ಕುಡಿಯೋ ಅಭ್ಯಾಸ ಇದ್ದರೆ ಕುಡೀಬೇಕು' ಅಂತ ಉಪದೇಶಿಸಿದರು.

'ಈ ಗುಣ ನನ್ನ ಜೇನ್ಸ್‌ನಲ್ಲೇ ಬಂದಿದೆ ಕಣಯ್ಯ. ನಮ್ಮ ತಾತ ಸೂಳೆಮನೆಗೆ ಹೋಗ್ತಿದ್ದ. ಹೇಗೆ ಗೊತ್ತ' ಎಂದು ಕೇಳಿದರು. ನನಗೆ ಹೇಗೆ ತಿಳಿಯಬೇಕು? ಪಿಳಿಪಿಳಿ ನೋಡಿದೆ. 'ಮಲ್‌ಪಂಚೆ ಕಚ್ಚೆ ಉಲ್ಲನ್ ಕೋಟು, ತಲೆ ಮೇಲೆ ಮೈಸೂರು ಪೇಟ ಧರಿಸಿ ಜೆದ್ದಿ ಚಡಾವ್ ಹಾಕ್ಕೊಂಡು ಜರ್ ಜರ್ ಅಂತ ಶಬ್ದ ಮಾಡ್ತಾ ಬಳಿಪೇಟೆ ಮನೆಗೆ ಎದೆ ಉಬ್ಬಿಸಿಕೊಂಡು ಧೀರನಂತೆ ಹೋಗ್ತಿದ್ದ' ಎಂದು ಮುಂತಾಗಿ ತಾತನ ಪೌರುಷದ ಪರಿಚಯ ಮಾಡಿದರು.

ಆಗಿನ ಕಾಲಕ್ಕೆ ಅದು ಸರಿಹೋಗುತ್ತಿತ್ತೇನೊ. ಈಗ ನನ್ನಲ್ಲಿ ಧೀರೋದಾತ್ತ ಜೇನ್ಸ್ ಇದೆ ಅಂತ ಮನಸ್ಸಿಗೆ ಬಂದ ಹೆಂಗಸರನ್ನೆಲ್ಲ ಹಿಡಿದುಕೊಳ್ಳೋಕೆ ಹೋದ್ರೆ..... ಪರಿಣಾಮಾನ ವಿವರಿಸಬೇಕಾಗಿಲ್ಲ. ಕೆಲವರ ಸೂಚನೆ ಪ್ರಕಾರ ಸರ್ಕಾರ ಇಂತಹ ವ್ಯವಹಾರಗಳಿಗಾಗಿಯೇ ಐಬಿಯನ್ನು ಕಟ್ಟಿಸಿದೆ. ಅಲ್ಲಿ 'ಐಬಿ ಸೇವೆ' ಪಡೆಯಬಹುದಾಗಿತ್ತಲ್ಲ ಎಂಬುದಾಗಿದೆ... ಅದರಲ್ಲೇನು ಮಜ ಇದೆ ಅಂತಾವ... ಮೇಲೆ ಬಿದ್ದುಬಂದ ಸೂಳೆ ಮೂರ್ರಾಸ್ಗೂ ಬ್ಯಾಡ ಅಂತಾವ ಸುಮ್‌ಸುಮ್‌ಕೆ ಹೇಳಿಲ್ಲ ನಂ ಹಿರೀಕರು. ಪ್ರಣಯ ಸುಖ ಅಂದರೆ ಒಲ್ಲದ ಹೆಂಗಸನ್ನ ಒಲಿಸಿ ಕೊಳ್ಳೋದರಲ್ಲಿದೆ..... ಆಕೆ 'ಬ್ಯಾಡ ಬ್ಯಾಡ' ಅಂತಿರಬೇಕು. ಈತ 'ಕೊಡು ಕೊಡು' ಅಂತಿರಬೇಕು... ಸುಖ ಅಂದರೆ ಆಗ ಸಿಕ್ಕೋದು! ಅಂದಹಾಗೆ ಹೀಗೆ ಮಾಡೋಕೆ ಹೋಗೇ 'ಹಾಲಪ್ಪಾಯಣ' ಆಯಿತಾ.....

ಹಿಂಗೆ ಸಿಗಾಕಿಕೊಂಡ್ರು ಅಂತಾನೆ ಇಟ್ಕಳಾನ. ಭಯ ಯಾಕೆ ಅಂತಾವ. ರಾಜಕಾರಣಿಗಳೆಲ್ಲ ಸಭ್ಯರ? ಹಂಗಾಗಿದ್ರೆ ಸಮಸ್ತ ರಾಜಕಾರಣಿಗಳು-ಹರತಾಳು ಹಾಲಪ್ಪ=ಶ್ರೀರಾಮಚಂದ್ರರು ಅನ್ನೊ ಸಮೀಕರಣ ಮಾಡಬಹುದಾ?

ಬುಡ್ತು ಅನ್ನಿ. ಲಾಗಾಯ್ತಿನಿಂದಲೂ ಇದು ಇದ್ದದ್ದೇಯ. ಕೆಲವು ಬಯಲಿಗೂ ಬಂದಿದ್ದೊ. ಹೊಸದಾಗಿ ಸುದ್ದಿ ಕೇಳಿದಾಗ ಜನ ಹುಯ್ಯೋ ಅಂದೊ. ಆಮೇಲೇನಾಯ್ತು? ಜನಪದ ಕಥೆಗಳಲ್ಲಿ ಕೊನೇಲಿ ಹೇಳ್ತಾರಲ್ಲ.. 'ಅವರ ಪಾಡಿಗೆ ಅವರಿದ್ರು ನಮ್ ಪಾಡಿಗೆ ನಾವಿದೀವಿ'..... ಹಂಗಾಯ್ತು.

ಆದರೆ ಒಂದು. ಹಿಂದೆ ಅಕ್ರಮ ಸಂಗ ಮಾಡುತ್ತಿದ್ದರು ನಿಜ. ಬಯಲಾದಾಗ ಮುಜುಗರ, ನೋವು ಅನುಭವಿಸುತ್ತಿದ್ದರು. ಅದೂ ನಿಜ. ಆದರೆ ಅದು ಮರೆತು ಹೋಗುತ್ತಿತ್ತು. ಈ ಹಾಳಾದ ಹಾಲಪ್ಪ ಸಿಗಾಕಿಕೊಂಡ ನೋಡಿ. ಅವನ ಪುರಾಣ ಒದರಿಕೊಂಡು ಹಾಳಾಗಲಿ. ಹಾಳಾದ ಮಾಧ್ಯಮದವರು ಹಂಗೆ ಮಾಡಲ್ಲ. ಕೋಳಿ ತಿಪ್ಪೆ ಗುಂಡಿ ಕೆದಕ್ತದಲ್ಲ... ಹುಳ ಹುಪ್ಪಟೆ ಸಿಕ್ಕಾವು ಅಂತಾವ.... ಹಂಗೆ ಕೆದಕ್ತಾರೆ. ಹಿಂದಿನ ಚರಿತ್ರೇನೆಲ್ಲ ಮತ್ತೆ ಮತ್ತೆ ನೆನಪಿಸುತ್ತಾರೆ. ಈಗ ಅವರ ತಾಪತ್ರಯ ನೋಡಿ. 'ಹಾಲಪ್ಪ ಮಾಡಿದ್ದು ಅಪರಾಧ' ಅನ್ನುವಂಗಿಲ್ಲ. 'ನೀನು ಮಾಡಿರ್ಲಿಲ್ವೆ' ಅಂತಾ ಮೇಲೆ ಬೀಳ್ತಾರೆ. 'ಮಾಡಿದ್ದರಲ್ಲಿ ತಪ್ಪೇನೂ ಇಲ್ಲ' ಅಂದರೆ ಹಾಳಾದ ಜನ ಅನ್ನೋದು ಸಮಾಜದಲ್ಲಿ ನೈತಿಕತೆ ಅನ್ನೋದು ಇಂತಹವರಿಂದ ಯಕ್ಕುಟ್ಟಿ ಹೋಯ್ತೋ ಅಂತಾವ ಕೂಗಾಡ್ತದೆ. ಇದಾಯ್ತು. ಮನೆಗೆ ಬನ್ನಿ. ಯುದ್ಧ ಭೂಮಿ ಆಗ್ತದೆ. ಅದೆಷ್ಟನೇ ಮಹಾಯುದ್ಧವೋ ಮತ್ತೆ ಪ್ರಾರಂಭ ಆಗ್ತದೆ. ಬಲವಂತವಾಗಿ



'ಹಾಸಿಗೆ ಪಥ್ಯ' ಅನುಭವಿಸಬೇಕಾಗುತ್ತದೆ. ವಯಸ್ಸು ಕೇಳ್ತಾ... ಪಥ್ಯ ಬ್ಯಾಡ ಅಂದರೆ....

ಇದಕ್ಕೆಲ್ಲ ಪರಿಹಾರ ಅಂದರೆ ಪುರಾಣದ ಮೊರೆ ಹೋಗುವುದು. ಹೇಗಿದ್ದರೂ ಅವು ಭಾರತೀಯರ ಪೂಜನೀಯ ಕೃತಿಗಳು ತಾನೆ. ಅಲ್ಲಿ ಎಂತೆಂತಹ ಹಾದರದ ಕತೆಗಳಿವೆ ಏನು ಕತೆ....

ಸ್ಯಾಂಪಲ್‌ಗೆ ಇದರ ರುಚಿ ನೋಡಿ.

ಅತ್ತಿಗೆ ಬಯಸಿದ ಮೈದುನ

ಅತ್ತಿಗೆ ಎಂದರೆ ತಾಯಿಗೆ ಸಮಾನ. ಹುಲುಮಾನವರಿಗೆ. ದೈವಾಂಶ ಸಂಭೂತರಿಗೆ ಇದು ಹೊರತು.

ಅದಕ್ಕೊಂದು ದೃಷ್ಟಾಂತ.

ಇಬ್ಬರು ಅಣ್ಣತಮ್ಮಂದಿರು. ಉಚಥ್ಯ, ಬೃಹಸ್ಪತಿ ಅವರ ಹೆಸರು. ಉಚಥ್ಯನಿಗೆ ಮದುವೆ ಆಗಿತ್ತು, ಮಡದಿ ಮಮತಾ. ಬೃಹಸ್ಪತಿ ಇನ್ನೂ ಯಾರ ಕೊರಳನ್ನೂ ಪವಿತ್ರಗೊಳಿಸಿರಲಿಲ್ಲ.

ಅತ್ತಿಗೆಯ ಮೇಲೆ ಮೈದುನನ ಮನಸ್ಸು: ಅದು ಅವನ ತಪ್ಪಲ್ಲ. ಆಕೆ ಸುರಸುಂದರಿ. ಗರ್ಭಿಣಿ ಸ್ತ್ರೀಯರ ದೇಹಕ್ಕೆ ವಿಶೇಷ ಕಾಂತಿ ಬರುತ್ತದಂತೆ. ಮಮತಾಳೂ ಗರ್ಭಿಣಿ ಆಗಿದ್ದಳು. ಅಪೂರ್ವ ಕಾಂತಿಯಿಂದ ಹೊಳೆಯುತ್ತಿದ್ದ ಸುಂದರಾಂಗಿ ನೋಡಿದ ಬೃಹಸ್ಪತಿ, ಕಾಮಾತುರದಿಂದ ದೇಹವಿಡೀ ಕಾದ ಬಾಣಲೆ ಆಯಿತು. ಅವಳ ಸಂಗಕ್ಕಾಗಿ ಹಾತೊರೆದ, ಚಡಪಡಿಸಿದ. ಅಣ್ಣ ಇಲ್ಲದ ಸಮಯ ನೋಡಿ ಮನದಿಂಗಿತ ತಿಳಿಸಿದ.

ಏನು ಮಾಡಬೇಕು ಮಮತಾ?

'ತುಂಬಿದ ಗರ್ಭಿಣಿ ನಾನು. ಹೆರಿಗೆ ನಂತರ ನಿನ್ನಿಚ್ಛೆ ಪೂರೈಸಿಕೊ' ಎಂದಳು.

ಸಂಭೋಗಕ್ಕೆ ಸಿದ್ಧ, ಈಗ ಬೇಡ ಅನ್ನುವ ಇಂಗಿತ ತಾನೆ?

ಇವನಿಗೆ ಕಾಮದ ಆತುರ. ಅವಳಿಗೆ ಹೆರಿಗೆ ಸಂಕಟ.

ಇವನು ಬಿಡಲೊಲ್ಲ, ಅವಳ ತಕರಾರು ತಪ್ಪಲಿಲ್ಲ, ಬಲವಂತವಾಗಿ ಸಂಭೋಗಿಸಿದ.

ಸಂಭೋಗಕ್ಕೆ ಪ್ರತಿಫಲ ಬೇಡವೆ? ಪುತ್ರ ಪ್ರಾಪ್ತಿಯಾಗಬೇಡವೆ?

ಅಡ್ಡ ಬಂದಿತು ಟೆಕ್ನಿಕಲ್ ಪ್ರಾಬ್ಲಮ್!

'ಸಾಕು ಸಾಕು ನೀಚ, ನಾನಿಲ್ಲಿರುವವರೆಗೆ ಇನ್ನೊಂದು ಶಿಶುವಿಗೆ ಸ್ಥಾನವಿಲ್ಲ' ಎಂದಿತು ಗರ್ಭದಲ್ಲಿನ ಶಿಶು.

ವ್ಯರ್ಥವಾಯಿತು ಮುನಿವರ್ಯನ ವೀರ್ಯ!

ಬೃಹಸ್ಪತಿ ಮುನಿ ಕೋಪವಿಷ್ಟನಾದ. 'ನೀನು ಅಂಧನಾಗು' ಎಂದು ಶಪಿಸಿದ!

ಇದು ಅಂತ್ಯ ಅಲ್ಲ, ಅತ್ತಿಗೆಯಿಂದ ಪುತ್ರರತ್ನ ಪಡೆಯಲು ಶಪಥಗೈದ!

ಅತ್ತಿಗೆಗೆ ಅಂಧ ಮಗು ಜನಿಸಿತು.

ಹೆರಿಗೆಯ ನಂತರ..... ಮತ್ತೆ ನಡೆಯಿತು ಅತ್ತಿಗೆ ಮೈದುನರ ಕಾಮಕೇಳಿ!

ಈಗ ಟೆಕ್ನಿಕಲ್ ಪ್ರಾಬ್ಲಂ ಇರಲಿಲ್ಲ!

ಭಾರದ್ವಾಜ ಮಹಾಮುನಿ ಜನನ ಆಯಿತು!

ಅತ್ತಿಗೆ-ಮೈದುನರ ಸಂಭೋಗವನ್ನು ಸ್ವೀಕರಿಸುವ ಜನ ಬೇರೆ ಹೆಂಗಸಿನ ಜೊತೆಗಿನ ಸಂಬಂಧಾನ ತಿರಸ್ಕರಿಸುತ್ತಾರಾ.....

ಗೋವಿಂದ ರಾಯರಿಗೆ ಮಂಗಳಾರತಿ...

ಶಿವಸುಂದರ್ ಅವರು ತಮ್ಮ 'ಚಾರ್ವಾಕ' ಅಂಕಣದಲ್ಲಿ ಜಿ.ಕೆ.ಗೋವಿಂದರಾಯರಿಗೆ ಸರಿಯಾಗಿಯೇ ಮಂಗಳಾರತಿ ಮಾಡಿದ್ದಾರೆ. ಯಾವುದನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದ, ಯಾವುದನ್ನೂ ಸಂಪೂರ್ಣವಾಗಿ ಗ್ರಹಿಸದ ರಾಯರಂತಹ 'ಬುದ್ಧಿಜೀವಿ'ಗಳಿಂದ ಅರುಂಧತಿ ರಾಯ್ ಅವರ ಲೇಖನದ ಬಗ್ಗೆ ಅಥವಾ ಮಾವೋವಾದಿ ಚಳವಳಿಯ ಬಗ್ಗೆ ಅರೆಬರೆ ಪ್ರತಿಕ್ರಿಯೆಯನ್ನಲ್ಲದೆ ಹೆಚ್ಚಿಗೆ ಏನನ್ನು ನಿರೀಕ್ಷಿಸಲಾಗುವುದಿಲ್ಲ.

- ಸತೀಶ್, ಹಳಗೂರು

'ಪೃಥ್ವಿ' ಸಿನಿಮಾ ಕುರಿತು 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯನ್ನು ನೋಡಿ ಚಕಿತನಾಗಿ ಕೂಡಲೇ ಆ ಸಿನಿಮಾ ನೋಡಿದೆ. ನಿಜಕ್ಕೂ ಹೆದರಿಕೆ ಆಯಿತು. ರಾಜ್ಯ ಸರ್ಕಾರವನ್ನು ತಮ್ಮ ಕೈಗೊಂಬೆ ಮಾಡಿಸಿಕೊಂಡಿರುವ ಬಳ್ಳಾರಿಯ ರೆಡ್ಡಿ ಗ್ಯಾಂಗ್ ಆರ್ಭಟವನ್ನು ಆ ಚಿತ್ರ ಸರಿಯಾಗಿ ಸೆರೆ ಹಿಡಿದಿದೆ.

ಅದರಷ್ಟೇ ಮುಖ್ಯವಾದದ್ದು, ಈಗ ಯಡಿಯೂರಪ್ಪನವರ ಸರ್ಕಾರ ಶಿವಮೊಗ್ಗೆಯಲ್ಲೂ ಗಣಿಗಾರಿಕೆಗೆ ಅನುಮತಿ ನೀಡಲು ಹೊರಟಿರುವುದು. ಎಂದೂ ಬಳ್ಳಾರಿಯನ್ನು ಕಂಡಿರದ ನನಗೆ ಆ ಚಿತ್ರವನ್ನು ನೋಡಿ, ಇಲ್ಲೂ ಗಣಿಗಾರಿಕೆ ಪ್ರಾರಂಭವಾಗಿ ನಮ್ಮ ಶಿವಮೊಗ್ಗೆಯೂ ಮುಂದೊಂದು ದಿನ ಆ ಜಿಲ್ಲೆಯಷ್ಟೇ ಬರುಡಾಗುತ್ತದೇನೋ ಎಂಬ ಆತಂಕ ಮೂಡಿತು.

- ನವೀನ್ ಪಾಟೀಲ್, ಸಾಗರ

ಹೊಗಳಿಕೆ ತೆಗಳಿಕೆ

ಅಗಲಿದ ಗೆಳೆಯ ಎನ್.ಕೆ.ಹನುಮಂತಯ್ಯನ ಸಾವಿನ ಕುರಿತಂತೆ 'ಲಂಕೇಶ್' ವಾರ ಪತ್ರಿಕೆಯ ಮೇ 5ರ ಸಂಚಿಕೆಯಲ್ಲಿ ಪಾರ್ವತೀಶ ಹಾಗೂ ಸುಧೀಂದ್ರಕುಮಾರರ ಲೇಖನಗಳು ವಾಸ್ತವತೆಯನ್ನು ಬಿಂಬಿಸಿದ ಮತ್ತು ನಿಜಕ್ಕೆ ಒತ್ತು ಕೊಟ್ಟ ಲೇಖನಗಳೂ ಆಗಿದ್ದವು. ಗೆಳೆಯನೊಬ್ಬನ ಸಾವುಉಳಿಸಿಹೋಗಿರುವ ನಿರ್ವಾತವನ್ನು ಹೇಗೆ ತುಂಬಬಹುದೆಂಬ ಆಲೋಚನೆಯೇ ಅವನಿಗೆ ಸಲ್ಲಿಸುವ ಶ್ರದ್ಧಾಂಜಲಿಯಾಗಿದೆ. ಶೈಲಜಾ ಮತ್ತು ಸಂಘಮಿತ್ರೆ ಅವರಿಗಾಗಿರುವ ಆಘಾತ ಮತ್ತು ಅಸುರಕ್ಷತೆಯನ್ನು ಹೇಗೆ ತಾನೇ ತುಂಬಿಕೊಡಲು ಸಾಧ್ಯ?


ಹನುಮಂತಯ್ಯ ನಮಗೆಲ್ಲ ಅಷ್ಟೇ ಅಲ್ಲ ನಮ್ಮ ಸಿದ್ಧಾಂತ, ಬದ್ಧತೆ, ಮೌಲ್ಯ ಗೆಳೆತನ ಎಲ್ಲಕ್ಕೂ ಮೋಸ ಮಾಡಿದ. ಆತನ ಸಾವಿನಿಂದಾಗಿ ಸಾಂಸ್ಕೃತಿಕ ಲೋಕದ ಒಂದು ಐಕಾನ್ ಭಗ್ನವಾಗಿದೆ.

-ಡಿ.ಎಸ್.ರಾಮಸ್ವಾಮಿ, ಅರಸೀಕೆರೆ

ರಾಘವನಿಗೆ ಸರಕಾರಿ ಭದ್ರತೆ ಬೇರೆ ಕೇಡು!

ಒಂದು ಪತ್ರ

ಸಮಾಜಕ್ಕೆ ಯಾವ ಪ್ರಯೋಜನಕ್ಕೂ ಬಾರದ, ಕೇವಲ 'ಹೊರೆ'ಯಷ್ಟೇ ಆಗಿ ವಕ್ಕರಿಸಿರುವ ಸಗಣಿ ರಾಘವನಂತ ಕೊಳುದಂಡ ಸ್ವಾಮಿಗೆ ಸರ್ಕಾರ 'X-ಕೆಟಗರಿ'ಯ ಭದ್ರತೆ ನೀಡಿರುವುದು ಹಾಸ್ಯಾಸ್ಪದವಾಗಿದೆ. ಅದರಲ್ಲೂ ಸ್ವಯಂ ಶಂಕರಾಚಾರ್ಯರ ಅವತಾರ, ನವ ಗೋಕರ್ಣ ಮಂಡಲಾಧೀಶ ರಾಘವನಿಗೆ ಬುಜುಬಿ ಮಾನವ ರಕ್ಷಣೆ! ಅದರಲ್ಲೂ ರಾಕ್ಷಸರು, ಶೂದ್ರರು, ಮ್ಲೇಚ್ಛರಂತ 'ಅನಾಗರಿಕ'ರ ಭಯಕ್ಕಿಂತ ತನ್ನ ವಿಪ್ರ ತಳಿಗಳೇ ಆದ ಗೋಕರ್ಣದ ಪಂಡಿತೋತ್ತಮರ ಆಕ್ರಮ ಭೀತಿಯ ಸಲುವಾಗಿ ಈ ಪಡೆಯಂತೆ! ಎಂತಾ ಕಲಿಗಾಲವಯ್ಯ!!? ದೇವಾಂಶಸಂಭೂತನಿಗೆ ಶೂದ್ರರ ಬೆಂಬಲ, ಬ್ರಾಹ್ಮಣ ಭೀತಿ... ಹೀಗೂ ಉಂಟೇ?



ಒಟ್ಟಾರೆಯಾಗಿ ನೋಡಿದಾಗ ಇಲ್ಲಿ ರಾಘವನ ವೈರಿ ಯಾರು? ಬ್ರಾಹ್ಮಣರ ವೈರಿ ಯಾರು? ಹಿಂದೂ ಧರ್ಮದ ವೈರಿ ಯಾರು? ಅಷ್ಟೇ ಅಲ್ಲ, ದೇವರ ವೈರಿ ಯಾರೆಂಬ ಪ್ರಶ್ನೆಗಳು ಹುಟ್ಟಿ ಎಲ್ಲವೂ ಗೋಜಲಾಗತೊಡಗಿದೆ. ನಿತ್ಯಾನಂದನೂ ಸೇರಿ ರಾಘವನ ಸಿಡಿ ಬಂದಾಗ ಹುಯಿಲೆಬ್ಬಿಸಿದ ಹಿಂದೂ ಸಂಘಟನೆಗಳು "ಇದು ಕ್ರೈಸ್ತ ಮಿಷನರಿಗಳ ಕುತಂತ್ರ" ಎಂದವು. ಆದರೆ ನಂತರ ನಿತ್ಯಾನಂದನ ಕತೆ ಏನಂತ ಎಲ್ಲರಿಗೂ ಗೊತ್ತಿದೆ. ರಾಘವನ ಪ್ರಕರಣದಲ್ಲಂತೂ ಅಂತಾ ಪ್ರಸಿದ್ಧ ಪಶುಪತಿನಾಥ ದೇವಾಲಯದಲ್ಲಿ ವರ್ಷಾನುಗಟ್ಟಲೆ ಅರ್ಚಕರಾಗಿದ್ದ ಪಂಡಿತೋತ್ತಮರು ಸೇರಿ ವಿಪ್ರಗಹಣವೇ ಪಾಲ್ಗೊಂಡಿತ್ತೇ ವಿನಃ ಕ್ರೈಸ್ತರ ಕೈ ಎಲ್ಲೂ ಕಾಣಿಸಲಿಲ್ಲ. ಪ್ರವೀಣ್ ಶೆಟ್ಟಿಯವರು 'ಲಂಕೇಶ್'ನಲ್ಲಿ ಇತ್ತೀಚೆಗೆ ದೇವರನ್ನು ಮೂರ್ಖ- ಮುಟ್ಠಾಳನನ್ನಾಗಿಸುವವರ ಬಗ್ಗೆ ಹೇಳಿದ್ದರು. ಇವರೆಲ್ಲ ದೇವರು-ಧರ್ಮದ ವೈರಿಗಳೂ ಕೂಡ ಹೌದು. ಹೇಗೆಂದರೆ ಮುಗ್ಧ ಜನ ಸಾಮಾನ್ಯರಲ್ಲಿ ದೇವರ ಬಗ್ಗೆ ಇದ್ದ ನಂಬಿಕೆಯನ್ನು ಕೂಡಾ ಇಂತ ನಿತ್ಯ-ಸಗಣಿ ಸ್ವಾಮಿಗಳ ಅನಾಚಾರ ಪ್ರಕರಣಗಳು ಹಳಿತಪ್ಪಿಸುವುದರಲ್ಲಿ ಸಂಶಯವಿಲ್ಲ.


ಯಾವುದೋ ರೋಲ್‌ಕಾಲ್ ಹಣದಿಂದ ರಥ ಸಮರ್ಪಣೆ, ಅದಿರನ್ನು ಲೂಟಿಹೊಡೆದು ತಿರುಪತಿ ತಿಮ್ಮಪ್ಪನಿಗೆ ವಜ್ರಕಿರೀಟ, ಇಂತವೆಲ್ಲವು (ಕುಂದಾಪುರ ತಾಲ್ಲೂಕಿನಲ್ಲೊಂದು ಭವ್ಯ ಅಯ್ಯಪ್ಪ ಮಂದಿರ ಕಟ್ಟಲಾಗಿದೆ. ಅದು ದೇಶದ ಅರ್ಥ ವ್ಯವಸ್ಥೆಗೆ ದೊಡ್ಡ ಪೆಟ್ಟುಕೊಟ್ಟ "ನಕಲಿ ಛಾಪಾಕಾಗದದಿಂದ ಕಟ್ಟಿದ್ದು" ಎಂಬುದು ಸ್ಥಳೀಯರ ಬಾಯಲ್ಲಿರುವ ಸ್ಥಳ ಪುರಾಣ) ದೇವರ 'ಭಯ' ಹೆಚ್ಚಿಸುವ ಬದಲು ಎಲ್ಲಾ ಅನಾಚಾರಗಳಿಗೆ ದೇವರ 'ಅಭಯ' ಉಂಟು ಎಂಬ ತಪ್ಪು ಸಂದೇಶವನ್ನು ಕೊಡಬಹುದಷ್ಟೇ.

ಇಂತ ಕಳ್ಳಸ್ವಾಮಿಗಳ ಭಕ್ತರ ದಾಸ್ಯಕ್ಕೆ ಈಗಿನ ನಮ್ಮ ಘನ ಸರ್ಕಾರ ತಲೆಯಾಡಿಸುತ್ತಿದೆ ಬೇರೆ. ಯಡಿಯೂರಪ್ಪನ ಡಿಕ್ಷನರಿಯಲ್ಲಿನಂತೆ 'ಸಾತ್ವಿಕ'ನಾದ (ಮನೆ) ಹಾಲಪ್ಪನನ್ನು ಬಂಧಿಸುವ ಬದಲು ವೆಂಕಟೇಶಮೂರ್ತಿಯ ಹಿನ್ನೆಲೆ ಕೆದಕಿ ಆತನ ಬಂಧನಕ್ಕೆ ಯೋಜನೆ ಹೆಣೆಯುತ್ತಿದೆ. ಅತ್ಯಾಚಾರದ ಕಂಪ್ಲೇಂಟ್ ಇದ್ದರೂ ಇಲ್ಲಿ ಬಂಧನಕ್ಕೆ ಮೀನ-ಮೇಷ. ಆದರೆ ನಿತ್ಯಾನಂದನ ಪ್ರಕರಣದಲ್ಲಿ ಕಂಪ್ಲೇಂಟ್ ಇಲ್ಲದಿದ್ದರೂ ಕುಡಾ ರವಿಶಂಕರನ ಪಿತೂರಿಯಂತೆ ಆತನ ದುಡ್ಡು ಮಾಡುವ, ಮಿಂಚಿ ನೊಬೆಲ್ ಗಿಟ್ಟಿಸುವ ಹಾದಿ ಸುಗಮವಾಗಲು ನಿತ್ಯಾನಂದನನ್ನು ಉತ್ತರ ಭಾರತದ ಯಾವುದೋ ಮೂಲೆಯಿಂದ ಹಿಡಿದು ತಂದು ಜೈಲಿಗೆ ತಳ್ಳಲಾಗಿದೆ.

ಹಾಗೆ ನೋಡಿದರೆ, ಇಬ್ಬರ ಸಹಮತದಲ್ಲೇ ನಡೆದಿರುವ ನಿತ್ಯಾನಂದ ಪ್ರಕರಣದಂತೆ ನಿತ್ಯಾನಂದ ಸೂಪರ್ ಸಾತ್ವಿಕನಾಗಿ ರಂಜಿತಾಳ ಉಬ್ಬಸ ರೋಗಕ್ಕೆ ತನ್ನ ಉಪಚಾರವನ್ನ ನಿರಾತಂಕವಾಗಿ ಮುಂದುವರೆಸಬಹುದಿತ್ತು. ಹಾಗೆಯೇ ಅಪ್ರಾಪ್ತ ವಿದ್ಯಾರ್ಥಿನಿಯರೊಂದಿಗೆ ಬಲವಂತವಾಗಿ ಅಸ್ಪೃಶ್ಯತೆಯಿಂದ ವರ್ತಿಸಿದ್ದ ರಾಘವನ ಭಾವ ಜಗದೀಶ ಹಾಗೂ ಅದನ್ನ ಸಮರ್ಥಿಸಿದ ಸಗಣಿ ರಾಘವ ಎಂದೋ ಜೈಲಲ್ಲಿ ಮುದ್ದೆ ಮುರಿಯುತ್ತಿರಬೇಕಿತ್ತು.

-ಶಶಿ ಪುತ್ತೂರು

ಗರ್ಭ ಸೀಳಿ ಬರ್ತಾಳೆ 'ಚೆಂದುಳ್ಳಿ'!



ಪ್ರಪಂಚದ ಯಾವ ಮೂಲೆಯಲ್ಲೂ ಕಂಡುಬರದಂತಹ ವಿಚಿತ್ರಗಳು ಕನ್ನಡ ಚಿತ್ರರಂಗದಲ್ಲಿ ಮಾತ್ರ ಕಾಣಸಿಗುತ್ತವೆ ಎಂಬುದಕ್ಕೆ ಇಲ್ಲೊಂದು ಉದಾಹರಣೆಯಿದೆ.

ಓದುಗ ಮಹಾಶಯರು ದಯವಿಟ್ಟು ಈ ವಿಚಾರವನ್ನು ನಂಬಲೇಬೇಕು....

ಈ ವಾರ 'ಚೆಂದುಳ್ಳಿ ಚೆಲುವೆ' ಹೆಸರಿನ ಐತಿಹಾಸಿಕ ಚಿತ್ರವೊಂದು ಬಿಡುಗಡೆಯಾಗುತ್ತಿದೆ. ಇದರ ವಿಶೇಷತೆಯೆಂದರೆ, ಈ ಸಿನಿಮಾದ ನಿರ್ಮಾಣಕ್ಕೆ ತೆಗೆದುಕೊಂಡಿರುವ ಕಾಲಾವಕಾಶ ಕೇವಲ ಹದಿನೈದು ಮುಕ್ಕಾಲು ವರ್ಷಗಳು ಮಾತ್ರ!

ಈ ಪರಿ 'ಕಡಿಮೆ ಸಮಯದಲ್ಲಿ' ನಿರ್ಮಾಣಗೊಂಡಿರುವ ಈ ಚಿತ್ರದ ನಾಯಕನಟ ಶ್ಯಾಮ್ ಒಬ್ಬನನ್ನು ಹೊರತುಪಡಿಸಿದರೆ ಚಿತ್ರದ ನಿರ್ದೇಶಕ, ನಾಯಕನಟಿಯರೂ ಸೇರಿದಂತೆ ಎಲ್ಲರೂ ಬದಲಾಗಿಹೋಗಿದ್ದಾರೆ. ಈ ಸಿನಿಮಾದ ಆರಂಭಿಕ ನಿರ್ದೇಶಕರಾದ ಕರ್ಣಂ ಶ್ರೀಧರ್ ಈ ಟಿವಿಯಲ್ಲಿ ಉದ್ಯೋಗ ಪಡೆದೇ ಹತ್ತು ವರ್ಷ ಕಳೆದಿದೆ.

ಕಿತ್ತುಹೋದ ಮಾರುತಿ ವ್ಯಾನ್‌ನಲ್ಲಿ ಪ್ರತಿದಿನ ಪೇರಿ ಹೊರಡುವ ಶ್ಯಾಮ್ ಎಂಬ ದೈತ್ಯ ಪ್ರತಿಭೆಯನ್ನು ಕಂಡರೆ ಇಡೀ ಗಾಂಧೀನಗರವೇ ಹೆದರಿ ಪರಾರಿಯಾಗುತ್ತದೆ. ಆದರೂ ಈ ಮನುಷ್ಯನಿಗೆ ಸಹಾಯ ಮಾಡುವ ಉದ್ದೇಶದಿಂದ ಪತ್ರಿಕಾ ಪ್ರಚಾರಕರ್ತ ಹರೀಶ್ ಅವರು ಈ ಸಿನಿಮಾದ ಪ್ರಚಾರದ ಅಷ್ಟೂ ಹೊರೆಯನ್ನು ತಮ್ಮ ದೊಡ್ಡ ದೇಹದ ಮೇಲೆ ಹೊರಿಸಿಕೊಂಡಿದ್ದಾರೆ. ಈ ಚಿತ್ರದ ಪತ್ರಿಕಾಗೋಷ್ಠಿ ನಡೆದರೆ ಅದು ಸಿಲ್ವರ್ ಜ್ಯೂಬಿಲಿಯ ದಿನ ಮಾತ್ರ ಎಂದು ಮೆಜೆಸ್ಟಿಕ್‌ನ ಅಣ್ಣಮ್ಮದೇವಿ ಮುಂದೆ ನಿಂತು ಹರೀಶ್ ಆಣೆಯನ್ನೂ ಮಾಡಿದ್ದಾರೆ!

"ರವಿಚಂದ್ರನ್ ಫೋಟೋವನ್ನು ಅಷ್ಟು ದೊಡ್ಡದಾಗಿ ಪ್ರಿಂಟ್ ಮಾಡ್ತೀರಾ, ವಿಷ್ಣುವರ್ಧನ್ ಫೋಟೋನ ಕವರ್ ಪೇಜಲ್ಲೇ ಹಾಕ್ತೀರಾ. ಒಂದು ಕಡೆಯಿಂದ ರಜನೀಕಾಂತ್‌ರಂತೆ. ಮತ್ತೊಂದು ಆ್ಯಂಗಲ್‌ನಿಂದ ಚಿರಂಜೀವಿ ಥರಾ ಕಾಣೋ ನನ್ನ ಫೋಟೋ ಯಾಕೆ ನೀವು ಹಾಕಲ್ಲ" ಎಂದು ದಿನಪತ್ರಿಕೆ ಕಚೇರಿಗಳಿಗೆ ಹೋಗಿ, ಕೋಟು ಕೊಡವಿ ಜಗಳಕ್ಕೆ ನಿಲ್ಲುತ್ತಿದ್ದ ಈ ಮಹಾನುಭಾವನ ಶತಮಾನದ ಕನಸು ಈ ವಾರ ನನಸಾಗುತ್ತಿದೆ.

ವಿಶೇಷ ಸೂಚನೆ: ಸೊಳ್ಳೆ, ನೊಣಗಳೂ ಕೂಡಾ ಉಚಿತವಾಗಿ ನುಗ್ಗದೆ ಕಾಸುಕೊಟ್ಟು ಸಿನಿಮಾ ನೋಡಬೇಕು!

● arunodayagc@gmail.com

ಪ್ರಚಾರಕ್ಕೆ ಪರದಾಟ

...ನ್ನಡ ಸಿನಿಮಾಗಳು ಒಂದರ ಹಿಂದೆ ಒಂದು ...ತೆಗೊಳ್ಳುತ್ತಿವೆ. ಆದರೆ ಆ ಸಿನಿಮಾಗಳು ...ಗ ಬರುತ್ತವೆ. ಯಾವಾಗ ಥಿಯೇಟರಿನಿಂದ ...ಖಾಲಿ ಮಾಡುತ್ತವೆ ಎಂಬುದು ಯಾರಿಗೂ ...ಯುತ್ತಿಲ್ಲ. ಇದಕ್ಕೆ ಮೂಲ ಕಾರಣ ಆ ...ಗಳ ಪಬ್ಲಿಸಿಟಿಯ ಕೊರತೆ. ಬೆಂಗಳೂರಿನ ಎಲ್ಲಾ ...ಗಳ ಮೇಲೂ



...ರೇಷನ್‌ನವರು ...ಣ್ಣಬಣ್ಣದ ...ಾಗುಗಳನ್ನು ...ಡರುವುದರಿಂದ ... ಮೇಲೆ ...ಬರುಗಳನ್ನು ...ಸುವಂತಿಲ್ಲ. ...ಾದರೂ ...ದರೆ ಅವರ ... ಕಾನೂನು ...ವರುಗಿಸುವಂತೆ ... ಕಮಿಷನರ್ ...ಾಲ್ ಮೀನಾ ...ಹೊರಡಿಸಿದ್ದಾರೆ.

...ಷ್ಟಿ ಬೆಂಗಳೂರಿನ ...ಬೀದಿಗಳಲ್ಲಿರುವ ಹೋರ್ಡಿಂಗ್ ಸ್ಥಳಗಳು ದುಬಾರಿ ...ಳ ಜಾಹೀರಾತುಗಳಿಗೇ ಮೀಸಲಾಗಿವೆ. ಹಲವು ...ಟರುಗಳ ಮುಂದಿರುವ ಹೋರ್ಡಿಂಗ್ ಜಾಗಗಳೂ ...ಯ ಕರ್ನಾಟಕದಂಥ ಚಿಲ್ಲರೆ ಸಂಘಟನೆಗಳ ಪ್ರಚಾರಕ್ಕೆ ...ಗಿವೆ!

...ಷ್ಟ ಟಿವಿ ಚಾನೆಲ್‌ಗಳಲ್ಲಿ ಜಾಹೀರಾತು ಕೊಡಲು ...ಇಷ್ಟು ಎಂದು ದುಬಾರಿ ಹಣ ತೆತ್ತಬೇಕು. ...ಟೀವಿ ಮತ್ತು ಯು-2 ವಾಹಿನಿಗಳಲ್ಲಂತೂ ...ಸಿನಿಮಾದ ಹಾಡುಗಳು, ಪ್ರೋಮೋಗಳನ್ನು ...ಮಾಡುವುದಕ್ಕೂ ಲಕ್ಷಾಂತರ ರೂಪಾಯಿ ಹಣ ಕೊಡಬೇಕು. ಯು-2ನಲ್ಲಿ ಹೊಸ ಚಿತ್ರವೊಂದರ ಹಾಡು ಪ್ರಸಾರವಾಗಬೇಕಾದರೆ, ಅಲ್ಲಿರುವ ಹಣ ನುಂಗುವ ಪ್ರಾಣಿ ಹರೀಶನ ಬಾಯಿಗೆ ಒಂದು ಹಾಡಿಗೆ ಹದಿನೈದು ಸಾವಿರ, ಸಿನೆಮಾದ ಎಲ್ಲ ಹಾಡುಗಳಿಗೆ ಐವತ್ತು-ಅರವತ್ತು ಸಾವಿರ ರೂಪಾಯಿಗಳ ಪ್ಯಾಕೇಜ್ ಹಣವನ್ನು ಮಡಗಬೇಕು.

ಪ್ರಚಾರದ ಕನಸು....

ಈಗಿನ ಕೆಲವು ದಿನಪತ್ರಿಕೆಗಳು ಕೂಡಾ ಜಾಹೀರಾತು ನೀಡಿದರೆ ಮಾತ್ರ ಆ ಸಿನಿಮಾದ ಬಗ್ಗೆ 'ಸ್ಪಾನ್ಸರ್ಡ್ ವರದಿ'ಗಳನ್ನು ಪ್ರಕಟಿಸುತ್ತಿವೆ. 'ನಾನು ನನ್ನ ಕನಸು' ಚಿತ್ರದ ಪಬ್ಲಿಸಿಟಿಗಾಗಿ ಉದಯವಾಣಿ ಸಂಸ್ಥೆ ಪಡೆದಿರುವ ಪ್ಯಾಕೇಜ್ ಮೊತ್ತ ಬರೋಬ್ಬರಿ ಹದಿನೈದು ಲಕ್ಷ ರೂಪಾಯಿಗಳು. ಪರಿಸ್ಥಿತಿ ಹೀಗಿರುವಾಗ ಪ್ರಚಾರವೆಂಬುದು ಹಣವುಳ್ಳ ನಿರ್ಮಾಪಕರಿಗೆ ಮಾತ್ರ ಸಾಧ್ಯವಾಗುತ್ತಿದೆ. ಇವತ್ತಿನ ದಿನದಲ್ಲಿ ಸಿನಿಮಾ ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿ ಸಿನಿಮಾ ಬಿಡುಗಡೆ ಮಾಡುವ ಹೊತ್ತಿಗೆ ಬರಿಗೈ ದಾಸರಾಗಿರುವ ನಿರ್ಮಾಪಕರು ಇನ್ನು ಪ್ರಚಾರಕ್ಕಾಗಿ ಈ ಪಾಟಿ ಹಣವನ್ನು ಖರ್ಚು ಮಾಡುವುದಾದರೂ ಹೇಗೆ ಸಾಧ್ಯ?

ಹೀಗಾಗಿ ಈಗಷ್ಟೇ ಚುನಾಯಿತರಾಗಿರುವ ಹಿರಿಯ ನಿರ್ಮಾಪಕ ಬಸಂತ್ ಕುಮಾರ್ ಪಾಟೀಲ್ ನೇತೃತ್ವದ ಫಿಲಂ ಛೇಂಬರ್‌ನವರು ಕನ್ನಡ ಸಿನಿಮಾಗಳ ಪ್ರಚಾರಕ್ಕಾಗಿ ನಿಗದಿತವಾದ, ಎಲ್ಲರಿಗೂ ಎಟುಕುವಂಥ ಒಂದಷ್ಟು ವ್ಯವಸ್ಥೆ ಕಲ್ಪಿಸಬೇಕಾಗಿದೆ. ●

...ೇಂಬರ್‌ಗೀಗ 'ಬಸಂತ'ಕಾಲ

...ಇಡೀ ಗಾಂಧಿನಗರದ ನಿರೀಕ್ಷೆಯಂತೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಬಸಂತ್‌ಕುಮಾರ್ ...ಲ್ ಮತ್ತು ಅವರ ತಂಡ ಆಯ್ಕೆಯಾಗಿದೆ. ಇದರಿಂದ ಉದ್ಯಮದೊಳಗೆ ನುಸುಳಲು ಹೊಂಚುಹಾಕಿ ...ದ್ದ ಚಿಡ್ಡಿಗಳಿಗೆ ದೊಡ್ಡ ಆಘಾತವಾಗಿದೆ. ಅಷ್ಟರಮಟ್ಟಿಗೆ ಉದ್ಯಮದವರು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ. ...ಬಸಂತ್‌ಕುಮಾರ್ ಪಾಟೀಲರು ಈ ಹಿಂದೆ ಎರಡು ಬಾರಿ ಚೇಂಬರ್ ಚುನಾವಣೆಗೆ ಸ್ಪರ್ಧಿಸಿದಾಗ ಇದೇ ...ದಾರರು ಅವರನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದ್ದರು.

...ಈಗ 2-3 ವರ್ಷಗಳ ಕಾಲಾವಧಿಯಲ್ಲಿ ಗಾಂಧಿನಗರದಲ್ಲಿ ಸಾಕಷ್ಟು ನೀರು ಹರಿದಿದೆ. ಹೀಗಾಗಿ ಅಂದು ...ನಾಯಕ ಎನಿಸಿದ ಪಾಟೀಲರು, ಇಂದು ಉದ್ಯಮದವರ ಪಾಲಿಗೆ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ...ಲ್ಲಾ ಮುಖ್ಯಕಾರಣ ಉದ್ಯಮದ ಬಹುತೇಕ ಮತದಾರರನ್ನು ತಮ್ಮ ಬಿಗಿಯಾದ ಕಪಿ ಮುಷ್ಟಿಯಲ್ಲಿ ...ಟುಕೊಂಡಿರುವ ಥಾಮಸ್ ಡಿಸೋಜಾ ಮತ್ತು ಸಾ.ರಾ. ಗೋವಿಂದು ಪಾಟೀಲರನ್ನು ಬೆಂಬಲಿಸಿದ್ದು. ಈ ...ವನ್ನು ಸ್ವತಃ ಪಾಟೀಲರೇ ಚುನಾವಣೆಯಲ್ಲಿ ಗೆದ್ದ ನಂತರ ತಮ್ಮ ಮೊದಲ ಭಾಷಣದಲ್ಲಿ ಹೇಳಿದ್ದಾರೆ.

...ಈಗ ಪ್ರಶ್ನೆ ಅದಲ್ಲ, ಉದ್ಯಮವನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಗೆ ಪಾಟೀಲರು ಪರಿಹಾರಗಳನ್ನು ...ಕಬೇಕಾಗಿದೆ. ವಿಜಯೋತ್ಸಾಹವನ್ನು ವರ್ಷವಿಡೀ ಆಚರಿಸುವ ಬದಲು ಆದಷ್ಟು ಬೇಗ ಪಾಟೀಲರು ...ಒಂದೇ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಥಾಮಸ್ ಡಿಸೋಜ ಮತ್ತು ...ಗೋವಿಂದು ಅವರನ್ನಷ್ಟೇ ನಂಬಿ ಕುಳಿತುಕೊಳ್ಳದೇ ಉದ್ಯಮದ ಅನೇಕ ಅನುಭವಿಗಳನ್ನು ಕೂಡಾ ಪಾಟೀಲರು ...ೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಈಗಷ್ಟೇ ಅಧಿಕಾರದ ಚುಕ್ಕಾಣಿ ಹಿಡಿದಿರುವ ಪಾಟೀಲರಿಗೆ ನಮ್ಮ ...ಮಾತು. ●

ವಿಜಿಗೆ ಅಮೂಲ್ಯ ಜೋಡಿಯಂತೆ...



ಗೊಳಿಯಂತಿರುವ ದುನಿಯಾ ವಿಜಿ ಜೊತೆಗೆ ಮುದ್ದು ಮೊಲದಂತಿರುವ ಅಮೂಲ್ಯ ನಾಯಕಿಯಾಗಿ ನಟಿಸುತ್ತಿದ್ದಾಳಂತೆ....

ಸಾಯಿಪ್ರಕಾಶ್, ಮೆಂಟಲ್ ಅರ್ಜುನ್ ಮುಂತಾದವರೊಂದಿಗೆ ಅಸೋಸಿಯೇಟ್ ಆಗಿ ಕೆಲಸ ಮಾಡಿದ್ದ ಮಹೇಂದರ್ ಎಂಬ ಯುವಕ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು ಇನ್ನೂ ಸಿನಿಮಾಕ್ಕೆ ಹೆಸರಿಟ್ಟಿಲ್ಲ.

ಈ ಚಿತ್ರಕ್ಕೆ 'ಗಿಳಿಯೊಂದಿಗೆ ಗಿಡುಗ' ಎಂಬ ಟೈಟಲ್ ಇಟ್ಟರೆ ಚೆಂದ ಎಂದು ಗಾಂಧಿನಗರದ ಮಂದಿ ಮಹೇಂದರ್‌ಗೆ ಉಚಿತ ಸಲಹೆ ನೀಡುತ್ತಿರುವುದು ಸುಳ್ಳಲ್ಲವಂತೆ!




ಜೈ-ವಿಜಯ ಕೋಮಲ!

ಮರಳಿ ಪ್ರಯತ್ನವ ಮಾಡು ಎಂಬ ಮಂತ್ರಕ್ಕೆ ಶರಣಾಗಿದ್ದಾರೆ ನಿರ್ದೇಶಕಿ ವಿಜಯಲಕ್ಷ್ಮಿಸಿಂಗ್ ಮತ್ತು ನಿರ್ಮಾಪಕ ಜೈಜಗದೀಶ್. ಈ ತಾರಾ ದಂಪತಿಗಳು ಮಾಡಿರುವ ಚಿತ್ರಗಳೆಲ್ಲಾ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿ ಇಬ್ಬರನ್ನೂ ಚಿಂತೆಗೀಡುಮಾಡಿವೆ. ಆದರೂ ವಿಜಯಲಕ್ಷ್ಮಿಸಿಂಗ್ ಮತ್ತು ಜೈಜಗದೀಶ್ ಅವರ ಆತ್ಮಸ್ಥೈರ್ಯ ಮತ್ತು ಬದ್ಧತೆಯನ್ನು ಮೆಚ್ಚಲೇಬೇಕು. "ನಮಗೆ ಸಿನಿಮಾ ಬಿಟ್ಟು ಬೇರೇನೂ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ನಾವು ಸೋತರೂ ಗೆದ್ದರೂ ಸಿನಿಮಾವನ್ನೇ ಮಾಡುತ್ತೇವೆ" ಎಂದು ನಂಬಿದ್ದಾರೆ. ಅದರಂತೆ ಈಗ 'ವಾರೆವ್ಹಾ' ಎಂಬ ಹೊಸಚಿತ್ರ ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದಲ್ಲಿ ಎಂದಿನಂತೆ ವಿಜಯಲಕ್ಷ್ಮಿಸಿಂಗ್ ನಿರ್ದೇಶನದ ಜವಾಬ್ದಾರಿಯನ್ನು ವಹಿಸಿಕೊಂಡರೆ ಜೈಜಗದೀಶ್ ನಿರ್ಮಾಣದ ಕೆಲಸದಲ್ಲಿ ಓಡಾಡುತ್ತಿದ್ದಾರೆ. ಈ ಚಿತ್ರದ ನಾಯಕನಾಗಿ ಕೋಮಲ್ ಆಯ್ಕೆಯಾಗಿದ್ದಾರೆ.

ಇಲ್ಲೊಂದು ವಿಶೇಷತೆಯೆಂದರೆ ಮೊದಲ ಚಿತ್ರಕ್ಕೆ ವಿಷ್ಣುವರ್ಧನ್, ಅನಂತರ ಆದಿತ್ಯ, ಆದಾದನಂತರ ಶ್ರೀನಗರ ಕಿಟ್ಟಿಯನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದ ಮುನ್ನಿ-ಜೈ ಜೋಡಿ ಈ ಬಾರಿ ಹಾಸ್ಯನಟ ಕೋಮಲ್‌ನನ್ನು ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿರುವುದು. ವಿಷ್ಣು, ಕಿಟ್ಟಿ, ಆದಿತ್ಯ ಮಾಡಲಾಗದ ಮ್ಯಾಜಿಕ್‌ಅನ್ನು ಹಾಸ್ಯನಟ ಕೋಮಲ್ ಮಾಡಿಯಾರೇ? ಇದರಿಂದ ಈ ತಾರಾದಂಪತಿಗಳು ಮತ್ತೆ ನಗುನಗುತ್ತಾ ಓಡಾಡುವಂತಾಗುತ್ತಾರೆಯೇ? ಕಾದುನೋಡಬೇಕು.

'ಸಂದೇಶ' ಬರುತ್ತಿದೆ ಮತ್ತೆ....



ಮೊನ್ನೆಮೊನ್ನೆಯಷ್ಟೇ ವಿಧಾನ ಪರಿಷತ್‌ಗೆ ಸದಸ್ಯರಾಗಿ ಆಯ್ಕೆಯಾದ ಸಂದೇಶ್ ನಾಗರಾಜ್ ಇನ್ನು ಮುಂದೆ ಚಿತ್ರರಂಗದವರಿಗೆ ಕೈಗೆಟುಕುವುದಿಲ್ಲವೆಂದೇ ಎಲ್ಲರೂ ಭಾವಿಸಿದ್ದರು. ಆದರೆ ಗಾಂಧಿನಗರದ ಜನರ ಈ ನಿರೀಕ್ಷೆಯನ್ನು ಹುಸಿಮಾಡಿ ಸಂದೇಶ್ ನಾಗರಾಜ್ ಹಿಂದೆಂದಿಗಿಂತಲೂ ಹೆಚ್ಚು ಸಕ್ರಿಯವಾಗಿ ತಮ್ಮನ್ನು ತಾವು ಸಿನಿಮಾ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಒಂದೆಡೆ ಅರ್ಪಿತ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ತುಂಟ-ತುಂಟಿ' ಚಿತ್ರದ ಚಿತ್ರೀಕರಣ ಬಿರುಸಿನಿಂದ ಸಾಗುತ್ತಿದ್ದರೆ, ಮತ್ತೊಂದೆಡೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ಓಂಪ್ರಕಾಶ್ ಜೋಡಿಯ ಹೊಸ ಚಿತ್ರವನ್ನು ಸಂದೇಶ್ ಆರಂಭಿಸಲಿದ್ದಾರೆ. ಈ ಚಿತ್ರಗಳ ಜೊತೆಜೊತೆಗೆ ವಿಜಯ್ ನಾಯಕನಾಗಿ ನಟಿಸಲಿರುವ ಚಿತ್ರವೊಂದನ್ನು ಎಸ್.ಮಹೇಂದರ್ ನಿರ್ದೇಶನದಲ್ಲಿ ಆರಂಭಿಸುತ್ತಿದ್ದಾರೆ. ಅಲ್ಲಿಗೆ ಏಕಕಾಲದಲ್ಲಿ ಮೂರು ಚಿತ್ರಗಳ ನಿರ್ಮಾಣದ ಸಾರಥ್ಯವನ್ನು ಸಂದೇಶ ನಾಗರಾಜ್ ವಹಿಸಿಕೊಂಡಂತಾಯ್ತು.

ನಮಗೆ ಬಂದಿರುವ ಸುದ್ದಿ ಪ್ರಕಾರ ಇನ್ನೊಂದು ಅದ್ದೂರಿ ಬಜೆಟ್‌ನ ಚಿತ್ರವನ್ನು ಸಂದೇಶ್ ಈ ವರ್ಷವೇ ಕೈಗೆತ್ತಿಕೊಳ್ಳಲಿದ್ದಾರಂತೆ. ಆ ಚಿತ್ರಕ್ಕೆ ಬಹುಶಃ ಪುನೀತ್ ನಾಯಕನಟನಿರಬಹುದೇನೋ ಎಂಬುದು ನಮ್ಮ ನಿರೀಕ್ಷೆ. ಅಂತೂಇಂತೂ ಕ್ರೇಜಿಸ್ಟಾರ್ ರವಿಚಂದ್ರನ್ ಜೊತೆ ಟೂಬಿಟ್ಟ ನಂತರ ಉದ್ಯಮದಿಂದ ದೂರವಾಗಿದ್ದ ಸಂದೇಶ್ ನಾಗರಾಜ್ ಈಗ ಹೊಸ ಉತ್ಸಾಹದಲ್ಲಿ ಕಾರ್ಯೋನ್ಮುಖರಾಗಿರುವುದು ಸಂತೋಷ...



ಅತಂತ್ರ ಭರಣ!

ಚಲನಚಿತ್ರ ಅಕಾಡೆಮಿಯ ಮೊದಲ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿರುವ ನಾಗಾಭರಣ ಅವರ ಕುರ್ಚಿ ಅಲುಗಾಡುತ್ತಿದೆ. ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ನಿರ್ದೇಶಕರ ಸಂಘದಲ್ಲೇ ಒಂದು ಗುಂಪು ತೆರೆಮರೆಯಲ್ಲಿ ಬಹಳ ಚಟುವಟಿಕೆಯನ್ನು ಮಾಡುತ್ತಿದೆ. ನಿರ್ದೇಶಕರ ಸಂಘದ ಅಧ್ಯಕ್ಷ ರಾಜೇಂದ್ರಸಿಂಗ್ ಬಾಬು ಸಮೇತ ಅನೇಕ ನಿರ್ದೇಶಕರಿಗೆ ಭರಣರ ಬಗ್ಗೆ ಯಾವುದೇ ನಂಬಿಕೆ ಇಲ್ಲವಂತೆ! ಹೀಗಾಗಿ ನಿರ್ದೇಶಕರ ಸಂಘದಲ್ಲಿ ಅವರ ಎತ್ತಂಗಡಿಯ ಕಾರ್ಯಾಚರಣೆ ಈಗಾಗಲೇ ಆರಂಭವಾಗಿದೆ. ಅಕಾಡೆಮಿಯ ಅಧ್ಯಕ್ಷ ನಾಗಾಭರಣರ ಮೂಗಿಗೆ ಈ ಭಿನ್ನಮತೀಯರ ಚಟುವಟಿಕೆಯ ವಾಸನೆ ಬಡಿದಿದೆ. ಹೀಗಾಗಿ ಅವರು ಕೂಡಾ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲೇಬೇಕು ಎಂದು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ. ಅವರು ಕೂಡಾ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲೇಬೇಕು ಎಂದು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ. ಅಕಾಡೆಮಿಯ ಯಾವುದೇ ಸಮಾರಂಭಕ್ಕೆ ಯಾವುದೇ ನಿರ್ದೇಶಕರು ಹಾಜರಾಗುತ್ತಿಲ್ಲದಿರುವುದು ಈಗ ಇಡೀ ಗಾಂಧಿನಗರದಲ್ಲಿ ಚರ್ಚೆಯ ವಿಷಯವಾಗಿದೆ. ಅಂತೂಇಂತೂ ಸದ್ಯದಲ್ಲೇ ಗಾಂಧಿನಗರದ ನಿರ್ದೇಶಕರ ಈ ಎರಡು ಗುಂಪುಗಳಿಂದಾಗಿ ಎಲ್ಲರಿಗೂ ಪುಕ್ಕಟೆ ಮನೋರಂಜನೆ ದೊರೆಯುವುದು ಗ್ಯಾರಂಟಿ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 26-05-2010



ತಂತ್ರಜ್ಞರೇ ಹೀರೋಗಳು....

ಪ್ರಕಾಶ್ ರೈ ತನ್ನ 'ನಾನು ನನ್ನ ಕನಸು' ಚಿತ್ರದಲ್ಲಿ ಸದ್ದಿಲ್ಲದೆ ಒಂದು ಸಣ್ಣ ಕ್ರಾಂತಿಯನ್ನು ಮಾಡಿದ್ದಾರೆ. ಅದೇನೆಂದರೆ ಚಿತ್ರದ ಆರಂಭದಲ್ಲಿ ಬರುವ ಟೈಟಲ್ ಕಾರ್ಡ್‌ನಲ್ಲಿ ತನ್ನನ್ನು ಸೇರಿದಂತೆ ಯಾವುದೇ ಕಲಾವಿದರ ಹೆಸರುಗಳನ್ನು ಹಾಕಿಸಿಲ್ಲ, ಕಲಾವಿದರ ಹೆಸರುಗಳ ಬದಲಿಗೆ ಚಿತ್ರದ ತಂತ್ರಜ್ಞರ ಹೆಸರುಗಳನ್ನು ರೈ ಅಲ್ಲಿ ತೋರಿಸಿದ್ದಾರೆ. ಆ ಮೂಲಕ ತಂತ್ರಜ್ಞರ ಕೊಡುಗೆಗೆ ತನ್ನದೇ ಆದ ರೀತಿಯಲ್ಲಿ ಗೌರವವನ್ನು ಸೂಚಿಸಿದ್ದಾರೆ. ಒಬ್ಬ ಮಹಾನ್ ಕಲಾವಿದ ಈ ರೀತಿ ತೆರೆಮರೆಯಲ್ಲಿರುವ ತಂತ್ರಜ್ಞರ ಕೊಡುಗೆಯನ್ನು ಗುರುತಿಸಿರುವುದು ಆಶ್ಚರ್ಯವೇ ಸರಿ. ನಾಯಕ-ನಾಯಕಿಯರ ಅಬ್ಬರ ಮತ್ತು ಹಾರಾಟದ ಗಲಾಟೆಯಲ್ಲಿ ಅವರನ್ನೇ ವೈಭವೀಕರಿಸುವ, ಅವರನ್ನೇ ದೇವಮಾನವರೆಂದು ಬಿಂಬಿಸುವ ನಮ್ಮ ನಿರ್ದೇಶಕರು ಒಮ್ಮೆ ಪ್ರಕಾಶ್ ರೈಯತ್ತ ತಿರುಗಿ ನೋಡಲಿ...

ಯಾವುದೇ ಚಿತ್ರದ ಯಶಸ್ಸಿಗೆ ನಿರ್ದೇಶಕ ಮತ್ತು ತಂತ್ರಜ್ಞರ ಕೊಡುಗೆಯೇ ಕಲಾವಿದರ ನಟನೆಗಿಂತ ಬಹಳ ದೊಡ್ಡದು ಎಂಬುದು ಜನಸಾಮಾನ್ಯರಿಗೆ ತಿಳಿಸುವತ್ತ ರೈಯ ಈ ಹೆಜ್ಜೆ ಅರ್ಥಪೂರ್ಣ...

ಮೂರ್ಮೂರು ಪಿಚ್ಚರ್ರು

ಈ ವಾರ ಮತ್ತೊಮ್ಮೆ ಮೂರು ಚಿತ್ರಗಳು ಬಿಡುಗಡೆಯಾಗಲಿವೆ. ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗಳೇ ಪೈಪೋಟಿ ಮತ್ತು ಅಡ್ಡಿಯಾಗುವ ಈ ಸಂಪ್ರದಾಯ ಹೊಸ ಅಧ್ಯಕ್ಷ ಪಾಟೀಲರನ್ನು ವಿಶಿಷ್ಟ ರೀತಿಯಲ್ಲಿ ಸ್ವಾಗತಿಸಿದಂತಿದೆ.

ಪ್ರಕಾಶ್ ರೈ ನಿರ್ದೇಶನದ 'ನಾನು ನನ್ನ ಕನಸು', ರಮೇಶ್ ಅರವಿಂದ್ ನಟಿಸಿರುವ ಗುಣ ಎಂಬ ಯುವ ನಿರ್ದೇಶಕನ 'ಪ್ರೀತಿಯಿಂದ ರಮೇಶ್' ಮತ್ತು ಪ್ರಜ್ವಲ್ ದೇವರಾಜ್ ಹಾಗು ಅಂದ್ರಿತಾ ರೇ ನಟಿಸಿರುವ 'ನನ್ನವನು' ಹೀಗೆ ಮೂರು ಚಿತ್ರಗಳು ಈ ವಾರ ತೆರೆ ಕಾಣುತ್ತಿವೆ. ಇದರಲ್ಲಿ ವಿಶೇಷವೆಂದರೆ 'ನಾನು ನನ್ನ ಕನಸು' ಚಿತ್ರದ ಮುಖಾಂತರ ಪ್ರಕಾಶ್ ರೈ ನಿರ್ದೇಶಕನಾಗಿ ಬ್ರೇಕ್ ನಿರೀಕ್ಷಿಸಿದರೆ, 'ಪ್ರೀತಿಯಿಂದ ರಮೇಶ್' ಚಿತ್ರದ ಮೂಲಕ ರಮೇಶ್ ಪುನರ್ಜನ್ಮವನ್ನು ನಿರೀಕ್ಷಿಸಿದ್ದಾರೆ. ಪ್ರಜ್ವಲ್ ದೇವರಾಜ್‌ಗೆ ಕೂಡ 'ನನ್ನವನು' ಚಿತ್ರದ ಮುಖಾಂತರ ಸೋಲಿನ ಸರಪಳಿಯಿಂದ ತಾನು ಹೊರಬರುತ್ತೇನೆಂಬ ನಿರೀಕ್ಷೆಯಲ್ಲಿದ್ದಾರೆ.

ಹೀಗೆ ಬೇರೆ ಬೇರೆ ಕಾರಣಗಳಿಗೆ ಈ ಮೂರು ಚಿತ್ರಗಳ ಯಶಸ್ಸು ಅವರವರಿಗೆ ಮುಖ್ಯವಾಗಿದೆ. ಆದರೆ ಒಂದೇ ವಾರ ಈ ಚಿತ್ರಗಳು ತೆರೆ ಕಾಣುವುದರಿಂದ ಮೂವರಿಗೂ ತೊಂದರೆಯಾಗುವುದಂತೂ ಗ್ಯಾರಂಟಿ. ಕನ್ನಡ ಚಿತ್ರರಂಗದಲ್ಲಿ ಉಂಟಾಗುವ ಇಂತಹ 'ಪ್ರಕೃತಿ' ವಿಕೋಪವನ್ನು ಪಾಟೀಲರು ಇನ್ನು ಮುಂದೆಯಾದರೂ ತಡೆಯುವಂತಾಗಲಿ ಎಂಬುದು ನಿರೀಕ್ಷೆ....

ಶಿವಣ್ಣನ ಸಿನಿಮಾ ಸಾಹಸ



ಕ್ರಿಕೆಟ್‌ನಲ್ಲಿ ಒಬ್ಬ ಬ್ಯಾಟ್ಸ್‌ಮನ್ 100ರ ಗಡಿ ದಾಟಿದ ನಂತರ ಹೇಗೆ ಬಿರುಸಿನಿಂದ ಹೊಡೆತಗಳನ್ನು ಆರಂಭಿಸುತ್ತಾನೋ ಅದನ್ನು ನೆನಪಿಸುವ ರೀತಿಯಲ್ಲಿ ನಾಯಕ ನಟ ಶಿವರಾಜ್‌ಕುಮಾರ್ ಈಗ ತಮ್ಮ 100ನೇ ಚಿತ್ರ 'ಜೋಗಯ್ಯ'ನ ನಂತರ ಸಾಗುತ್ತಿದ್ದಾರೆ.

ಶಿವರಾಜ್‌ಕುಮಾರ್ ಮದ್ರಾಸಿನ ದೇವರ್ ಫಿಲಂಸ್ ಸಂಸ್ಥೆಯಿಂದ ತಂದಿರುವ ಟಗರಿನ ಜೊತೆ 'ಮೈಲಾರಿ' ಚಿತ್ರಕ್ಕಾಗಿ ಹೊಡೆದಾಟದಲ್ಲಿ ಸದ್ಯಕ್ಕೆ ಮಗ್ನರಾಗಿದ್ದಾರೆ. ಅದು ಅಭಿಮಾನಿಗಳ ಪಾಲಿಗೆ ರೋಚಕ ವಿಷಯ. ಯಾಕೆಂದರೆ 'ಗಂಧದ ಗುಡಿ ಭಾಗ-2' ಚಿತ್ರದಲ್ಲಿ ಪ್ರಾಣಿ ಜೊತೆ ಹೊಡೆದಾಟದ ದೃಶ್ಯದಲ್ಲಿ ಕಾಣಿಸಿಕೊಂಡ ಶಿವರಾಜ್‌ಕುಮಾರ್ ಈಗ ಅದನ್ನೇ ರಿಪೀಟ್ ಮಾಡುತ್ತಿದ್ದಾರೆ. ಗಣೇಶ್ ಮಳೆಯಲಿ ತೋಯುತ್ತಿದ್ದರೆ, ದರ್ಶನ್ ಲಾಂಗ್ ಮಚ್ಚು ಝಳಪಿಸುತ್ತಿದ್ದರೆ, ಅಪ್ಪು ಅದೇ ರೌಡಿಗಳ ಜೊತೆ ಫೈಟ್ ಮಾಡುತ್ತಿದ್ದರೆ ಶಿವರಾಜ್‌ಕುಮಾರ್ ಒಂದು ಹೆಜ್ಜೆ ಮುಂದೆ ಹೋಗಿ ಪ್ರಾಣಿಗಳ ಜೊತೆ ಹೊಡೆದಾಡುತ್ತಾ He-man ಎನಿಸಿಕೊಂಡಿದ್ದಾರೆ.

ಅಷ್ಟೇ ಅಲ್ಲ ಮೊನ್ನೆ ಇನೋವೇಟಿವ್ ಫಿಲ್ಮ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಡೀ ಉದ್ಯಮದ ಜನರು ಬೆಚ್ಚಿ ಬೀಳುವ ರೀತಿಯಲ್ಲಿ ಶಿವರಾಜ್‌ಕುಮಾರ್ 'ಎಂಟ್ರಿ' ನೀಡಿದ್ದರು. ಸುಮಾರು 20 ಮೀಟರು ಎತ್ತರದಿಂದ ರೋಪ್ ಮೂಲಕ ಶಿವರಾಜ್‌ಕುಮಾರ್ ಇಳಿದು ಬಂದದ್ದು ನಿಜಕ್ಕೂ ರೋಮಾಂಚನಕಾರಿಯಾಗಿತ್ತು, ಒಬ್ಬ ಸಾಹಸ ಕಲಾವಿದ ಕೂಡಾ ಮಾಡಲು ಹಿಂಜರಿಯುವ ಈ ಕಸರತ್ತನ್ನು ನಾಯಕನಟ ಶಿವರಾಜ್‌ಕುಮಾರ್ ಯಾವುದೇ ಅಳುಕಿಲ್ಲದೇ ಮಾಡಿ ತೋರಿಸಿ ತನ್ನಲ್ಲಿರುವ ಉತ್ಸಾಹ ಮತ್ತು ಹೊಸತನಕ್ಕೆ ಸ್ಪಂದಿಸುವ ಇಚ್ಛೆಯನ್ನು ಪ್ರದರ್ಶಿಸಿದರು. 48ರ ಆಜುಬಾಜಿನಲ್ಲಿರುವ, 100 ಸಿನಿಮಾಗಳ ಗಡಿಯನ್ನು ದಾಟಿರುವ ಈ ನಾಯಕ ನಟ ಪ್ರಶಸ್ತಿ ಸಮಾರಂಭದಲ್ಲಿ ಕಾಣಿಸಿಕೊಳ್ಳಲು ಇಷ್ಟೊಂದು ರಿಸ್ಕ್ ತೆಗೆದುಕೊಳ್ಳುತ್ತಾರೆಂದರೆ ಇನ್ನು ಸಿನಿಮಾಕ್ಕಾಗಿ ಯಾವ ತರಹದ ತ್ಯಾಗ ಮಾಡುತ್ತಾರೆಂಬುದನ್ನು ನೀವೇ ಊಹಿಸಿ.

ತಮ್ಮ ಸಮಕಾಲೀನರಾದ ಇತರೆ ನಟರು ವೇದಿಕೆಯ ಮೆಟ್ಟಿಲನ್ನು ಏರಲು ಏದುಸಿರು ಬಿಡುತ್ತಿರುವಾಗ ಶಿವರಾಜ್‌ಕುಮಾರ್ ಆಕಾಶದಿಂದ ಹಾರಿ ಬಂದು ತನ್ನಲ್ಲಿನ್ನೂ ಸಾಹಸ ಮನೋಭಾವ ಹಾಗೆಯೇ ಉಳಿದಿದೆ ಎಂದು ತೋರಿಸಿದ್ದು ಮೆಚ್ಚುವಂತದ್ದು.

ಅಷ್ಟೇ ಯಾಕೆ, ಮೊನ್ನೆ ಮೊನ್ನೆ 'ದೇವರ ಕೊಟ್ಟ ತಂಗಿ' ಚಿತ್ರದ ನಿರ್ದೇಶಕ ಕಮ್ ನಿರ್ಮಾಪಕ ಸಾಯಿಪ್ರಕಾಶ್ ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಶಿವರಾಜ್‌ಕುಮಾರ್ ಹೇಳಿದ್ದು ಇಲ್ಲಿ ಪ್ರಸ್ತಾಪಿಸಲೇ ಬೇಕು.


"ಈ ಚಿತ್ರದ ಒಂದು ದೃಶ್ಯಕ್ಕಾಗಿ ನೈಜತೆ ಮೂಡಿಬರಲಿ ಎಂದು ನಿರ್ದೇಶಕ ನನಗೆ ನದಿಯ ಮಧ್ಯೆ ಮುಳುಗಲು ಹೇಳಿದಾಗ ನಾನು ಜೀವದ ಹಂಗು ತೊರೆದು ಅದನ್ನು ಮಾಡಲಿಲ್ಲವೇ? ಇಷ್ಟಾಗಿಯೂ ಚಿತ್ರ ಸೋತರೆ ನಾನೇನು ಮಾಡಲಿ?" ಎಂದು ಹೇಳಿದ್ದರು. ಇಲ್ಲಿ ಶಿವರಾಜ್‌ಕುಮಾರ್ ನಿರ್ದೇಶಕರ ಕಲ್ಪನೆಗೆ ತಕ್ಕಂತೆ ನೀರಿನಲ್ಲಿ ಮುಳುಗಿ ಸಾಹಸ ದೃಶ್ಯದಲ್ಲಿ ಕಾಣಿಸಿಕೊಂಡಿದ್ದು ಒಂದು ಆದರ್ಶಪ್ರಾಯದ ವಿಷಯವಾಗಿದೆ.

ಇಂತಹ ಕಾರಣಕ್ಕಾಗಿಯೇ ಏನೋ ಶಿವರಾಜ್‌ಕುಮಾರ್ ಎಂದರೆ ನಿರ್ಮಾಪಕರಿಗೆ ಅಚ್ಚುಮೆಚ್ಚು, ಮೊನ್ನೆ 'ಮೈಲಾರಿ' ಚಿತ್ರದ ಚಿತ್ರೀಕರಣ ಚಿತ್ರ ಕಲಾಪರಿಷತ್‌ನ ಆವರಣದಲ್ಲಿ ನಡೆಯುತ್ತಿದ್ದಾಗ ಒಂದು ಅಪರೂಪದ ಘಟನೆ ನಡೆಯಿತು. ಅದೇನೆಂದರೆ ಶಿವಣ್ಣನ ಕಾಲ್‌ಶೀಟ್ ಕೇಳಿಕೊಂಡು ಮೂವರು ನಿರ್ಮಾಪಕರು ಅಲ್ಲಿಗೆ ಬಂದಿದ್ದರು. ಒಂದೊಂದು ಟೇಬಲ್‌ನಲ್ಲಿ ಒಬ್ಬೊಬ್ಬ ನಿರ್ಮಾಪಕರು ಸೂಟ್‌ಕೇಸ್ ಹಿಡಿದು ಕಾದಿದ್ದರು. ಅಂದು ಅರ್ಧಗಂಟೆಯೊಳಗೆ ಮೂವರೊಂದಿಗೆ ಮಾತನಾಡಿ, ಅವರಿಗೆ ಕಾಲ್‌ಶೀಟ್ ನೀಡಿ, ಸಹಿ ಹಾಕಿ ಒಂದೂವರೆ ಕೋಟಿ ರೂ. ಅಡ್ವಾನ್ಸ್ ಜೇಬಿಗಿಳಿಸಿ ಒಂದು ಅಪರೂಪದ ಸಾಧನೆ ಮಾಡಿದರು. ಬಹುಶಃ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಹೀಗೊಂದು ಘಟನೆ ನಡೆದಿರಲಿಕ್ಕಿಲ್ಲ.

ಶಿವಣ್ಣನ ಕಾಲ್‌ಶೀಟ್ ಪಡೆದ ಆ ಮೂವರು ನಿರ್ಮಾಪಕರೆಂದರೆ ಕೆನಡಾ ಯಾನೆ ಎಡಕಲ್ಲು ಗುಡ್ಡದ ಖ್ಯಾತಿ ಚಂದ್ರು. ಇವರ ನಿರ್ದೇಶನದ ಸಿನಿಮಾದ ಚಿತ್ರೀಕರಣ ಸಂಪೂರ್ಣವಾಗಿ ಕೆನಡಾದಲ್ಲೇ ನಡೆಯಲಿದೆಯಂತೆ. ಮತ್ತೊಂದು ಚಿತ್ರದ ಹೆಸರು 'ಕ್ಷತ್ರಿಯ'. ಇದನ್ನು ನಿರ್ಮಿಸುತ್ತಿರುವವರು ತೆಲುಗಿನ ನಿರ್ಮಾಪಕ. ನಿರ್ದೇಶಕ ಬದ್ರಿ. 103ನೇ ಚಿತ್ರಕ್ಕೆ ಕಾಲ್‌ಶೀಟ್ ಪಡೆದ ನಿರ್ಮಾಪಕ ಕುಮಾರಸ್ವಾಮಿ (ಹೆಚ್.ಡಿ.ಕುಮಾರಸ್ವಾಮಿಯಲ್ಲ). ಈ ಚಿತ್ರದ ಹೆಸರು 'ಬೆಳ್ಳಿ'.

ಶಿವರಾಜ್‌ಕುಮಾರ್ ಇಷ್ಟೆಲ್ಲಾ ಬೇಡಿಕೆಯಲ್ಲಿರಲು ಮುಖ್ಯಕಾರಣ ಅವರ ಶಿಸ್ತುಬದ್ಧ ಜೀವನ, ವೃತ್ತಿಪರತೆ ಮತ್ತು ಕಾಪಾಡಿಕೊಂಡು ಬಂದಿರುವ ಮೈಕಟ್ಟು. ಈ ಕಾರಣದಿಂದಲೇ ಅವರು 100 ಚಿತ್ರಗಳ ಗಡಿ ದಾಟಿದ್ದರೂ ಅವರು ಗಾಂಧಿನಗರದ ಜನರಿಗೆ ಹಳಸಲಾಗಿಲ್ಲ; ಹಾಗೆಯೇ ಗಗನ ಕುಸುಮವೂ ಆಗಿಲ್ಲ, ಸದ್ಯಕ್ಕೆ ಅವರು ನಟಿಸಿರುವ 'ಚೆಲುವೆಯೇ ನಿನ್ನ ನೋಡಲು' ಮತ್ತು 'ತಮಸ್ಸು' ಬಿಡುಗಡೆಗೆ ರೆಡಿಯಾಗಿವೆ. ಇವೆರಡು ಯಶಸ್ವಿಯಾದಲ್ಲಿ ಶಿವಣ್ಣನ ಬೇಡಿಕೆ ಗಾಂಧಿನಗರದಲ್ಲಿ ಇನ್ನಷ್ಟು ಹೆಚ್ಚಾಗಬಹುದು. ಅದೇನೇ ಇರಲಿ, 100ನೇ ಚಿತ್ರ ಇನ್ನೂ ಆರಂಭವಾಗುವ ಮೊದಲೇ ಶಿವರಾಜ್‌ಕುಮಾರ್ ಹೊಸ ಮೂರು ಚಿತ್ರಗಳಿಗೆ ಸಹಿ ಮಾಡಿ ಮುನ್ನುಗ್ಗುತ್ತಿರುವುದು ಅವರ ಬಿರುಸಿನ 'ಆಟ'ವನ್ನು ತೋರಿಸುತ್ತಿದೆ.

• ಶೆಣೈ







PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar